ಸಂಶಯ ಪಿಶಾಚಿ

ನಾಟಕ

ಪುರಾಮಕೀಂಗಾನಿ

ಕಿರಿಯರ

ಪ್ರಪಂಚ

ಹರಾಮುಕೋಗಾನಿ

ತೊದಲ್ನುಡಿ ಗ್ರಂಥಮಾಲೆ ಸುಡಿ ೨

ಸಂಶಯ ಪಿಶಾಚಿ

ವಿಷಾದಾಂತ ಸಾಮಾಜಿಕ ನಾಟಕ

ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.

ಕಿರಿಯರ ಪ್ರಪಂಚ, ಉಡುಪಿ.

ಹತ್ತಾಣೆ
(62 ನಯಾಪೈಸೆ)

ಸಂಪಾದಕ

ಕೆ. ಹೊನ್ನಯ್ಯ ಶೆಟ್ಟಿ.

೧೯೩೬

೧೯೫೭

ಮುದ್ರಕರು

ನವಯುಗ ಪ್ರೆಸ್, ಉಡುಪಿ.

ಅ ರಿ ಕೆ

ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಸಮಾಜವೊಂದರಲ್ಲಿ ಹಿಂದಿನಿಂದಲೂ ನಡೆದುಕೊಂಡು ಬರುತ್ತಿರುವ ಸರ್ವಸಾಮಾನ್ಯ ದೋಷಗಳ ಚಿತ್ರವಿದು. ಇದರಲ್ಲಿ ಹಿಂದಿನ ಮತ್ತು ಇಂದಿನ ಮನೋವೃತ್ತಿಗಳ ತಿಕ್ಕಾಟವು ಒಡೆದು ಕಾಣುವಂತಿದೆ. ಈ ಚಿತ್ರದಲ್ಲಿ ಕಾಣುವ ದೋಷಗಳು ಅದೊಂದೇ ಸಮಾಜದ—ಅಲ್ಲ, ಸಕಲ ಸಮಾಜಗಳಲ್ಲಿಯೂ ಸದಾ ಕಾಣುವಂಥವುಗಳೇ.

ಇದು ಕವೀಂದ್ರ ರವೀಂದ್ರರ **ಶಾಂತಿನಿಕೇತನ**ದ ವಿದ್ಯಾರ್ಥಿಗಳಾಗಿದ್ದ **ಶ್ರೀ ಕೆ. ಕಾಂತಪ್ಪ ಶೆಟ್ಟ**ರಿಂದ ಬರೆಯಲ್ಪಟ್ಟಿತು. ಶ್ರೀ. ಶೆಟ್ಟರು ಹತ್ತು ಹಲವು ಬಗೆಗಳಿಂದ ಸಮಾಜ ಸುಧಾರಣೆಗೆ ಪ್ರಯತ್ನಿಸುವವರಲ್ಲಿ ಒಬ್ಬರು. ಇವರಿಂದ ಬರೆಯಲ್ಪಟ್ಟ ಸಾಮಾಜಿಕ ನಾಟಕಗಳಲ್ಲಿ ಹಲವು ಈಗಾಗಲೇ ರಂಗಭೂಮಿಗೆ ಬಂದು ಜನಾದರವನ್ನು ಪಡೆದಿವೆ. ಇದು ಕೂಡ ಹಲವು ಸಲ ಪ್ರದರ್ಶಿಸಲ್ಪಟ್ಟು ಜನತೆಯ ಮನ್ನಣೆಗೆ ಪಾತ್ರವಾಗಿದೆ.

ಇದರ ಹಿಂದಿನ ಪ್ರತಿಗಳು ತೀರಿದುದರಿಂದ ತಿರುಗಿ ಮುದ್ರಿಸಲಾಗಿದೆ. ಹಿಂದಿನಂತೆ ಈಗಲೂ ತಕ್ಕ ಪ್ರೋತ್ಸಾಹ ದೊರೆತೀತೆಂಬ ಭರವಸೆ ಇದೆ.

— ಪ್ರಕಾಶಕರು.

ಪಾತ್ರಪರಿಚಯ

ಪುರುಷ

ತಾರಾನಾಥ— ಕಥಾನಾಯಕ, ವಿದ್ಯಾವಂತ ಸುಧಾರಕ ತರುಣ, ಸರಳಸ್ವಭಾವಿ.

ಮನೋಹರ— ತಾರಾನಾಥನ ವಿನೋದಿಯಾದ ಮಿತ್ರ.

ದಿನಕರ, ಸುಂದರ- ತಾರಾನಾಥನ ಸಹಪಾಠಿಗಳು.

ಸಂಜೀವ— ತಾರಾನಾಥನ ದುರಾಚಾರಿಯಾದ ಭಾವ.

ಚಂದು— ಸಂಜೀವನ ತ್ರೈನಾತಿ; ಕ್ರೂರಿ.

ನಾರಾಯಣ ತಂತ್ರಿ ದೇವ ಧರ್ಮಗಳ ಹೆಸರಿಂದ ಜನರನ್ನು ಸುಲಿಯುವ ಹಳ್ಳಿಯ ಜ್ಯೋತಿಷ್ರ.

ರಂಗ— ಮನೋಹರನ ವಿನೋದಿಯಾದ ಸೇವಕ ಹುಡುಗ

ಸೋಮ— ತಾರಾನಾಥನ ಕೆಲಸದ ಹುಡುಗ.

ಕೊರಗ— ತಾರಾನಾಥನ ಒಕ್ಕಲು.

ಕೌಟುಂಬಿಕರು— ಸಂಜೀವನ ಮನೆಯ ನಿಷ್ಕರುಣಿ ಜನರು.

ಸ್ತ್ರೀ

ಇಂದಿರೆ— ಕಥಾನಾಯಕಿ, ತಾರಾನಾಥನ ಸರಳಸ್ವಭಾವದ ವಿದ್ಯಾವತಿ ಪತ್ನಿ. ಸುಧಾರಕಿ.

ಮನೋರಮೆ— ತಾರಾನಾಥನ ಮತ್ಸರಿಣಿಯಾದ ತಂಗಿ. ಸಂಜೀವನ ಪತ್ನಿ.

ತುಂಗಮ್ಮ— ತಾರಾನಾಥನ ಹಳೆಯ ಪದ್ಧತಿಯ ತಾಯಿ ವಿಧವೆ. ಅತ್ತೆ ಸೊಸೆಯರ ಕಾಳಗದಲ್ಲಿ ಇವಳು ಪ್ರವೀಣೆ.

ಸಂಶಯ ಪಿಶಾಚಿ

೧ನೇ ದೃಶ್ಯ

[ಮಂಗಳೂರಿನ ಫಳನೀರ್ ರಸ್ತೆಯ ಪಾರ್ಶ್ವದ ತನ್ನ ಮನೆಯ ಒಂದು ಕೋಣೆಯಲ್ಲಿ ಬಿ. ಎ. ವಿದ್ಯಾರ್ಥಿ ಮನೋಹರನು ತನ್ನ ಅತಿ ವಿಧೇಯ ಹಾಗೂ ವಿನೋದಪರ ಸೇವಕನಾದ ರಂಗನೊಡನೆ ಸಲ್ಲಾಪಿಸುತ್ತಿರುವನು.]

ಮನೋಹರ—ರಂಗ, ನೀನು ನನ್ನ ಕೆಲಸದಲ್ಲಿರಬೇಕಾದರೆ ನಾನು ಹೇಳಿದಂತೆ ಕೇಳಬೇಕು. ನಿನ್ನಿಚ್ಛಾನುಸಾರ ನಡೆಯುವುದಾದರೆ ಇಲ್ಲಿಂದ ಈಕ್ಷಣ ತೊಲಗಬೇಕು. (ಸಿಟ್ಟಿನ ನಟನೆಯಿಂದ ರಂಗನನ್ನು ಕಡೆಗಣ್ಣಿನಿಂದ ನೋಡಿ ನಗುವನು)

ರಂಗ—ಆಯಿತು ಸ್ವಾಮಿ, ಆಯಿತು. ನಿಮ್ಮ ಕೆಲಸಬಿಟ್ಟು ನಾನು ಈ ಕಾಲದಲ್ಲಿ ಎಲ್ಲಿಗೆ ಹೋಗಲಿ? ನಿಮ್ಮನ್ನೇ ನಂಬಿ ನಾನೊಂದು ಚಂದದ ಹುಡುಗಿಯನ್ನು ಮದುವೆ ಸಹ ಮಾಡಿಕೊಂಡದ್ದು. ನೀವೇ ನನ್ನನ್ನು ಈಗ ನಿವಾಳಿಸಿದರೆ ನನ್ನ ಗತಿಯೇನು? ನನ್ನ ಹುಡುಗಿಯ ಪಾಡೇನು?

ಮನೋಹರ—ಹ! ಹ! ಹ! ಏನು ಚಂದ! ನಿನ್ನ ಹುಡುಗಿ ಕರಿಕಾಗೆ! ನನ್ನನ್ನು ನಂಬಿ ಮದುವೆಯಾದುದಾದರೆ ನನ್ನನ್ನೇ ನಂಬಿ ನೀನೊಂದು ಕೆಲಸ ಮಾಡು. ನಿನ್ನ ಚಂದದ ಹೆಂಡತಿಯೂ ನೀನೂ ಕೈಕೈ ಹಿಡಿದು ಎತ್ತರದೊಂದು ಗುಡ್ಡದತುದಿಯನ್ನೇರಿ, ಒಬ್ಬರನ್ನೊಬ್ಬರು ಬಿಗಿದಪ್ಪಿಕೊಂಡು, ಕಣ್ಣುಮುಚ್ಚಿ, ಗುಂಡುಕಲ್ಲಿನಂತೆ ಕೆಳಗುರುಳಿಬಿಡಿ. ಆಗ ನನ್ನನ್ನು ನಂಬಿದುದಕ್ಕೆ ಸರಿ ಇಂಬು ದೊರೆಯುವುದು! ಒಬ್ಬರನ್ನೊಬ್ಬರು ನಂಬಿ ಮದುವೆಯಾಗುವುದುಂಟೇ ಹುಚ್ಚ?

ರಂಗ—ಕಪ್ಪಿನಲ್ಲಿಯೂ ಒಂದು ಚಂದವಿಲ್ಲವೆ ಸ್ವಾಮಿ? ನಮಗೆ ಬಡವರಿಗೆ ಅದೇ ಚಂದ. ನೀವು ಮೊದಲೇ ಹೀಗೆ ಹೇಳುತ್ತಿದ್ದರೆ ನಾನು ಮದುವೆ ಮಾಡಿಕೊಳ್ಳುತ್ತಿದ್ದೇ ಇಲ್ಲವಲ್ಲ! ಹುಡುಗಿಯರನ್ನು ಮದುವೆಯಾಗುವುದೆಲ್ಲಾ ಗುಡ್ಡದಿಂದ ಕೆಳಗುರುಳಬೇಕೆಂದೇ? ಹುಡುಗಿಯರ ಪ್ರೇಮದ ಬಲುಮೆಯನ್ನು ನೀವಿನ್ನೂ ಅರಿಯಲಾರಿರಿ ಸ್ವಾಮಿ. ಇನ್ನು

ಹೆಚ್ಚು ಸಮಯ ಹೋಗಲಾರದು. ನಿನ್ನೆ ಅಮ್ಮ ಹೇಳುತ್ತಿದ್ದರು........ (ನಗುವನು)

ಮನೋಹರ—(ರಂಗನ ಕಿವಿ ಹಿಡಿದು)ಅಮ್ಮ ಏನು ಹೇಳುತ್ತಿದ್ದರು? ಹೆಂಗುಸರ ಮಾತು ಕೇಳಿ ಸಿಕ್ಕಿದವರೊಡನೆ ಏನೇನೊ ಹೇಳಬೇಡ, ತಿಳಿಯಿತೇ?

ರಂಗ—(ವಿಕಾರವಾಗಿ ಕೂಗಿ) ಅಯ್ಯೊ! ಆಯಿತು ಸ್ವಾಮಿ, ಆಯಿತು! ನಾನು ಯಾರೊಡನೆಯೂ ಒಂದು ಶಬ್ದವೆತ್ತುವುದಿಲ್ಲ. ನಿಮಗೆ........

ಮನೋಹರ—(ಮೂಗು ಹಿಡಿದೆಳೆದು) ಬಾ, ಇಲ್ಲಿ ಬಾ! ಇಲ್ಲಿ ಕುಳಿತುಕೊಳ್ಳು. (ಕುರ್ಚಿಯ ಕಡೆಗೆ ಎಳೆದೊಯ್ಯುವನು).

ರಂಗ--ಅಯ್ಯಯ್ಯೊ! ಸ್ವಾಮಿ, ನೀವೇಕೆ ಹೀಗೆ ಮಾಡುತ್ತೀರಿ? ನಾನು ನಿಮ್ಮೊಂದಿಗೆ ಕುರ್ಚಿಯಲ್ಲಿ ಕುಳಿತುಕೊಂಡುದನ್ನು ನೋಡಿದರೆ ಅಮ್ಮ ನನಗೆ ಅನ್ನ ಹಾಕಲಿಕ್ಕಿಲ್ಲ. ನಿಮ್ಮಿಬ್ಬರ ನಡುವೆ ಸಿಕ್ಕಿ ಬಡಪಾಪಿ ನಾನೊಬ್ಬ 'ಫಡ್ಚಾ'ದೆನಲ್ಲ! ದಮ್ಮಯ್ಯ! ಅಷ್ಟುಮಾಡಿ! ನಾನಿಲ್ಲಿಯೇ ಕುಳಿತುಕೊಳ್ಳುತ್ತೇನೆ. ನಾನೂ ನಿಮ್ಮ ಸರಿಸರಿ ಕುಳಿತರೆ ನಮ್ಮೊಳಗೆ ಹೆಚ್ಚುಕಡಿಮೆ ಏನು ಸ್ವಾಮಿ?

ಮನೋಹರ – ಹೆಚ್ಚುಕಡಿಮೆಗೆ ಬೆಂಕಿಬೀಳಲಿ. ನೀನು ನನ್ನ ಕೋಣೆಯೊಳಗೆ ಕೆಲಸಮಾಡುವಾಗ ನಾನು ಹೇಳಿದಂತೆ ಕೇಳಬೇಕು. ನೀನು ಕುರ್ಚಿಯಲ್ಲಿ ಕುಳಿತುಕೊಳ್ಳುವುದಿಲ್ಲವಾದರೆ ನಾನೇ ನಿನ್ನೊಂದಿಗೆ ನೆಲದಲ್ಲಿ ಕುಳಿತುಕೊಳ್ಳುವೆನು.. (ರಂಗನನ್ನು ಕೈಹಿಡಿದು ಕುಳ್ಳಿರಿಸಿ ತಾನೂ ಆವನೊಡನೆ ಕುಳಿತುಕೊಳ್ಳುವನು.) ಒಂದು ಹಾಡು ಹೇಳು ನೋಡುವ.

ರಂಗ—ನನಗೇನೂ ಗೊತ್ತಿಲ್ಲ ಸ್ವಾಮಿ. ಬಾಲಕನಾಗಿದ್ದಾಗ, ಮೈದಾನಿನಲ್ಲಿ ನಾಟಕವಾಗುವಾಗ ಹೊರಗೆ ಕುಳಿತುಕೊಂಡು, ನಿಮ್ಮಂತವರಾರಾದರೂ 'ಫೊನೊಗ್ರಾಫ್' ಇಡುವಾಗ ಎಲ್ಲಿಯೋ ಸ್ವಲ್ಪ ಕದ್ದು ಕೇಳಿದುದು. ಈಗೆಲ್ಲಾ ಅದು ಗುಡ್ಡಹತ್ತಿದೆ. ಸ್ವರ 'ಬೆರೆಬೆರೆ' ಆಗಿದೆ.

ಮನೋಹರ—ಇದ್ದ ಸ್ವರ ಸಾಕು. ಒಣರಗಳೆಯನ್ನೆಲ್ಲಾ ಬಿಟ್ಟು

ಗೊತ್ತಿದ್ದೊಂದು ಹಾಡು ಹೇಳು. ನನ್ನ ಕೋಣೆಯಲ್ಲಿರುವಾಗ ನಾನು ಹೇಳಿದ ಹಾಗೆ ಕೇಳಬೇಕೆಂಬುದು ಮರೆತು ಹೋಯಿತೆ?

ರಂಗ—ಆಯಿತು ಸ್ವಾಮಿ, ಹೇಗಾದರೂ ಬಡವರು ಬದುಕ ಬೇಕಲ್ಲ! (ತಲೆತುರಿಸಿ, ಸ್ವರ ಸರಿಮಾಡಿ, ಆಲೋಚಿಸಿ) ಸ್ವಾಮಿ, ನೀವು ಬಲು ಸೊಗಸಾಗಿ ಹಾಡುತ್ತೀರಿ. ಮೊದಲು ನೀವೊಂದು ಹಾಡಿ ಅನಂತರ ನಾನು ಹಾಡುವೆನು.

ಮನೋಹರ—ಆಯಿತು, ನನಗೇನೂ ಅದರಲ್ಲಿ ನಾಚಿಕೆಯಿಲ್ಲ ನೋಡು. (ಒಂದು ಹಾಡನ್ನು ಹಾಡುವನು.)

ರಂಗ—ಹ ಹ ಹ! ಬಲು ಬೇಶ್! (ತಲೆದೂಗುತ್ತಾ) ನಾನೀಗ ಹಾಡಬೇಕೆ?

(ಪುನಃ ಸ್ವರ ಸರಿಮಾಡಿಕೊಂಡು ಹಾಡುವನು. ಆಗ ಮನೋಹರನ ಮಿತ್ರರಾದ ತಾರಾನಾಥ ದಿನಕರ ಸುಂದರರು ಸಂಜೆ ತಿರುಗಾಡ ಹೋಗಲು ಅವ ನನ್ನು ಕರೆದೊಯ್ಯ ಬರುವರು. ಅವನು ರಂಗನೊಡನೆ ಕುಳಿತಿರುವುದನ್ನು ಕಂಡು ವಿನೋದಾಶ್ಚರ್ಯ ಪಡುವರು.)

ಸುಂದರ—ಇದೇನು ಮನೋಹರ?

ಮನೋಹರ—ಏನು ಸುಂದರ? ವಿಶೇಷವೇನೂ ಇಲ್ಲ. 'ಲಿಬರ್ಟಿ, ಇಕ್ವಾಲಿಟಿ ಎಂಡ್ ಫ್ರೆಟರ್ನಿಟಿ.'

ದಿನಕರ—ಅಂದರೆ?

ತಾರಾನಾಥ—ಅಂದರೆ ನಿನಗೆ ತಿಳಿಯದೆ? ಸಮಾನತ್ವ, ಸೋದ ರತ್ವ ಮತ್ತು ಸ್ವಾತಂತ್ರ್ಯ. ಇನ್ನು ಮೇಲೆ ಮೇಲು ಕೀಳೆಂಬ ತಾರತಮ್ಯವ ನ್ನೆಲ್ಲಾ ಮೂಲೆಗೊತ್ತಿ ಮಾನವ ಕೋಟಿಯೆಲ್ಲಾ ಸರಿಸಮಾನವೆಂದು ಪರಿಗಣಿಸಬೇಕು.

ಮನೋಹರ—ಪರಿಗಣಿಸುವುದು ಮಾತ್ರವೆ? ಅದರಂತೆಯೇ ಆಚರಿಸಬೇಕು. ನಾನು ಇಂದು 'ಫ್ರೆಂಚ್ ರಿವಲೂಶನ್' ಓದಿದೆ. ಅದರ ಮೂಲ ತತ್ವವನ್ನು ಮನಗಂಡು ಕೂಡಲೇ ಕಾರ್ಯಕ್ಕೆ ಹಚ್ಚಿಬಿಟ್ಟೆ.

ದಿನಕರ—ನೀನು ಹೀಗೆ ಓದಿದುದನ್ನೆಲ್ಲಾ ಕಾರ್ಯಕ್ಕೆ ಹಚ್ಚ ಹೋದರೆ ನಿನ್ನನ್ನು ಬೇಗನೆ ಹುಚ್ಚರ ಆಸ್ಪತ್ರೆಗೋ, ಜೈಲಿಗೋ ಕಳು ಹಿಸಬೇಕಾದೀತು!

ಮನೋಹರ—ಏಕೆ? ನಾನು ನಿಮ್ಮಂತೆ ದೊಡ್ಡ ದೊಡ್ಡ ಪುಸ್ತಕಗಳನ್ನು 'ಪೇಜು ಪೇಜು' ಮುಗುಚಿಹಾಕಿ, ಆಚರಣೆಯ ಗೊಡವೆಯೇ ಇಲ್ಲದೆ, ತಲೆ ತುಂಬ ಭಾವನೆಗಳನ್ನು ತುಂಬಿಸಿಡುವವನಲ್ಲ. ಓದುವುದೇ ಕಡಿಮೆ; ಓದಿದುದನ್ನೆಲ್ಲಾ ಕಾರ್ಯಕ್ಕೆ ಹಚ್ಚಿಬಿಡುವೆನು.

ಸುಂದರ–ಅದಂತಿರಲಿ. ಈ ನಿನ್ನ ಸೇವಕನ ಜಾತಿ ಯಾವುದು?

ಮನೋಹರ—ಮಾನವ ಜಾತಿ.

ತಾರಾನಾಥ—ಅದೀಗ ಸರಿಯಾದ ಉತ್ತರ!

ದಿನಕರ–ಅವನು ಬಿಲ್ಲವ, ಸುಂದರ.

ತಾರಾನಾಥ — ಬಿಲ್ಲರವನಾದರೇನು? ಪಂಚಮನಾದರೇನು? ಅವನೂ ನಮ್ಮಂತೆಯೇ ಮಾನವನಲ್ಲವೇ? ಇಷ್ಟೊಂದು ವಿದ್ಯೆ ಕಲಿತ ಮೇಲೂ ಜಾತಿ ಭೇದದ ಭೂತವು ಇನ್ನೂ ನಿಮ್ಮನ್ನು ಕಾಡುತ್ತಿರುವುದು ಅತ್ಯಂತ ಸಂತಾಪಕರ!

ದಿನಕರ—ಈ ಬಿಲ್ಲವ ಹುಡುಗನಲ್ಲಿ ಅಂತಹ ವಿಶೇಷ ಗುಣವೇನಿದೆ?

ಮನೋಹರ—ಏನಾದರೂ ವಿಶೇಷ ಗುಣವಿದ್ದರೆ ನೀವು ಅವನನ್ನು ನಿಮ್ಮ ಸಮಾನನಾಗಿ ಸ್ವೀಕರಿಸುವಿರಾ?

ಸುಂದರ—ಬಿಲ್ಲವನು ಎಷ್ಟೆಂದರೂ ಬಿಲ್ಲವನೆ! ಅವನು ಬಂಟನಾಗಲಿ ಬ್ರಾಹ್ಮಣನಾಗಲಿ ಆಗುವುದು ಹೇಗೆ? ಬೇವಿನಮರ ಮಾವಿನಮರವಾಗುವುದುಂಟೆ?

ತಾರಾನಾಥ—ಬೇವಿನ ಹುಟ್ಟು ಬೇರೆ, ಮಾವಿನ ಹುಟ್ಟು ಬೇರೆ. ಜನ್ಮತಃ ಅವುಗಳಲ್ಲಿ ಭೇದವಿರುವುದರಿಂದ ಬೇವು ಮಾವಾಗಲಾರದು. ಆದರೆ ಮಾನವ ಕೋಟಿಯಲ್ಲಿ ಜನ್ಮತಃ ಯಾವ ಭೇದವೂ ಇರಲಾರದು. ಅಂದ ಮೇಲೆ ನಮ್ಮಲ್ಲಿ ಒಬ್ಬರೊಬ್ಬರೊಳಗಿರುವ ಭೇದವು ಕೇವಲ ಕೃತಕ ಸ್ವಾರ್ಥನಿರ್ಮಿತ, ಅಸ್ವಾಭಾವಿಕ.

ದಿನಕರ— ಜಾತಿಭೇದವಲ್ಲವಾದರೂ ತರಗತಿ, ಸ್ಥಾನ, ಮಾನ ಮೊದಲಾದ ಬೇರೆ ವಿಧದ ಭೇದವು ಲೋಕದಲ್ಲಿ ಇದ್ದೇ ಇರುವುದು.

ಮನೋಹರ–ನಿಮ್ಮೀ ರಗಳೆಯನ್ನೆಲ್ಲಾ ಕಟ್ಟಿಡಿ. ರಂಗನು ಹಾಡುವಿಕೆಯಲ್ಲಿ ನಿಮಗಿಂತ ನಿಪುಣನಾದರೆ ಅವನ ಶ್ರೇಷ್ಠತೆಯನ್ನು ಒಪ್ಪುವಿರಾ?

ಸುಂದರ - ಆಗಬಹುದು. ನಿನ್ನ ಚಾಕರಿಯ ಬಿಲ್ಲವ ಹುಡುಗನೂ ಹಾಡಿ ನಮ್ಮನ್ನು ಮೆಚ್ಚಿಸುವುದಾದರೆ, ಮತ್ತೇನು ಕಡಿಮೆ!

ಮನೋಹರ—ನೀವೆಲ್ಲಾ ಕಪಟಮಾಡಬಾರದು—ಯಥಾರ್ಥ ಹೇಳಬೇಕು. ರಂಗನು ನಿಮ್ಮ ಹಾಗೆ ನಾಟಕ, ಗಾಯನ ಕಚೇರಿಗಳನ್ನೆಲ್ಲಾ ಕಂಡವನಲ್ಲ. ಇಡೀ ದಿವಸ ಮನೆಯಲ್ಲಿ ಕತ್ತೆಚಾಕರಿ ಮಾಡುತ್ತಿದ್ದವ.

ದಿನಕರ—ಆಗಲಿ, ಹಾಡಲಿ ನೋಡುವ. ನಿನ್ನ ಸಿಫಾರಸೆಲ್ಲಾ ಬೇಡ. (ವ್ಯಂಗ್ಯವಾಗಿ ನಗುವನು.)

ಮನೋಹರ—ರಂಗ, ನೋಡುವ, ರಾಚಪ್ಪನ 'ಇದು ಮಂದಾನಿಲ' ಈ ಕಂದವನ್ನು ಹಾಡು.

ರಂಗ—ಇಲ್ಲಸ್ವಾಮಿ, ಅದು ನನಗೆ ಸರಿಯಾಗಿ ಬರುವುದಿಲ್ಲ, ಕ್ಷಮಿಸಿ.

(ದಿನಕರ ಸುಂದರರು ನಗುವರು)

ಮನೋಹರ—(ಕುಪಿತನಾಗಿ) ಯಾವಾಗಲೂ ಉಂಟೇ ಉಂಟು ಈ ನಿನ್ನ ಒಣರಗಳೆ. ಹಾಡುತ್ತಿಯೋ ಇಲ್ಲವೊ? ನಾನು ಆಗ ಹೇಳಿದುದು ನೆನಪಿದೆಯೋ?

ರಂಗ— ಆಯಿತು ಸ್ವಾಮಿ. (ಹಾಡುವನು.)

(ಎಲ್ಲರೂ ಮೆಚ್ಚಿ ಕೈಚಪ್ಪಾಳೆ ಹೊಡೆಯುವರು.)

ತಾರಾನಾಥ—ಈಗ ನಿಮ್ಮ ಹೆಮ್ಮೆ ಇಳಿಯಿತೆ? 'ಫುಲ್ ಮೆನಿ ಎ ಜೆಮ್ ಆಫ್ ಪ್ಯೂರೆಸ್ಟ್ ರೇ ಸೆರೀನ್' ಎಂದೆಲ್ಲಾ ಗ್ರೇ ಕವಿಯು ಹಾಡಿರುವುದು ಅಕ್ಷರಶಃ ನಿಜವು. ಎಷ್ಟೊಂದು ರತ್ನಗಳು ಸಮುದ್ರ ಗರ್ಭದ ಕೆಸರೊಳಗಿದ್ದು ಪ್ರಕಾಶ ಬೀರದೆ ಮುಸುಕಾಗಿರುವುದಿಲ್ಲ! ಎಷ್ಟೊಂದು ಮನೋಹರ ಸುಮಗಳು ನಿರ್ಜನ ನಿಬಿಡಾರಣ್ಯ ಮಧ್ಯದಲ್ಲಿ ಅರಳಿ, ಪರಿಮಳಬೀರಿ, ಬಾಡಿ ಧರೆಗುರುಳುವುದಿಲ್ಲ। ಸಂದರ್ಭ ದೊರೆಯದೆ ಎಷ್ಟೊಂದು ಪ್ರತಿಭಾಶಾಲಿಗಳು ಮರೆಯೊಳಗಿದ್ದು ಮರಣ ಹೊಂದುವುದಿಲ್ಲ!

ಮನೋಹರ—ಮಿತ್ರ, ಇದರ ಸಾರವನ್ನೊಳಗೊಂಡ ಹಾಡೊಂದನ್ನು ರಂಗನ ನೆನಪಿಗಾಗಿ ರಚಿಸಿರುವೆನು.

ತಾರಾನಾಥ—ಎಲ್ಲಿದೆ ನೋಡುವ, ಅದನ್ನೊಮ್ಮೆ ಹಾಡು.

ದಿನಕರ—ಅಹ! ಸೇವಕನೂ ಯಜಮಾನನೂ ಇಬ್ಬರೂ ಹಾಡು ಗಾರರು! ನಿಮ್ಮನ್ನು ಜತೆಗೊಳಿಸಿದುದು ಯಾವ ದೈವವೊ?

ಸುಂದರ—ಈ ಭ್ರಾಂತಿಗೆ ಆ ಮಂಕು ಗಂಟು!

ತಾರಾನಾಥ—ವಿಚಾರದ ಪ್ರತಿಮೂರ್ತಿಗಳೆಂದರೆ ನೀವಿಬ್ಬರೇ ಸರಿ! ಮನೋಹರ, ಅವರೇನು ಬೇಕಾದರೂ ಹೇಳಲಿ. ನೀನು ಹಾಡು ನೋಡುವ.

ಮನೋಹರ—ಬೆಳಗಿವೆ ಕಡಲಿನ ಕತ್ತಲ ಗವಿಯು

ರತುನಗಳೆನಿತೋ ನಿರ್ಮಲ ಛವಿಯು;

ಮರೆಯಲಿ ಬಿರಿಯುವುವೆನಿತೋ ಅಲರು

ಮರುವಾತದಿ ಕಳೆಯಲು ಮಾಧುರಿಯ.

ದಿನಕರ—ಬೇಶ್! ಬೇಶ್! ಒಳ್ಳೇ ಕವಿತಾಶಕ್ತಿಯೂ ಉಂಟು. ನಮ್ಮ ವಿದೂಷಕನಿಗೆ! ಕವಿ ರವೀಂದ್ರರ ಹೆಸರನ್ನು ಉಳಿಸುವವನೆಂದರೆ ಮನೋಹರನೇ ಸರಿ.

ಸುಂದರ—ಉಳಿಸುವವನೋ ಅಳಿಸುವವನೋ! ಏನೇನೋ ಶಬ್ದ ಗಳನ್ನು ಜೋಡಿಸಿ ರಾಗ ಎಳೆದುಬಿಡುವುದು ಕವಿತೆಯಾದರೆ ಕಾಡು ಕಪಿಗಳೂ ಕವಿಗಳೇ!

ತಾರಾನಾಥ-ಸಾಕಪ್ಪ ನಿಮ್ಮ ಹರಟೆ. ಈಗ ನಾವು ಯಾವ ಕಡೆಗೆ ತಿರುಗಾಡ ಹೋಗುವುದು? (ಆಲೋಚಿಸಿ) ಕದಿರೆಗೆ ಹೋಗುವ. ಸಂಧ್ಯಾಕಾಲದ ಕದಿರೆಯ ನೋಟವು ಅತಿ ಮನೋಹರವಾಗಿರುವುದು.

ದಿನಕರ—ಅದೇನು ಮನೋಹರವೊ! ನೀನು ಕದಿರೆ ಗುಡ್ಡ ಕಲ್ಲ, ಪದವಿಗೆ ಹೋಗು. ನೋಡಲು ಒಂದು ನಾಯಿಯಾದರೂ ಸಿಗದ ಸ್ಥಳ ಗಳಿಗೆಲ್ಲಾ ನಾನು ಬರಲಾರೆನು.

ಮನೋಹರ—ಹಾಗಾದರೆ ಬಂದರಿನ 'ಪೀಯರಿ'ಗೆ ಹೋಗುವ. ಸಂಜೆಯ ಸೊಂಪಿಗೂ, ಮಂದಮಾರುತನ ತಂಪಿಗೂ ಮೈಯೊಡ್ಡಿ ಆನಂದಿಸುವ.

ದಿನಕರ—ಎಂತಹ ತಂಪು! ಮಾಪಿಳ್ಳೆಯವರ ಮೀನಿನ ಮಚುವೆ ಗಳ ದುರ್ವಾಸನೆ! ನಾನು ಅಲ್ಲಿಗೂ ಬರಲಾರೆನು.

ಸುಂದರ—ಬೇಡ, 'ಲೈಟ್ ಹೌಸ್ ಹಿಲ್ಲಿ'ಗೆ ಹೋಗುವ ತಂಗಾಳಿಯೂ ಬೀಸುತ್ತದೆ; ಸಂಧ್ಯಾರಾಗದ ಸುಂದರ ನೋಟವೂ ಇದೆ.

ದಿನಕರ—ಹೌದು ಹೌದು! ಮುದಿ 'ಪೆನ್ಶನರು'ಗಳೂ, ಜೇಸತ್ತ 'ಕ್ಲಾರ್ಕ'ರೋ ಬಾಯ್ಬಿಟ್ಟು, ಎದೆಯುಬ್ಬಿಸಿ ಕೊರಡುಗಳಂತೆ ಒರಗಿ ಕೊಂಡಿರುವ ಚಂದವೇನು ನೋಡುವುದು!

ಮನೋಹರ—ತಿಳಿಯಿತು ತಿಳಿಯಿತು ದಿನಕರನ ಆಂತರ್ಯ, ಮನಸ್ಸಿನಲ್ಲಿದ್ದುದನ್ನೆಲ್ಲಾ ಬಿಚ್ಚಿ ಹೇಳಿಬಿಟ್ಟರೇನಪ್ಪ? ಇಷ್ಟೆಲ್ಲಾ ಸುತ್ತಾಟ ಬೇಕೇ? ಈಗ 'ಕಾನ್ವೆಂಟ್' ಬಿಡುವ ಹೊತ್ತಾಯಿತು. ಬೆಂದೂರಿನ ಮಾರ್ಗವಾಗಿ ಹೋಗಬೇಕೆಂದೇ ದಿನಕರನ ಇಚ್ಛೆ ಅಲ್ಲವೇ?

ಸುಂದರ—ಅದು ಸಹಜವಾದುದಲ್ಲವೆ? 'ಅನ್‌ಲೈಕ್ ಪೋಲ್ಸ್ ಎಟ್ರೇಕ್ಟ್' (ವಿರುದ್ಧ ಧ್ರುವಗಳಿಗೆ ಪರಸ್ಪರ ಆಕರ್ಷಣ) ಹೋಗೋಣ.

(ಎಲ್ಲರೂ ಹೋಗುವರು.)

೨ನೇ ದೃಶ್ಯ

[ಮಂಗಳೂರಿನ ಸಮೀಪದ ಹರೇಕಳದ ಗುತ್ತಿನ ಮನೆಯ ಸಂಜೀವ ಶೆಟ್ಟಿಯು ತನ್ನ ಶೈನಾತಿ ಚಂದುವಿನೊಂದಿಗೆ, ಪಂಥದ ಕೋಳಿ ಅಂಕವೊಂದಕ್ಕೆ ಊರಲ್ಲಿ ಕೋಳಿಗಳನ್ನು ಒಟ್ಟುಗೂಡಿಸುತ್ತಾ ತಿರುಗಾಡುತ್ತಿರುವನು]

ಚಂದು—ನಾನು ಹೋಗಿ ಕೇಳಿದಾಗ, "ನಾನು ಈ ಬಾರಿ ಪ್ರೀತಿಯಿಂದ ಊರ ಬಂಡಿಯ ಕಟ್ಟದಲ್ಲಿ ಕಟ್ಟಬೇಕೆಂದು ಸಾಕಿರುತ್ತೇನೆ. ಕೊಂಗ್ರ ಕೋಳಿಯೆಂದರೆ ಪ್ರಾಣ ನನಗೆ. ಅದನ್ನು ಯಾರಿಗೂ ಕೊಡಲು ಸಾಧ್ಯವಿಲ್ಲ" ಎಂದು ಹೇಳಿದ್ದ. ಈಗ ನೋಡಿ ಅವನ ನಾಲಿಗೆ ತಿರುಗುವುದು! "ನಿಮಗೆ ಕೊಡದ ವಸ್ತುವುಂಟೇ? ಇದಕ್ಕಾಗಿ ನೀವು ಇಲ್ಲಿವರೆಗೆ ಬರಬೇಕಿತ್ತೆ? ಒಂದು ಹುಸಿಜನ ಕಳುಹಿಸುತ್ತಿದ್ದರೆ ನಾನು ಕೊಟ್ಟು ಬಿಡುತ್ತಿದ್ದೆ" ಎಂದು ಎಷ್ಟು ಚಂದವಾಡಿ ಮಾತಾಡಿದ! ನಾವು ನಡಿಸಿದ 'ಪ್ಲೇನ'ನ್ನು ಇವನಿಗಾರೋ ತಿಳಿಸಿರಬೇಕು. ಇಲ್ಲವಾದರೆ........

ಸಂಜೀವ—ಸಾಕು ಸುಮ್ಮನಿರು. ನಾನು ಸ್ವತಃ ಬಂದುದರಿಂದ ಕೊಟ್ಟೆ. ಇಲ್ಲವಾದರೆ ಅವನಿಂದ ಕೋಳಿ ಪಡೆಯಲು ಯಾರಿಂದಲೂ ಸಾಧ್ಯವಿಲ್ಲ. ಯಾವ ಹಂಗೂ ಅವನಿಗಿಲ್ಲ.

ಚಂದು—ನಿಮಗೆ ಹೆದರದವರು ಯಾರಿದ್ದಾರಪ್ಪ ಈ ಊರಲ್ಲಿ? ಆ ಕೆಳಗಿನ ಮನೆ ರಾಮಾಳ್ವನೊಬ್ಬ ಹಾರಾಡುತ್ತಿದ್ದಾನೆ. ನೋಡಬೇಕು ಅವನ ಆಟ ಎಲ್ಲಿವರೆಗೆ ನಡೆಯುತ್ತದೆಂತ! ಈ ಸಲದ ಸೋಡ್ತಿಯಲ್ಲಿ ಅವನ ಮುಖಕ್ಕೆ ಮಸಿ ಬಳಿದಂತಾಗಬೇಕು! ಇನ್ನವನಿಗೆ ಜನ್ಮ ಜನ್ಮಕ್ಕೆ ಸೋಡ್ತಿ ಬೇಡವೆಂದಾಗ ಬೇಕು! ಅವನಂಥವನೂ ನಿಮ್ಮಂಥವರೊಡನೆ ಪಂಥಕ್ಕೆ ನಿಲ್ಲುವುದೇ? ಏನೋ ನೆಂಟರು ಸ್ವಲ್ಪ ಅನುಕೂಲದವರು ಸಿಕ್ಕಿದರೆಂದು ಕುಣಿಯುತ್ತಿದ್ದಾನೆ!

ಸಂಜೀವ—ನೋಡುವ ಎಷ್ಟು ಕುಣಿಯುತ್ತಾನೆಂತ!

ಚಂದು—ಅವನ ಪುಡಿ ಕಾಸು ಖರ್ಚಾಗುವನಕ ಕುಣಿದಾನು! ಮೊದಲೇ ಅವನ ಸೊಂಟ ಮುರಿಸಿ ಹಾಕಬೇಕಿತ್ತು. ನಾನು ಹೇಳಿದರೆ ನೀವು ಕೇಳಲಿಲ್ಲ.

ಸಂಜೀವ—ಚಂದು, ಸೊಂಟ ಮುರಿಸಿ ಹಾಕುವುದೇನೋ ಸುಲಭ. ಆದರೆ ಆ ಮೇಲೆ ಯಾರು ಒದ್ದಾಡಿ ಸಾಯುತ್ತಾರೆ ಕಚೇರಿ ಬಾಗಿಲಲ್ಲಿ? ಆ ಬಕ ಪಕ್ಷಿಗಳಿಗೆ ಎಷ್ಟು ಕೊಟ್ಟರೂ ಸಾಲದು! ಆ ಹಾಡಿಮನೆ ಕಿಟ್ಟ ಶೆಟ್ಟಿಯನ್ನು ಕೊಲ್ಲಿಸಿದುದೇ ಸಾಕು. ಬಿಡಿಸಿಕೊಂಡು ಬರಬೇಕಾದರೆ ಪ್ರಾಣಕ್ಕೆ ಬಂತು. ಮದ್ರಾಸಿನಿಂದ ಆ ವಕೀಲರನ್ನು ತರಿಸದಿರುತ್ತಿದ್ದರೆ ನಮ್ಮ ಈ ಲೋಕದ ಋಣ ತೀರುವಂತಾಗುತ್ತಿತ್ತು. ಕೈ ಬರಿದಾಗಿ ಹೋಗಿದೆ. ಮುಂಚಿನ ಗೌರವಕ್ಕಾಗಿ ಮಾತ್ರ ಈಗ ಹೋರಾಡುವುದು.

(ತಾರಾನಾಥನ ಒಕ್ಲು ಕೊರಗ ಪೂಜಾರಿಯೆಂಬವನು ಬಂದು ದೂರದಲ್ಲೇ ಸಂಜೀವನಿಗೆ ಬಹಳವಾಗಿ ಬಗ್ಗಿ ನಮಸ್ಕರಿಸಿ, ತಲೆಗೆ ಸುತ್ತಿದ ಮದ್ರಾಸ್ ಎಲವಸ್ತ್ರದಿಂದ ಕಾಗದವೊಂದನ್ನು ಬಿಚ್ಚಿ ಸಂಜೀವನಿಗೆ ಕೊಡುವನು. ಸಂಜೀವನು ಅದನ್ನು ಓದಿ ಬಹಳ ಸಂತೋಷಗೊಳ್ಳುವನು.)

ಸಂಜೀವ—ನೀನು ಯಾವಾಗ ಬಂದುದು?

ಕೊರಗ—(ಬಹಳ ದೈನ್ಯದಿಂದ) ಬಂದು ಸ್ವಲ್ಪ ಹೊತ್ತಾಯಿತು ಸ್ವಾಮಿ. ಮನೆಗೆ ಹೋದೆ, ಅಲ್ಲಿ ತಾವಿರಲಿಲ್ಲ. ಕಡೆಗೆ ತಮ್ಮ ಮನೆಯ

ಕೆಲಸದ ಹುಡುಗನೊಬ್ಬನು ದೂರದಲ್ಲೇ ತಮ್ಮನ್ನು ತೋರಿಸಿ ಹೋಗಿಬಿಟ್ಟ. ನನಗೀಗಲೇ ಹೋಗಬೇಕು. ಬಹಳ ಜರೂರಿನ ಕೆಲಸವಿದೆ.

ಸಂಜೀವ—ಛೆ! ಛೆ! ಹೋಗುವುದೇ? ಇವತ್ತು ನಿಂತು ನಾಳೆ ಹೋಗಬಹುದು. ಬಾಯಾರಿಕೆಯಾಗುವುದೇ? ಗಂಜಿ ಊಟ ಆಗಿದೋ ಇಲ್ಲವೋ?

ಕೊರಗ—ಎಲ್ಲ ಆಯಿತು ಸ್ವಾಮಿ. ಮನೆಯಲ್ಲಿ ಗಂಜಿ ಊಟ ಮಾಡಿಯೇ ಇಲ್ಲಿಗೆ ಬಂದುದು. ಕ್ಷಮಿಸಿರಿ, ನನಗೀಗಲೇ ಹೋಗಬೇಕು. ನಾನಿನ್ನೊಮ್ಮೆ ಬರುತ್ತೇನೆ. ಇನ್ನೇನು, ಯಾವಾಗಲೂ ಬರಬಹುದು.

ಸಂಜೀವ - ಹಾಗಾದರೆ ನಮ್ಮಲ್ಲಿ ನಾಡದು ಸೋಮವಾರ ದೊಡ್ಡ ಸೋಡ್ತಿ ಕಟ್ಟ. ನೀವೆಲ್ಲ ಅಗತ್ಯ ಬರಬೇಕು. ನಾನು ಕಾಗದ ಕೊಡುತ್ತೇನೆ ನಿಮ್ಮ ಯಜಮಾನರಿಗೆ.

ಕೊರಗ—ಆಯ್ತು ಸ್ವಾಮಿ. ಖಂಡಿತ ಬರುತ್ತೇವೆ.

ಸಂಜೀವ—(ಕಿಸೆಯಿಂದ ಒಂದು ರೂಪಾಯಿ ತೆಗೆದು) ಇಗೋ ತೆಗೆದುಕೋ.

ಕೊರಗ—ಬೇಡ ಸ್ವಾಮಿ ಬೇಡ.

ಸಂಜೀವ—ತೆಗೆದುಕೋ. (ಮುಂದುವರಿದು ಅವನ ಕೈಮೇಲೆ ಹಾಕುವನು. ಅವನದನ್ನು ಹಿಡಕೊಂಡು ನಮಸ್ಕರಿಸಿ ಹೋಗುವನು. ಪುನಃ ಕಾಗದ ಓದಿನೋಡಿ ಮೀಶೆ ತುದಿ ತಿರುಗಿಸಿ ಚಂದುವಿನ ಭುಜತಟ್ಟಿ) ಇನ್ನೇನೂ ತೊಂದರೆಯಿಲ್ಲ ಚಂದು.

ಚಂದು—ನನಗೆ ಗೊತ್ತದು. ನಾವು ಕೈಹಾಕಿದ ಕೆಲಸ ಈ ವರೆಗೆ ಅಪಜಯವಾದುದುಂಟೇ? ಆ ತುಂಗಮ್ಮನಿಗೆ ನಿಮ್ಮ ಕಾರ್ಬಾರನ್ನೆಲ್ಲಾ ಹೇಳಿ ಕಿವಿ ಅರಳಿಸಿಬಿಟ್ಟವ ನಾನು. ನಾನಲ್ಲವಾದರೆ........

ಸಂಜೀವ—ಹೌದು ನೀನಲ್ಲವಾದರೆ! (ಕಿವಿ ಹಿಡಿದು ತಿರುವಿ) ಎಲ್ಲ ಮಾಡುವುದು ನೀನು! ಮತ್ತೆ ನಾನ್ಯಾಕಿಲ್ಲಿ?

ಚಂದು—ಆಯ್ತು ಸ್ವಾಮಿ ಆಯ್ತು. ಎಲ್ಲ ಮಾಡುವುದು ನೀವೆ! ನಾನೇನೂ ಮಾಡಲೇ ಇಲ್ಲ! ಈಗಲಾದರೂ ಸಂತೋಷವಾಯಿತೇ?

ಸಂಜೀವ—ಯಾರಿಂದಾದರೂ ಕೆಲಸವಾಯಿತಲ್ಲ! ಮತ್ತೇನು? ಬರಿ ಕೈಯಿಂದ ಎಷ್ಟರ ತನಕ ಬಾಯಿ ಹಾರಿಸಬಹುದು? ಈ ಸೋಡ್ತಿ

ಯಲ್ಲೇ ನನ್ನ ಗುಟ್ಟು ರಟ್ಟಾಗುವುದೋ ಎಂಬ ಬೆದರಿಕೆಯಿತ್ತು. ಇನ್ನೇನೂ ಭೀತಿಯಿಲ್ಲ.

ಚಂದು—೩೦೦೦ ಎಲ್ಲಿಯ ವರೆಗೆ ಬಂದೀತು? ಅವರು ಬಹಳ ಹಣ ವಂತರಂತೆ. ಕಡೆಗೊಂದು ೫೦೦೦ವಾದರೂ ದೊರೆಯದೆ........

ಸಂಜೀವ—೫೦೦೦ವಲ್ಲ, ನಗ್ದಿಯಾಗಿ ೧೦೦೦ ಕೊಡುವವರು ಯಾರಿದ್ದಾರೆ ನಮ್ಮ ಹಳ್ಳಿಯಲ್ಲಿ? ಹಣ ಇರುವುದು ಅತ್ತೆಯ ಹತ್ತಿರ. ಅದನ್ನು ಕ್ರಮೇಣ ಹೇಗೂ ಜಾರಿಸಬಹುದು. ಈಗ ಇಷ್ಟು ಸಿಕ್ಕುವುದೇ ನಮ್ಮ ಪುಣ್ಯ. ಎಲ್ಲಿಯಾದರೂ ನೆಂಟಸ್ತಿಗೆ ತಪ್ಪಿ ಹೋಗುವುದೋ ಎಂದು ನನ್ನ ಎದೆ ದಬದಬಯೆನ್ನುತ್ತಿತ್ತು. ಆ ತಾರಾನಾಥನು ಏನು ಮಾಡಿಬಿಡುವನೋ ಎಂದು ಬಹಳ ಭೀತಿಯಿತ್ತು. ಇನ್ನೇನೂ ತೊಂದರೆ ಯಿಲ್ಲ ನೋಡು.

ಚಂದು—ಪಾಯಸ ಬೇಗನೆ ತಿನ್ನುವಂತಾಗಬೇಕು. ಇಲ್ಲವಾದರೆ ಕೆಲಸ ಕೆಟ್ಟು ಹೋದೀತು. ನಮಗೆ ಬಹಳ ಮಂದಿ ವೈರಿಗಳಿದ್ದಾರೆ.

ಸಂಜೀವ—ಈ ಸೋಡ್ತಿ ಮುಗಿದ ಕೂಡಲೆ ಮದುವೆಯಾಗ ಬೇಕು. ನಾನೇ ಸ್ವತಃ ಹೋಗಿ ಅತ್ತೆಯೊಡನೆ ಮಾತಾಡಿ ದಿವಸ ನಿಶ್ಚಯಮಾಡುತ್ತೇನೆ.

ಚಂದು—ಈ ಊರಲ್ಲಿ ಇಂತಹ ಮದುವೆಯೇ ಆಗಲಿಲ್ಲೆಂಬಂತಾಗ ಬೇಕು. ನಮ್ಮ ವೈರಿಗಳೆಲ್ಲಾ ಬೆರಗುಗೊಂಡು ಮುಂದಕ್ಕೆ ಉಸುರೆತ್ತ ದಂತಾಗಬೇಕು.

ಸಂಜೀವ—ದುಡ್ಡೊಂದಿದ್ದರೆ ನಮಗಾರಾದರೂ ಹೇಳಬೇಕೇ ಕೆಲ ಸದ ವಿಷಯದಲ್ಲಿ? ಇಷ್ಟೆಲ್ಲಾ ಎಂದಾದರೆ ಸರಿಯಲ್ಲ ಮದುವೆ?

ಚಂದು—ಆದರೆ ನೀವೆಂತಹ ಮೋಸ ಮಾಡಿಬಿಟ್ಟಿರಿ ಆ ಮನೋಹ ರನಿಗೆ? ಅವನು ಬಾಯಿ ತೆರೆದುಕೊಂಡಿದ್ದುದೇ ಬಂತು. ಪಾಪ! ಕೈಯ ತುತ್ತು ಬಾಯಿಗೆ ಬಾರದಂತಾಯಿತವನಿಗೆ!

ಸಂಜೀವ—ಆ ಅಲ್ಪನಿಗೆ ಹೇಳಿಸಿದ್ದೇ ಅಲ್ಲ ಆ ಹುಡುಗಿ! ಅವ ಯಾವ ಮನೆತನದವ? ಯಾವ ಘನ ಕುಟುಂಬಸ್ಥ? ಎಲ್ಲಿಯೋ ಆಸೆ ಮಾಡಿ ಹೊಟ್ಟೆಗೆ ಅನ್ನ ಸಹ ಸರಿತೆಗೆದುಕೊಳ್ಳದೆ ಕಾಸಿಗೆ ಕಾಸು ಗಂಟು

ಹಾಕಿ ತಂದೆ ಸ್ವಲ್ಪ ದುಡ್ಡು ಮಾಡಿಟ್ಟು ವಿದ್ಯೆ ಕಲಿಸಿದ್ದಾನೆಂತಲೋ? ಎಷ್ಟು ಜನ ಅವನ ಹಾಗೆ ವಿದ್ಯೆ ಕಲಿತು ಬೀದಿ ಅಳೆಯುವವರು ಈ ಮಂಗಳೂರು ಪೇಟೆಯಲ್ಲಿ? ಆ ತಲೆತಿರುಕ ತಾರಾನಾಥನಲ್ಲದಿರುತ್ತಿದ್ದರೆ ಮನೋರಮೆಯ ಹತ್ತಿರ ಸೋಕುವ ಯೋಗ್ಯತೆ ಅವನಲ್ಲಿರುವುದೇ? ಈ ಕಲಿತ ಹುಡುಗರ ತಲೆಯಲ್ಲಿರುವುದು ಬೂದಿ; ಚಂದು! ಬೂದಿ. ಇಂಗ್ಲಿಷ್ ವಿದ್ಯೆ ಕಲಿತೊಡನೆ ಎಲ್ಲಾ ಆಯಿತೆಂದು ನೆನಸಿಕೊಳ್ಳುತ್ತಾರವರು.

ಚಂದು – ಒಂದಲ್ಲ, ೬೪ ವಿದ್ಯೆ ಕಲಿತವನಿಗೂ ನಿಮ್ಮನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲವೆನ್ನುವ.

ಸಂಜೀವ—ಅಲ್ಲ, ಹೆಂಗಸಿನ ಮನಸಿನ ಒಲವನ್ನರಿತು ಒಲಿಸಿಕೊಳ್ಳುವಷ್ಟರ ಬುದ್ಧಿವಂತಿಗೆ ಕೂಡಾ ಇಲ್ಲದ ಇವರು ಯಾತಕ್ಕಾದಾರು ಮತ್ತೆ?

ಚಂದು—ನಾನು ಹೇಳಿದೆನಲ್ಲ ನಿಮ್ಮ ವಿದ್ಯೆಯಿದಿರಲ್ಲಿ ಇನ್ನಾರ ವಿದ್ಯೆಯೂ ನಡೆಯದೆಂತ! ಇರಲಿ. ನಾಳದು ಕದ್ರಿ ಕಂಬಳವಂತೆ ನಮ್ಮ ಕೋಣಗಳನ್ನು ಬಿಡುವ ಯೋಚನೆ ಇಲ್ಲವೆ?

ಸಂಜೀವ – ಯೋಚನೆ ಇಲ್ಲದೆ· ಈ ಸಲ ಬಿಡದೆ ಮತ್ತೆ ಯಾವಾಗ ಬಿಡುವುದು? ಭಾರೀ ಗೌಜಿಯಿಂದ ಕೋಣ ಬಿಡಬೇಕು· ತಿಳಿಯಿತೆ?

ಚಂದು—ಆಗಲಿ. ಈಗ ನಾವು ಆ ಮಾಲಿಂಗ ಶೆಟ್ಟಿಯ ಮನೆಗೆ ಹೋಗಬೇಕು. ಅವನು ಹೊರಗೆ ಹೋದಾನು ಮತ್ತೆ. ಅವನ ಹತ್ತಿರ ಕೊಚ್ಚಿಯ ದೊಡ್ಡ ಕೋಳಿಯೊಂದಿದೆ. ನೀವು ಬಾರದೆ ಅವನದನ್ನು ಕೊಡಲಿಕ್ಕಿಲ್ಲ. ಕಿವಿಗೆಲ್ಲಾ ಒಂಟೆಗಿಂಟೆ ಹಾಕಿ, ಬಹಳ ಚಂದಮಾಡಿಟ್ಟಿದ್ದಾನೆ.

ಸಂಜೀವ—ಅವ ಕೊಡದೆ ಎಲ್ಲಿ ಹೋಗುತ್ತಾನೆ ನೋಡುವ, ನಡೆ.

(ಇಬ್ಬರೂ ಹೋಗುವರು)

೩ನೇ ದೃಶ್ಯ

[ಮಂಗಳೂರಿನ ಕೊಡಿಯಾಲಬೈಲಿನ ತನ್ನ ಮನೆಯ ಹಿಂದಿನ ಉದ್ಯಾನದಲ್ಲಿ ತಾರಾನಾಥನು ಚಿಂತಾಮಗ್ನನಾಗಿ ಕುಳಿತಿರುವಾಗ ಮನೋಹರನು ಸಿಳ್ಳು

ಹಾಕುತ್ತಾ ಬೆತ್ತ ಬೀಸಿಕೊಂಡು ಪ್ರವೇಶಿಸಿ, ತಾರಾನಾಥನನ್ನು ಕಂಡು, ವಿನೋದವಾಡುವನು.]

ಮನೋಹರ—ಇದೇನು ತಾರಾನಾಥ? ಇಂದು ಇಷ್ಟೊಂದು ಬೇಸರವೇಕೆ? (ತಾರಾನಾಥನು ಸುಮ್ಮನಿರುವನು. ಮನೋಹರನು ಅವನ ಭುಜ ಹಿಡಿದು ಕುಲುಕಿ)ಇಂದು ನನ್ನ ಮಿತ್ರನಿಗೇನಾಯಿತಪ್ಪ! ತಾರಾನಾಥ, ಹೇಳು, ನಿನ್ನ ಚಿಂತೆಯ ಅಂತರ್ಯವನ್ನು ಮನಬಿಚ್ಚಿ ಹೇಳು. ನಿನ್ನ ಆಪ್ತನಾದ ಮನೋಹರನು ನಿನಗಾಗಿ ಏನು ಮಾಡಲೂ ಸಿದ್ಧನಿರುವನು. (ತಾರಾನಾಥನು ಮತ್ತೂ ತಲೆಬಾಗಿ ಸುಮ್ಮನಿರುವನು. ಆಗ ಮನೋಹರನು ಅವನ ಗಡ್ಡ ಹಿಡಿದೆತ್ತಿ ಅತ್ಯಂತ ದುಃಖ ನಟಿಸಿ ದಿಟ್ಟಿಸಿ ನೋಡುವನು. ಈ ನಟನೆಯನ್ನು ಸಹಿಸಲಾರದೆ ತಾರಾನಾಥನು ನಕ್ಕುಬಿಡುವನು)

ತಾರಾನಾಥ—ಮನೋಹರ, ಈ ರೀತಿಯ ನಿನ್ನ ಹುಡುಗಾಟಿಕೆಯೇ ನಿನಗೆ ಕೇಡುಕು.

ಮನೋಹರ—ಆಗಲಿ, ನನ್ನ ಹುಡುಗಾಟಿಕೆಯೇ ನನಗೆ ಕೇಡುಕಾಗಲಿ. ಹುಡುಗಾಟಿಕೆಯಿಂದಲೇ ನಾನೀ ಲೋಕದಿಂದ ಅಡಗುವಂತಾಗಲಿ, ಅದೇ ನನಗೆ ಆನಂದ. ನಿನ್ನಂತೆ ನಾನು ಎಂದೆಂದಿಗೂ 'ಸೀರಿಯಸ್' (ಗಂಭೀರ) ಆಗಿರಲಾರೆ. ಇಡೀ ವಿಶ್ವವೇ ಆದೊಬ್ಬನ ಲೀಲಾಜಾಲವಾಗಿರುವಾಗ ಮೂರು ದಿವಸಗಳ ನಮ್ಮೀ ಜೀವಿತವನ್ನು ನಾವೇಕೆ ಲೀಲಾಪ್ರಾಯವಾಗಿ ಕಳೆಯಬಾರದು?

ತಾರಾನಾಥ—ಲೀಲೆಯಾವುದು? ಇಡೀ ವಿಶ್ವವೇ ಗಂಭೀರ ಸಮಸ್ಯೆಯಾಗಿ ಭಯಬೀರುತ್ತಿರುವುದು ಲೀಲೆಯೇ? ನಮ್ಮ ಜೀವನವೇ ಒಂದು ವಿಷಾದಾಂತ ನಾಟಕ. ನಾವೆಲ್ಲರೂ ನೀರ ಮೇಲಣ ಗುಳ್ಳೆಗಳಂತೆ ಒಂದೆರಡು ದಿವಸ ಈ ಲೋಕದಲ್ಲಿ ಉಳಿದು ಮತ್ತೆಲ್ಲಿಗೋ ಮಾಯವಾಗುವೆವು. ನಮ್ಮ ಜೀವನ ನಾಟಕದ ಸೂತ್ರಚಾಲಕನಾರು, ನಮ್ಮ ಪೂರ್ವಾಪರವೇನು ಎಂದು ವಿಚಾರ ಮಾಡಿದರೆ ಅನಂತ ಶೂನ್ಯವೇ ನಮ್ಮನ್ನು ಸುತ್ತುವುದು.

ಮನೋಹರ – ಹ! ಹ! ಹ! ಈ ಗಹನ ವಿಚಾರ ಯಾರಿಗೆ ಬೇಕು? ಜೀವನವೊಂದು ನಾಟಕವೆಂಬುದನ್ನು ನೀನೇ ಒಪ್ಪುವೆಯಷ್ಟೆ. ಅದು ವಿಶಾದಾಂತವಿರಲಿ, ಹರುಷಾಂತವಿರಲಿ, ಅದರಲ್ಲಿ ನಾನೊಬ್ಬ

ವಿದೂಷಕ. ಪರದೆ ಎತ್ತಿದೊಡನೆ ಓಡಿ ಬಂದು, ನಕ್ಕು ನಲಿದು, ಹಾಡಿ ಪಾಡಿ, ವಿನೋದವಾಡಿ, ಪರದೆ ಬಿದ್ದೊಡನೆಯೇ ಆನಂದದಿಂದ ಮರೆಯಾಗುವುದರ ಹೊರತು ಬೇರೆ ಯಾವ ಸಾರಾಸಾರ ವಿಚಾರವೂ ನನಗೆ ಬೇಡ. ವಿನೋದದಿಂದ ಬಂದು, ವಿನೋದದಿಂದಿದ್ದು, ವಿನೋದದಿಂದಲೇ ಸಾಗುವೆನು.

ತಾರಾನಾಥ—ಸಾಕು; ನಿನ್ನ ವಿನೋದಪರ ವರ್ತನೆಯೇ ನಿನ್ನ ತಾತ್ಸಾರಕ್ಕೆ ಕಾರಣವಾಗಿರುವುದು. ವಿನೋದದ ಹೊರತು ನಿನ್ನಿಂದೇನೂ ಸಾಗದೆಂದೇ ಹಲವರ ಅಭಿಪ್ರಾಯ. ನಿನ್ನ ಅಂತರ್ಯದ ತಿರುಳನ್ನು ಅವರೇನು ಬಲ್ಲರು?

ಮನೋಹರ—ನನ್ನಾಪ್ತನಾದ ನೀನು ತಿಳಿದುಕೊಂಡರೆ ಸರಿ. ಇತರರಿಂದ ನನಗೇನಾಗಬೇಕು?

ತಾರಾನಾಥ—ನಿನ್ನ ಮಿತ್ರನೀಗ ಅಸಹಾಯಕನಾಗಿರುವನು. ಮನೋರಮೆಯೂ 'ಗಿಲಿಟಿ'ಗೆ ಮರುಳಾಗುವಳೆಂದು ನಾನು ಕನಸಿನಲ್ಲಿಯೂ ನೆನಸಿರಲಿಲ್ಲ.

ಮನೋಹರ—ಏನು? ಸಂಗತಿ ಏನು?

ತಾರಾನಾಥ—ಸಂಗತಿಯಿಷ್ಟೆ-ಮನೋಹರನಿಗೆ ಮನೋರಮೆಯು ದೊರಕುವ ಹಾಗಿಲ್ಲ.

ಮನೋಹರ—ಹ! ಹ! ಮನೋಹರನಿಗೆ ಮನೋರಮೆಯೊಬ್ಬಳಲ್ಲ, ಸಾವಿರ ಮಂದಿ ದೊರಕುವರು.

ತಾರಾನಾಥ—ಮನೋಹರ, ನಿನ್ನ ತಮಾಷೆಯನ್ನೆಲ್ಲಾ ನಿಲ್ಲಿಸಿ, 'ಸೀರಿಯಸ್ಸಾ'ಗಿದ್ದರೆ, ಸಂಗತಿಯನ್ನೆಲ್ಲಾ ತಿಳಿಸುವೆನು.

ಮನೋಹರ—ಆಯಿತು 'ಸೀರಿಯಸ್ಸು!' (ಬಾಯಿ ಮುಚ್ಚಿ ಕೈಕಟ್ಟಿ ನಿಲ್ಲುವನು)

ತಾರಾನಾಥ—ನಾನೀಗ ನಗೆಗೀಡಾದುದಲ್ಲದೆ ನಿನಗೂ ಆದರ ಪಾಲು ಕೊಟ್ಟಂತಾಯಿತು. ನಮ್ಮಿಬ್ಬರ ಗಾಢ ಮೈತ್ರಿಯನ್ನು ಸಂಬಂಧದ ಬಂಧದಿಂದ ದೃಢಪಡಿಸಬೇಕೆಂಬ ನನ್ನ ಪ್ರಯತ್ನವು ನಿಷ್ಫಲವಾಯಿತು. ನಿನ್ನೆ ಮಾವನೂ ತಾಯಿಯೂ ಮನೋರಮೆಯೂ ಆ ಸಂಜೀವನ

ಆಡಂಬರ, ದರ್ಪ, ದೌಲತ್ತಿಗೆ ಮರುಳಾಗಿ ಅವನಿಗೇನೇ ನೆಂಟಸ್ತಿಕೆಯನ್ನು ನಿಶ್ಚಯಮಾಡಿಬಿಟ್ಟರು. ನಾನು ಎಷ್ಟು ಹೇಳಿದರೂ ಕೇಳಲಿಲ್ಲ. ಅವನು ಘನಕುಟುಂಬದವನಂತೆ! ಹೇರಳ ಆಸ್ತಿ ಬದುಕುಳ್ಳವನಂತೆ! ವಿಶೇಷ 'ಕಾರ್ ಭಾರಿಯಂತೆ'!

ಮನೋಹರ—ನಾನು?

ತಾರಾನಾಥ ನೀನು ಬಡ ಸರಕಾರಿ ನೌಕರನೊಬ್ಬನ ಮಗನಂತೆ! ಮನೆತನವಾಗಲಿ, ಆಸ್ತಿ ಬದುಕಾಗಲಿ ಇಲ್ಲದವನಂತೆ! ತಂದೆಯೇನೊ ಗಳಿಸಿರುವ ಅಲ್ಪ ಸ್ವಲ್ಪ ಹಣವನ್ನು ಬೇಂಕಿನಲ್ಲಿಟ್ಟು ಅದರ ಬಡ್ಡಿಯಿಂದ ಜೀವನ ನಿರ್ವಹಿಸುವವನಂತೆ! ಮುಖ್ಯವಾಗಿ ಸದಾ ಹುಡುಗಾಟಿಕೆ ಮಾಡುತ್ತಾ ಯಾವ ಕೆಲಸಕ್ಕೂ ಬಾರದವನಂತೆ!

ಮನೋಹರ—ಅವರು ಹೇಳುವುದು ತಪ್ಪೇ? ಹಳ್ಳಿರಿನ ಒಂದು ಮನೆ, ಬೇಂಕಿನ ಸ್ವಲ್ಪ ಹಣ, ಹುಡುಗಾಟಿಕೆಯಲ್ಲದೆ ಮತ್ತೆ ನನಗೇನುಂಟು? ನೀನೇನೋ ಕುರುಡು ಮೈತ್ರಿಯಿಂದ ನನ್ನ ಕೊರತೆಗಳಿಗೆ ಕಣ್ಮುಚ್ಚಿದ್ದರೆ ಅವರೂ ಹಾಗೆ ಮಾಡುವರೇ?

ತಾರಾನಾಥ—ನಿನ್ನನ್ನು ಈ ರೀತಿ ವಂಚಿಸಿದುದಕ್ಕಾಗಿ ಕ್ಷಮಿಸು ಮಿತ್ರ! ನಮ್ಮಿಬ್ಬರ ಮೈತ್ರಿಯು ಎಂದಿನಂತೆಯೇ ಇರುವುದಲ್ಲವೇ?

ಮನೋಹರ—ಛೆ! ಛೆ! ಇದೇನು ಮಾತು? ನಮ್ಮ ಮೈತ್ರಿಯು ಮನೋರಮೆಯಿಂದುಂಟಾದುದೆ? ಇದೇ ನಿನ್ನ ಭ್ರಾಂತಿ! ನಿನ್ನ ತಂಗಿಯು ಸಂಜೀವನನ್ನು ಮದುವೆಯಾಗುವುದು ನನಗೆ ಸಂತೋಷವೆ. ನಾನೂ ಮದುವೆಗೆ ಬರುವೆನು.

ತಾರಾನಾಥ—ಸಂಜೀವ-ಮನೋರಮೆಯರ ದಾಂಪತ್ಯವು ಸುಖಕರವಾಗದೆಂದು ನನ್ನ ಅಂತರ್ಯವು ಹೇಳುತ್ತದೆ. ಜನರು ಆಡಂಬರಕ್ಕೆ ಎಷ್ಟು ಬೇಗ ಮರುಳಾಗುವರು!

ಮನೋಹರ—ಪರಿಚಿತ ವಸ್ತುವಿನಲ್ಲಿ ತಾತ್ಸಾರ, ಅಪರಿಚಿತವಾದುದರಲ್ಲಿ ಪುರಸ್ಕಾರವುಂಟಾಗುವುದು ಸ್ವಾಭಾವಿಕ. ಪ್ರತಿದಿನ ಮೂಡಿ ಮುಳುಗುವ ಸೂರ್ಯ ಚಂದ್ರರನ್ನು ನೋಡಲು ಆತುರಪಡು

ವವರಾರು? ಆದರೆ, ಎಂದಾದರೂ ಒಮ್ಮೆ ಮೂಡುವ ಧೂಮಕೇತು ವೆಂದರೆ ಜನರಲ್ಲಿ ಅದೆಷ್ಟು ಉತ್ಸುಕತೆ!

ತಾರಾನಾಥ—ನಿಜ. ಕಾಲಡಿಯ ಶ್ವೇತಶಿಲೆಯು ಮುರಕಲ್ಲಿಗೆ ಸಮ. ದೂರದ ಬೋರ್ಗಲ್ಲಾದರೂ ಮನೋಹರ! ನೀನಂದಂತೆ ಸಂಜೀವನು ಮನೋರಮೆಗೆ ಧೂಮಕೇತುಪ್ರಾಯನಾಗುವನೆಂಬ ಭೀತಿಯು ನನ್ನಲ್ಲೀಗ ಬಲವಾಗಿದೆ.

ಮನೋಹರ—ಛೆ! ಛೆ! ಏನೆಲ್ಲಾ ಅಶುಭ ನುಡಿಯುವೆ? ಅವರ ದಾಂಪತ್ಯವು ಚಿರ ಸುಖದಾಯಕವಾಗಲಿ! ಎಂಥವನನ್ನಾದರೂ ಮಾರ್ಪಡಿಸುವ ವಿಚಿತ್ರ ಶಕ್ತಿಯು ವಿವಾಹಕ್ಕಿರುವುದು.

ತಾರಾನಾಥ—ವಿಚಾರದ ಗೊಡವೆಯೇ ಇಲ್ಲದೆ ಸ್ವೇಚ್ಛಾಚಾರ ದಿಂದ ಇರುವ ಪಶುಗಳನ್ನು ಏನು ತಾನೆ ಮಾರ್ಪಡಿಸಬಲ್ಲುದು?

ಮನೋಹರ—ಮೊದಲೇ ಹೀಗೆ ನಿರ್ಣೈಸಿಬಿಡುವುದು ಶುದ್ಧ ತಪ್ಪು, ಅದಂತಿರಲಿ, ನೀನು ಇಂದಿರೆಯನ್ನೇ ವಿವಾಹವಾಗುವುದು ನಿಶ್ಚಯ ವಲ್ಲವೇ? ಅವಳ ತಂದೆಯಂತೂ ಉಡುಪಿಯ ಪ್ರಸಿದ್ಧ ವಕೀಲರು.

ತಾರಾನಾಥ—ನಾನೇನೋ ಹಾಗೆಯೇ ನಿರ್ಧರಿಸಿರುವೆನು. ಆದರೆ ತಾಯಿಯು ಅದಕ್ಕೆ ವಿರೋಧಪಿರುವರು. ವರದಕ್ಷಿಣೆಯಿಲ್ಲದೆ ವಿವಾಹ ವಾಗುವುದೆಂದರೆ ಶುದ್ಧ ಮೂರ್ಖತನವೆಂದೇ ಅವರ ಅಭಿಮತ. ಇದು ಹೊರತು ವಿದ್ಯಾವಂತ ಹುಡುಗಿಯರೆಂದರೇನೇ ಅವರಿಗೆ ತಿರಸ್ಕಾರ ವಿರುವುದು.

ಮನೋಹರ—ತಾಯಿಯು ಏನೇ ಹೇಳಲಿ. ಮದುವೆಯಾಗಿ ದಾಂಪತ್ಯಜೀವನ ನಡಿಸುವವನು ನೀನು. ನೀನು ನಿನ್ನ ಮನೋ ನಿರ್ಧಾರದಂತೆಯೇ ನಡೆಯಬೇಕು. ನಾನು ಇಂದಿರೆಯ ಕುರಿತು ಇನ್ನೂ ಕೆಲವರೊಡನೆ ವಿಚಾರಿಸಿರುವೆನು. ಅವಳು ಸಚ್ಚರಿತಳೂ, ವಿನಯ ಶೀಲಳೂ, ಸರಳ ನಡತೆಯವಳೂ ಇದ್ದು ಈಗಿನ ತರುಣಿಯರಿಗೊಂದು ಮಾದರಿಯೇ ಆಗಿರುವಳಂತೆ. ಅಂತಹ ತರುಣಿಯನ್ನು ವರಿಸುವದೊಂದು ಭಾಗ್ಯವೇ ಸರಿ.

ತಾರಾನಾಥ—ಏನಾಗುವುದೋ ನೋಡಬೇಕು. ಆಗುವುದಾದರೆ ನನಗೂ ಮನೋರಮೆಗೂ ಒಟ್ಟಿಗೆ ಮದುವೆಯಾಗುವುದು.

ಮನೋಹರ—ನಿನ್ನ ಅಭಿಪ್ರಾಯವು ಯುಕ್ತವಾದುದು. ಇರಲಿ. (ವಾಚು ನೋಡಿ) ಹೊತ್ತಾಯಿತು. ಇಂದು ಯುವಕ ಸಂಘದ ಸಭೆಯಿದೆ. ಅಲ್ಲಿ ನನಗೆ ಪ್ರಹಸನ ಪದ್ಯವೊಂದನ್ನು ಹಾಡಲಿದೆ. ನೀನೂ ಬರುವೆಯಾ?

ತಾರಾನಾಥ—ನಿಜವಾಗಿಯೂ ನಿನ್ನ ಮನೋನಿಗ್ರಹವು ವಿಚಿತ್ರವಾದುದು! ಇಂದು ನೀನು ಪ್ರಹಸನ ಪದ್ಯ ಹಾಡಬಲ್ಲೆಯಾ?

ಮನೋಹರ—'ಬೇಶಾ'ಗಿ ಹಾಡಬಲ್ಲೆನು! ನೋಡು ಬಾ.

(ಕೈಹಿಡಿದು ಕರೆದುಕೊಂಡು ಹೋಗುವನು.)

೪ನೇ ದೃಶ್ಯ

[ಸಂಜೀವನು ತನ್ನ ಅತ್ತೆ ತಂಗಮ್ಮನ ಮನೆಗೆ ಹೋಗುತ್ತಿರುವಾಗ ಬೀದಿಯಲ್ಲಿ, ಅವಳನ್ನು ಸಂಪೂರ್ಣವಾಗಿ ಒಲಿಸಿಕೊಂಡು ಹಣಪಡೆವ ಆಲೋಚನೆ ನಡಿಸುವನು.]

ಸಂಜೀವ—(ಸ್ವಗತ) ಇದಕ್ಕೇ ದೇವರ ಸಹಾಯವೆನ್ನುವುದು. ಮನೋರಮೆಯನ್ನು ಮದುವೆಯಾಗಿ ಕೆಲವು ತಿಂಗಳು ಕೂಡ ಕಳೆಯಲಿಲ್ಲ ಅತ್ತೆಯಿಂದ ಹಣ ಸುಲಿಯುಲು ದೊಡ್ಡ ತಡೆಯಾಗಿದ್ದ ಆ ಚಿಕ್ಕಪ್ಪನು ತೀರಿ ಹೋದನು. ಇನ್ನು ಅವರ ಮನಸ್ಸನ್ನು ಒಲಿಸಿಬಿಟ್ಟರೆ ನಾನೇ ಇಟ್ಟದ್ದು, ನಾನೇ ಬಿಟ್ಟದ್ದು. ನಾನು ಚಿಕ್ಕಪ್ಪನ ಕ್ರಿಯೆಗೆ ೫೦೦ ಹೊರೆ ಕಳುಹಿಸಿದ ಮೇಲಂತೂ ಅತ್ತೆಗೆ ನನ್ನ ಮೇಲೆ ತುಂಬಾ ಪ್ರೇಮವುಂಟಾಗಿರುವುದು. ಅವರ ಸಂತೋಷಕ್ಕೆ ಪಾರವೇ ಇಲ್ಲ. ಮಂಗಳೂರಲ್ಲಿ ಅಷ್ಟೊಂದು ಸಂಭ್ರಮದಿಂದ ಹೊರೆಹೋದುದೇ ಇಲ್ಲವಂತೆ. ತಾರಾನಾಥನಿಂದೇನೂ ಸಾಗದೆಂಬುದು ಅವರಿಗೀಗ ದೃಢವಾಗಿದೆ. ನನ್ನ ಮೇಲೆ ವಿಶ್ವಾಸವು ಹೆಚ್ಚುತ್ತಿದೆ. ತಾರಾನಾಥನು ಆ ಇಂದಿರೆಯನ್ನು ಮದುವೆಯಾದ ಮೇಲಂತೂ ಅತ್ತೆಯವರು ಅವನ ವಿಷಯದಲ್ಲಿ ಸಂಪೂರ್ಣ ವಿರೋಧ ತಾಳಿದ್ದಾರೆ. ಇಂದಿರೆಯು ರೀತಿ ಅವರಿಗೆ ಒಂದಿಷ್ಟು

ಸರಿಹೋಗುವುದಿಲ್ಲ. ಎಣ್ಣೆ ನೀರಿನಂತಾಗಿದೆ ಅವರ ಸಂಬಂಧ. ವಿದ್ಯಾವಂತಳಂತೆ ಅವಳು. ಈ ವಿದ್ಯಾವಂತೆಯರು ಗಂಡಂದಿರ ಕೊರಳಿಗೊಂದು ಕೊರಡೇ ಸರಿ. ಆದರೆ ನನಗಿದು ಅನುಕೂಲವೇ ಆಯಿತು. ನನ್ನ ಪುಣ್ಯ. ಇರಲಿ. ಈಗ ಚಿಕ್ಕಪ್ಪನಿಗೆ ವೈಕುಂಠವಾಗಬೇಕೆಂದು ಜನ ಬಂದಿರುವುದಲ್ಲಾ. ತಾರಾನಾಥನೂ ಇಂದಿರೆಯೂ ಅದಕ್ಕೆ ಬದ್ಧ ವಿರೋಧವಿರುವುದರಿಂದಲೇ ಅತ್ತೆಯು ರೇಗಿಬಿದ್ದು ನಾನು ಕೂಡಲೆ ಬಂದು ಹೋಗಬೇಕೆಂದು ಜನ ಕಳುಹಿಸಿದ್ದಾಗಿರಬೇಕು. ಅತ್ತೆ ಹೇಳಿದಂತೆ ಕುಣಿದು ಅವರನ್ನು ಸಂಪೂರ್ಣ ನನ್ನ ವಶಮಾಡಿಕೊಳ್ಳಬೇಕು. ಆ ಮೇಲೆ ಅವರಿಂದ ನನಗೆ ಬೇಕಷ್ಟು ಹಣ ಪಡೆಯಬಹುದು. ಹೆಂಗಸರು ಒಲಿದು ಬಿಟ್ಟರೆಂದರೆ ಅವರಿಂದ ಏನನ್ನಾದರೂ ಮಾಡಿಸಬಹುದು. ಈಗ ನನ್ನೊಂದಿಗೇನೇ ನಾರಾಯಣ ತಂತ್ರಿಗಳನ್ನು ಕರದೊಯ್ದು ವೈಕುಂಠ ಮಾಡಿಸುವ ವ್ಯವಸ್ಥೆಯನ್ನೆಲ್ಲಾ ಮಾಡುವೆನು. (ಹೋಗುವನು)

೫ನೇ ದೃಶ್ಯ

[ತಾರಾನಾಥನ ಮನೆ. ಮಾವನ ವೈಕುಂಠ ಸಮಾರಾಧನೆಯ ವಿಷಯದಲ್ಲಿ ತಾರಾನಾಥನಿಗೂ ಅವನ ತಾಯಿ ತುಂಗಮ್ಮನಿಗೂ ವಾದವಾಗುವುದು.]

ತಾರಾನಾಥ—ಒಬ್ಬನೇ ಮಾವ, ಮುದಿ ಪ್ರಾಯದಲ್ಲಿ ಸತ್ತವರು, ಸಂಭ್ರಮದಿಂದ 'ಬೊಜ್ಜ' ಮಾಡಬೇಕೆಂದು ೮೦೦ ರೂಪಾಯಿ ವರೆಗೆ ವೆಚ್ಚಮಾಡಿ ಸಿಕ್ಕಿದವರಿಗೆಲ್ಲಾ ತಿನ್ನಿಸಿದ್ದಾಯಿತು. ಭಾವನು ೫೦೦ ಹೊರೆಗಳ ಆಡಂಬರಕ್ಕಾಗಿ ಕಡಿಮೆಯೆಂದರೆ ೩೦೦ ರೂಪಾಯಿ ವ್ಯಯ ಮಾಡಿರಬಹುದು. ಈ ಡಂಭಾಚಾರದಿಂದ ಏನು ಸಾರ್ಥಕವೋ ನನಗೆ ತಿಳಿಯದು.

ತುಂಗಮ್ಮ—ಎಲ್ಲವೂ ಡಂಭಾಚಾರ ನಿನಗೆ! ನಿನ್ನ ಹೆಂಡತಿ ಮನೆಯವರು ಒಂದು ಹೊರೆ ಸಹ ಕಳುಹಿಸಲಿಲ್ಲವೆಂದೋ? ಇಷ್ಟೊಂದು ಗೌಜಿಯಿಂದ ಹೊರೆ ಬಂದುದು ನಾನು ನೋಡಿಯೂ ಇಲ್ಲ, ಕೇಳಿಯೂ

ಇಲ್ಲ. ಅಣ್ಣನಂತಹ 'ಭರಮಿ'ನ ಮನುಷ್ಯನಿಗೆ 'ವೈಕುಂಠ' ಮಾಡದಿದ್ದರೆ ಜನರೇನೆಂದಾರು?

ತಾರಾನಾಥ—ಜನರು ಬೇಕಾದ್ದು ಹೇಳಿಕೊಳ್ಳಲಿ! 'ಬೊಜ್ಜ' ಮಾಡಿದುದೇ ಸಾಕು. ಇನ್ನು 'ವೈಕುಂಠ' ಬೇಡ.

ತುಂಗಮ್ಮ—ಈಗ ನಿನಗೆ ಯಾವುದೂ ಬೇಡ. ನಿನ್ನ ಹೆಂಡತಿಯಾಯಿತು; ನೀನಾಯಿತು. ಇಡೀ ದಿನ ಉಪ್ಪರಿಗೆಯಲ್ಲಿ ನೀವೇನು ಮಾಡುತ್ತಿರುವುದೋ ತಿಳಿಯದು. ಅವಳು ಒಂದೂ ಕೆಲಸ ಮಾಡಲಿಕ್ಕಿಲ್ಲ. ವಕೀಲರ ಮಗಳಲ್ಲವೆ? ಇಂತಹ ಗೊಂಬೆಗಳನ್ನು ತಂದಿಟ್ಟುಕೊಂಡರೆ ಮನೆಗೆ ಮತ್ತೆ ಹಾರೆ ಗುದ್ದಲಿ ಹಾಕುವುದು ಬೇಡ!

ತಾರಾನಾಥ—ಏನು! ಅವಳೇನು ಮಾಡಿದಳು?

ತುಂಗಮ್ಮ—ಮಗನು, ಹೆತ್ತು ಹೊತ್ತು ಸಲಹಿದ ತಾಯಿಯ ಕೈಬಿಟ್ಟು, ನಿನ್ನೆ ಬಂದ ಹೆಂಡತಿಯ ಮಾತಿನಂತೆ ಕುಣಿಯುತ್ತಿರುವಾಗ ನಾನೇನೆಂದು ಹೇಳಲಿ?

ತಾರಾನಾಥ—ನಾನು ಹೆಂಡತಿ ಹೇಳಿದಂತೆ ಕುಣಿದುದೇನು?

ತುಂಗಮ್ಮ—ಅದನ್ನೆಲ್ಲಾ ಹೇಳಿ ಕೇಳಿ ಪ್ರಯೋಜನವಿಲ್ಲ. ನನ್ನ ಮನಸ್ಸಿಗೂ ಆ 'ಜುಮಾದಿ'ಗೂ ಗೊತ್ತದು. ಅದಂತಿರಲಿ. ಈಗ ಅಣ್ಣನ 'ವೈಕುಂಠ' ಬೇಗನೆ ಆಗಬೇಕು. ನಾನು ಸಂಜೀವನಿಗೆ ಜನ ಕಳುಹಿಸಿದ್ದೇನೆ. ಅವನು ಬರುವಾಗ ತಂತ್ರಿಗಳನ್ನು ಕರೆದುಕೊಂಡೇ ಬಂದಾನು. ಇಂಗ್ಲಿಷ್ ಕಲಿತ ನಿಮ್ಮ ಮಾತನ್ನೆಲ್ಲಾ ಕೇಳಿದರೆ ಸಂತಾನ ನಿಸ್ಸಂತಾನವಾಗಿ ಹೋದೀತು!

ತಾರಾನಾಥ—ಕ್ಷೌರಮಾಡಿಸಿ ದಿನ ಕೇಳಿದಂತೆ ಮಾಡುವುದನ್ನೆಲ್ಲಾ ಮಾಡಿ ಅನಂತರ ನನ್ನೊಡನೆ ಕೇಳುವುದೇನಿದೆ?

(ಸಂಜೀವ, ನಾರಾಯಣ ತಂತ್ರಿಗಳ ಪ್ರವೇಶ. ತುಂಗಮ್ಮ ಸಂತೋಷದಿಂದ ಎದ್ದು ನಿಲ್ಲುವಳು. ತಾರಾನಾಥನೂ ಎದ್ದು ಸುಮ್ಮನೆ ನಿಲ್ಲುವನು.)

ಸಂಜೀವ—ತಂತ್ರಿಗಳೇ, ಕುಳಿತುಕೊಳ್ಳಿ. (ತುಂಗಮ್ಮನೊಡನೆ) ತಂತ್ರಿಗಳಿಗೆ ಸಿಯಾಳ ತರಿಸಿರಿ,- ಬಾಯಾರಿಕೆಯಾಗುತ್ತದೋ ಏನೋ.

ತುಂಗಮ್ಮ (ಗಡಿಬಿಡಿಯಿಂದ) ಸುಬ್ಬ, ಸುಬ್ಬ, ಕರೆಯುತ್ತ ಒಳಸರಿಯುವಳು)

ತಂತ್ರಿ–ಸೀಯಾಳ ಕೊಯ್ಯುವುದಾದರೆ ಬೆಳೆದುದನ್ನು ಕೊಯ್ಯಲಿ. ಹೋಗು, ಹೇಳು. ಸಂಜೀವ, ಹೇಳು ಎಳತು ಪ್ರಯೋಜನವಿಲ್ಲ.

ತಾರಾನಾಥ—(ನಕ್ಕು) ಅದೇನು ಸ್ವಾಮಿ? ಬೆಳೆದ ಸೀಯಾಳದಲ್ಲಿ ನೀರು ಕಡಿಮೆಯಲ್ಲವೇ?

ತಂತ್ರಿ ನಮಗೆ ಬಾಯಾರಿಕೆಗೆ ನೀರಾಗಬೇಕು; ಪದಾರ್ಥಕ್ಕೆ ಕಾಯಿಯಾಗಬೇಕು.

ತಾರಾನಾಥ—ಹಾಗಾದರೆ ತೆಂಗಿನಕಾಯಿ ಕೊಟ್ಟರಾಗದೆ?

ತಂತ್ರಿ—ಮತ್ತೂ ಒಳ್ಳೇದಾಯಿತು.

ತುಂಗಮ್ಮ—(ಪ್ರವೇಶಿಸಿ) ಸುಬ್ಬನೆಲ್ಲಿ ಸತ್ತಿದ್ದಾನೋ ಏನೋ! ತಾರಾನಾಥ, ಸ್ವಲ್ಪ ಹೋಗಿ ಕರೆಯಪ್ಪ! ಪಾಪ! ತಂತ್ರಿಗಳಿಗೆ ಎಷ್ಟು ಬಾಯಾರಿಕೆಯಾಗುತ್ತದೋ ಏನೋ! ಹೋಗು, ಬೇಗ ಹೋಗು.

ತಾರಾನಾಥ—ಇಷ್ಟು ಗಡಿಬಿಡಿಯೇಕೆ? ತಂತ್ರಿಗಳಿಗೆ ಸೀಯಾಳವೇ ಆಗಬೇಕೆಂದಿಲ್ಲ. ತೆಂಗಿನಕಾಯಿಯೂ ಆದೀತಂತೆ. ಅವರ 'ಬಾಯಾರಿಕೆ'ಯೇ ಬೇರೆ!

ತುಂಗಮ್ಮ- ಹಾಗಾದರೆ, ನಾಲ್ಕು ಕಾಯಿಗಳನ್ನಾದರೂ ತಂದು ಕೊಡು.

ತಾರಾನಾಥ ಹೋಗುವಾಗ ಕೊಟ್ಟರೆ ಸರಿ. ಏನು ಅವಸರ?

ತಂತ್ರಿ—ಆಯಿತು. ಹೋಗುವಾಗ ಕೊಟ್ಟರೆ ಸಾಕು. ಈಗ ಗಡಿಬಿಡಿಬೇಡ. ತಮ್ಮಯ ಶೆಟ್ಟಿಗೆ 'ವೈಕುಂಠ' ಸಮಾರಾಧನೆಯಾಗಬೇಕೆಂದು ಸಂಜೀವ ಹೇಳಿದ. ಆಗಬೇಕಪ್ಪ ಆ ಪುಣ್ಯಾತ್ಮನಿಗೆ.

ತಾರಾನಾಥ—ತಂತ್ರಿಗಳೇ, ನನಗೆ ನಿಮ್ಮೊಡನೆ ಸ್ವಲ್ಪ ಮಾತನಾಡಲಿದೆ.

ತಂತ್ರಿ—ಧಾರಾಳವಾಗಿ ಮಾತನಾಡಬಹುದು ನಾವು ನಿಮ್ಮವರೇ ಆಗಿದ್ದೇವೆ. ತಮ್ಮಯ ಶೆಟ್ಟಿಗೂ ನನಗೂ ಇದ್ದ ಸ್ನೇಹವೆಂದರೆ ಅಷ್ಟಿಷ್ಟಲ್ಲ. ನಾನು ಹೊಸ ಮನೆ ಕಟ್ಟಿಸುವಾಗ ಒಂದು ದೊಡ್ಡ ಹಲಸಿನ ಮರ, ನಾಲ್ಕು ತಾಳಿ ಮರ ಸಹಾಯಮಾಡಿದ್ದಾನೆ. ಮಹಾರಾಯ; ಒಳ್ಳೆಯವ.

ತಾರಾನಾಥ– ಅದಂತಿರಲಿ. ವೈಕುಂಠ ಸಮಾರಾಧನೆ ಎಂದರೇನು?

ತಂತ್ರಿ—ವೈಕುಂಠವೆಂದರೆ ವಿಷ್ಣುಲೋಕ. ಸತ್ತ ಮೇಲೆ ಜೀವವು ವಿಷ್ಣು ಸಾನ್ನಿಧ್ಯಕ್ಕೆ ಸೇರುವಂತೆ ಮಾಡುವ ಸಂಸ್ಕಾರವೇ ವೈಕುಂಠ ಸಮಾರಾಧನೆ.

ತಾರಾನಾಥ - ವಿಷ್ಣುವೆಂದರೆ ಯಾರು?

ತಂತ್ರಿ—ವಿಷ್ಣುವೆಂದರೆ ಯಾರು! ಇದೇನು ಪ್ರಶ್ನೆ! ವಿಷ್ಣುವೆಂದರೆ ದೇವರು, ಪರಮಾತ್ಮ, ಪರಬ್ರಹ್ಮ.

ತಾರಾನಾಥ—ಮತ್ತೆ ಈಶ್ವರನೆಂದರೆ ಯಾರು?

ತಂತ್ರಿ — ಈಶ್ವರನೆಂದರೆ ಬೇರೆ,ಅವನು ಕೈಲಾಸವಾಸಿ ಶಂಭು, ಶಿವ, ಶಂಕರನೆಂದೂ ಅವನಿಗೆ ಹೆಸರಿದೆ.

ತಾರಾನಾಥ— ಹಾಗಾದರೆ, ಅವರು ಬೇರೆ ಬೇರೆಯೇ?

ತಂತ್ರಿ--ಹೌದು; ಬೇರೆ ಬೇರೆ. ವಿಷ್ಣು ಲಕ್ಷ್ಮೀರಮಣ. ಈಶ್ವರ ಪಾರ್ವತೀ ವಲ್ಲಭ.

ತಾರಾನಾಥ—ಸರಸ್ವತಿಯ ಗಂಡನೊಬ್ಬನಿದ್ದಾನಲ್ಲ? ಅವನೆಲ್ಲಿರುವುದು?

ತಂತ್ರಿ—ಇದ್ದಾನೆ, ಬ್ರಹ್ಮ. ಅವನಿರುವುದು ಬ್ರಹ್ಮಲೋಕದಲ್ಲಿ

ತಾರಾನಾಥ— ಇವರಲ್ಲಿ ಯಾರು ಶ್ರೇಷ್ಠ? ಯಾವ ಲೋಕ ಮೇಲಾದುದು?

ತಂತ್ರಿ - ವಿಷ್ಣುವೇ ಶ್ರೇಷ್ಠ ವೈಕುಂಠವೇ ಮೇಲು

ತಾರಾನಾಥ—ನೀವು ಶೈವರೋ ವೈಷ್ಣವರೋ?

ತಂತ್ರಿ— ವೈಷ್ಣವರು.

ತಾರಾನಾಥ—ನಾವು ಶೈವರು ಸ್ವಾಮಿ. ನನ್ನ ಮಾವನೂ ಶೈವ ರುದ್ರಾಕ್ಷಿ ಸರ ಧರಿಸಿ ವಿಭೂತಿ ಹಚ್ಚುತ್ತಿದ್ದರು. 'ಶಿವ ಶಿವ' ಎಂದೇ ಸದಾ ಧ್ಯಾನಿಸುತ್ತಿದ್ದರು. ಅಂದಮೇಲೆ ನಾವೇಕೆ ವೈಕುಂಠ ಸಮಾರಾಧನೆ ಮಾಡಬೇಕು? ಕೈಲಾಸ ಸಮಾರಾಧನೆ ಮಾಡಿದರಾಗದೆ?

ತಂತ್ರಿ—ವಿಚಾರಮಾಡಿದರೆ ಎಲ್ಲಾ ಒಂದೆ. ಏನು ಮಾಡಿದರೂ ಹೋಗುವುದು ಒಬ್ಬನಿಗೇನೇ. "ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ"

ತಾರಾನಾಥ--ಆ ಒಬ್ಬನಾರು? ಅವನಿಗೆ ಏನಾದರೂ ಏಕೆ ಮಾಡ ಬೇಕು?

ತಂತ್ರಿ—ಇಂಗ್ಲಿಷ್ ಕಲಿತ ನಿಮ್ಮ ಮಾತು ಕೇಳಿದರೆ ಏನೂ ಇಲ್ಲ!

ತಾರಾನಾಥ—ಏನೂ ಇಲ್ಲವೇಕೆ? ಇರುವುದೆಲ್ಲಾ ಇದೆ. ಇಲ್ಲದುದು ಯಾವುದೂ ಇಲ್ಲ.

ತಂತ್ರಿ—ಆ ವೇದಾಂತ ಕೇಳುವುದಕ್ಕೆ ಬಂದಿಲ್ಲ ನಾನು. ಹೊತ್ತಾಯಿತು. ಐತಪ್ಪ ಶೆಟ್ರ ಮನೆಗೆ ನಿಮಿತ್ತ ಹೇಳುವುದಕ್ಕೆ ಹೋಗಬೇಕು. ಅನಂತರ ರಾಮಣ್ಣಾಳ್ವರ ಓಟದ ಕೋಣಕ್ಕೆ ಹಗ್ಗ ಮಂತ್ರಿಸಲಿಕ್ಕಿದೆ. ವೈಕುಂಠ ಸಮಾರಾಧನೆ ಆಗಬೇಕೋ ಬೇಡವೊ? ಹೇಳಿ.

ತುಂಗಮ್ಮ—ಆಗಬೇಕು ಸ್ವಾಮಿ, ಅವಶ್ಯ ಆಗಬೇಕು. ಅದಕ್ಕಾಗಿಯೇ ನಿಮ್ಮನ್ನು ಕರೆಸಿದುದು.

ಸಂಜೀವ—ಮುಖ್ಯವಾಗಿ ಅದಕ್ಕೆ ಏನೇನು ಬೇಕು ಹೇಳಿ.

ತಂತ್ರಿ—ಅದಕ್ಕೆ ಭೂದಾನ ಮತ್ತು ಗೋದಾನ ಮುಖ್ಯ. ಇನ್ನು ಬೇರೆ ದಾನಗಳು ಹಲವು ಬೇಕಾಗಿವೆ. ಅವುಗಳ ಪಟ್ಟಿಯನ್ನು ಮಾಡಿ ಕೊಡುತ್ತೇನೆ.

ತಾರಾನಾಥ—ಖರ್ಚಿಗೆ ಎಷ್ಟು ಬೇಕಾದೀತು?

ತಂತ್ರಿ—ಅದು ಅವರವರ ಮನೆತನ, ಗೌರವಗಳನ್ನು ಹೊಂದಿಕೊಂಡಿದೆ. ನಿಮ್ಮ ಘನಸ್ತಿಕೆಗೆ ಕನಿಷ್ಠಪಕ್ಷ ಐನೂರು ರೂಪಾಯಿಯಾದರೂ ಬೇಕು.

ತಾರಾನಾಥ—ಸಿಕ್ಕ ಸಿಕ್ಕವರ ಹೊಟ್ಟೆ ತುಂಬಿಸುವ ಘನಸ್ತಿಕೆಗೆ ಬೆಂಕಿಬೀಳಲಿ! ಮೂಢ ಜನರ ಅಂಧಶ್ರದ್ಧೆಯನ್ನು ಹುರಿಗೊಳಿಸಿ ಉದರ ಪೋಷಣೆ ಮಾಡುವ ನಿಮ್ಮ ಈ ವೃತ್ತಿಯು ಮಣ್ಣುಗೂಡಲಿ! ನಿಮ್ಮ ಹೊಟ್ಟೆ ತುಂಬಿಸಿ, ನಿಮಗೆ ಭೂದಾನ, ಗೋದಾನ ಮೊದಲಾದ ದಾನಗಳನ್ನು ಕೊಟ್ಟು, ಕೈ ತುಂಬಾ ದಕ್ಷಿಣೆಯಿತ್ತು, ಸಂತೋಷಗೊಳಿಸಿದರೆ ಮಾತ್ರ ಆತ್ಮನಾಗಲಿ, ಪರಮಾತ್ಮನಾಗಲಿ ಸಂತೃಪ್ತಿಹೊಂದುವರೆಂಬುದು ಲೋಕದ ಸೋಜಿಗಗಳಲ್ಲಿ ಅತ್ಯಂತ ಸೋಜಿಗವು. ಜನಸಾಮಾನ್ಯರನ್ನು ಸುಲಿಯುವುದಕ್ಕಾಗಿ ನಿಮ್ಮ ಪೂರ್ವಜರು ಇಚ್ಛಾನುಸಾರ ಕಲ್ಪಿಸಿ

ಬರೆದಿಟ್ಟಿರುವ ಪುರಾಣ ಶಾಸ್ತ್ರಗಳೇ ನಿಮ್ಮ ಪಿತ್ರಾರ್ಜಿತವು. ನೀವು ಜನತೆಯ ತಲೆಯೊಳಗೆ ತುರುಕಿಸಿರುವ ನಾನಾ ವಿಧಿ ನಿಯಮಗಳೇ ನಿಮ್ಮ ಪಿತ್ರಾರ್ಜಿತವನ್ನು ಭದ್ರಗೊಳಿಸುವ ಭವ್ಯಕೋಟೆಯು. ಜನರು ಸದ್ವಿಚಾರದ ಫಿರಂಗಿಗಳಿಂದ ಇದನ್ನು ಎಂದು ಭೇದಿಸುವರೊ! ಒಳಗಿರುವ ಸತ್ಯವೆಷ್ಟೆಂಬುದನ್ನು ಶೋಧಿಸಿ ನೋಡುವರೊ ದೇವರೇ ಬಲ್ಲ!

ತಂತ್ರಿ – ಅಯ್ಯೋ, ಇದೇನು ದೈವದ್ರೋಹ! ರಾಮ, ರಾಮ! ಸಂಜೀವ, ಇಂತಹ ಧರ್ಮದ್ರೋಹವನ್ನು ಕೇಳಲಿಕ್ಕಾಗಿಯೇ ನೀನು ನನ್ನನ್ನು ಕರೆದುಕೊಂಡು ಬಂದುದೇ? ಅಹ! ಕಲಿಯುಗದಲ್ಲಿ ಧರ್ಮದ, ಇದ್ದ ಒಂದು ಕಾಲೂ ಕಡಿಯಲ್ಪಡುವುದೆಂಬುದು ಇಂದಿಗೆ ನಿಶ್ಚಯ ವಾಯಿತು. ಸಂಜೀವ, ನೀನೇಕೆ ಮೂರ್ತಿಯಂತೆ ಸುಮ್ಮನಿರುವೆ? ಇನ್ನು ನಿಲ್ಲಲಾರೆ. ಹೋಗುತ್ತೇನೆ.

ಸಂಜೀವ— ನಿಮ್ಮನ್ನು ಕರೆದುಕೊಂಡು ಬಂದಮೇಲೆ ಯಾರೇನು ಹೇಳಿದರೂ ನಾನು ವೈಕುಂಠ ಸಮಾರಾಧನೆಯನ್ನು ಮಾಡಿಸಿಯೇ ಬಿಡುವೆನು. ನಾನು ಅತ್ತೆಯ ಹೇಳಿಕೆ ಪ್ರಕಾರ ನಿಮ್ಮನ್ನು ಕರೆದುಕೊಂಡು ಬಂದುದು.

ತಾರಾನಾಥ – (ಸಿಟ್ಟಿನಿಂದ) ಅತ್ತೆಯೂ ಅಳಿಯನೂ ಸೇರಿ ಬೇಕಾದ್ದು ಮಾಡಿಕೊಳ್ಳಿ. (ಹೋಗಿಬಿಡುವನು)

ತುಂಗಮ್ಮ – ಸಂಜೀವ, ತಾರಾನಾಥ ಮತ್ತು ಅವನ ಹೆಂಡತಿಯ ಉಪದ್ರವದಿಂದ ನಮಗೆ ಉಳಿಗಾಲವಿಲ್ಲ. ಅವರಿಗೆ ದೈವ ದೇವರು, ಗುರು ಹಿರಿಯರು ನೀತಿ ಧರ್ಮವೆಂಬುದೇನೂ ಇಲ್ಲ!

ತಂತ್ರಿ – ಶುದ್ಧ ನಾಸ್ತಿಕ! ತುಂಗ, ನಿನ್ನ ಮಗ ಶುದ್ಧ ನಾಸ್ತಿಕ! ಅವನಿಂದ ನಿನ್ನ ಮನೆ ಒಳ್ಳೆದಾಗಲಿಕ್ಕಿಲ್ಲ. ನಿನ್ನ ಕುಟುಂಬ ಉದ್ಧಾರ ವಾಗಲಿಕ್ಕಿಲ್ಲ. ಪುಣ್ಯಶಾಲಿಗಳಾದ ಹಿರಿಯರೇನಾದರೂ ಮಾಡಿಟ್ಟಿದ್ದಿದ್ದರೆ ಅವನು ಮುಟ್ಟಿದಲ್ಲಿ ಮಾಯವಾಗಿ ಹೋದೀತು! ಇರಲಿ; ಪಟ್ಟೆ ನಿನ್ನ ಹೆಸರಲ್ಲಿರುವುದಲ್ಲವೇ?

ತುಂಗಮ್ಮ— ಇವನ ಕಥೆ ಹೀಗಾಯಿತು. ಇವನ ಹೆಂಡತಿ ಯೊಬ್ಬಳಿದ್ದಾಳೆ ಇವನಿಗಿಂತ ಜೋರಿನವಳಪ್ಪ! ಇವರ ಕಾಟದಿಂದ ನನ

ಗಂತೂ ಪೂಜೆ, ಪುರಸ್ಕಾರ ಕೋಲ, ತಂಬಿಲ ಒಂದೂ ಮಾಡಿಸಲಿಕ್ಕಿಲ್ಲ. ಯಾವಾಗ ಅಣ್ಣ ಸತ್ತನೋ, ಅಂದೇ ನನ್ನ ಅರ್ಧ ಜೀವ ಹೋಗಿದೆ. ಈಗ ತಂತು ಮಾತ್ರ ಉಂಟು.

ಸಂಜೀವ—ನಿಮಗೆ ಯಾವ ವ್ಯಥೆಯೂ ಬೇಡ. ವೈಕುಂಠ ಸಮಾರಾಧನೆ ನಾನು ಮಾಡಿಸುವೆನು. ತಂತ್ರಿಗಳೇ, ನೀವು ನಾಳೆಯೇ ದಾನ ಸಾಹಿತ್ಯಾದಿಗಳ ಪಟ್ಟಿಯೊಂದನ್ನು ಮಾಡಿ ತನ್ನಿರಿ ಈ ತಿಂಗಳಲ್ಲಿ ಇಪ್ಪತ್ತು ಹೋಗುವಾಗಲೇ ವೈಕುಂಠ ಸಮಾರಾಧನೆ ಮಾಡುವ. ಈಗ ಹೋಗಿ ಸ್ವಾಮಿ.

ತಂತ್ರಿ ಆಯಿತು, ಸಂತೋಷ. ನಾಳೆಯೇ ಬರುವೆನು. ನನ್ನ ಕಾಯಿ?

ತುಂಗಮ್ಮ—ಓಹೋ! ತರುತ್ತೇನೆ. (ಹೋಗಿ ಎರಡು ಕಾಯಿ ತಂದು ಕೊಡುವಳು.)

ತಂತ್ರಿ—ನಾಲ್ಕು ಕೊಡುತ್ತೇನೆಂದು ಹೇಳಿದ್ದಲ್ಲವೆ?

ಸಂಜೀವ—ಸಾಕಪ್ಪ! ಈಗ ಹೋಗಿ. ಎಷ್ಟು ಕೊಟ್ಟರೂ ನಿಮಗೆ ಸಾಲದು!

(ತಂತ್ರಿ ಹೋಗುವನು. ಇತರರೂ ಹೋಗುವರು.)

೬ನೇ ದೃಶ್ಯ

[ನಾರಾಯಣ ತಂತ್ರಿಯು ತುಂಗಮ್ಮನ ಮನೆಯಿಂದ ಹೋಗುತ್ತಾ, ಈಗಣ ವಿದ್ಯಾವಂತ ತರುಣರ ವರ್ತನೆಯ ಕುರಿತು ತನ್ನ ಜಿಗುಪ್ಸೆಯನ್ನು ಹೊರಗೆಡಹುವನು.]

ತಂತ್ರಿ—(ಸ್ವಗತ) ಈ ಇಂಗ್ಲಿಷ್ ವಿದ್ಯೆಯೆಂಬುದು ಈ ತರುಣರ ತಲೆಗೆಡಿಸಿ ಬಿಟ್ಟಿರುವುದು. ಈಗಿನ ಯುವಕರು, ದೈವದೇವರು, ಧರ್ಮನೀತಿಗಳ ಮೇಲೆಲ್ಲಾ ಧಾಳಿ ನಡಿಸ ಹತ್ತಿರುವರು. ಎಲ್ಲವನ್ನೂ ವಿಚಾರದ ಒರೆಗಲ್ಲಲ್ಲಿ ಪರೀಕ್ಷಿಸಿದ ಮೇಲೆಯೇ ಆಚರಿಸಬೇಕಂತೆ. ಈ ಹುಚ್ಚುತನಕ್ಕೇನೆನ್ನಬೇಕು? ಅನಾದಿಯಿಂದಲೂ ನಡೆದುಬಂದ ಪೂಜ್ಯ ಹಿರಿಯರ

ಆಚಾರಗಳನ್ನು ತಿರಸ್ಕರಿಸಲು ಈ ತಲೆಹೋಕ ತರುಣರೆಷ್ಟರವರು? ವೇದ ಪುರಾಣಗಳ ಸಂಗತಿ ಇವರಿಗೇನು ಗೊತ್ತು? ಆದರೂ ನವ ತರುಣರಲ್ಲಿ ದೊಡ್ಡ ಅಂಟು ರೋಗದಂತೆ ಹಬ್ಬುತ್ತಿದೆ ಪೂರ್ವಾಚಾರಗಳ ಧಿಕ್ಕಾರದ ಹುಚ್ಚು! ಮೊದಲು ಎಲ್ಲಿ, ನಮ್ಮ ಮಾತನ್ನು ವೇದವಾಕ್ಯದಂತೆ ಪಾಲಿಸಿ ನಮ್ಮನ್ನು ಅತ್ಯಂತ ಪೂಜ್ಯ ಬುದ್ಧಿಯಿಂದ ಕಾಣುತ್ತಿದ್ದರೋ ಅಲ್ಲಿ ತಿಳಿಗೇಡಿ ತರುಣರು ಹುಟ್ಟಿ ನಮ್ಮ ಪ್ರತಿಷ್ಠೆಯ ಬುಡಕ್ಕೇನೇ ಕೊಡಲಿಯಿಡುವ ಪ್ರಯತ್ನ ನಡಿಸುತ್ತಿರುವರಲ್ಲಾ! ನಾನಾದುದಕ್ಕೆ ಇಂದು ಈ ತಾರಾನಾಥನು ಸಿಲುಕಿಸಿದ ಸಂದುಕಟ್ಟಿನೊಳಗಿಂದ ಪಾರಾದೆ. ಬೇರೆ ಯಾರಾದರೂ ಆಗಿದ್ದರೆ ಮುಖ ಭಂಗಿತರಾಗಿ ಗಂಟುಕಟ್ಟ ಬೇಕಿತ್ತು. ಪುಣ್ಯಕ್ಕೆ ತುಂಗಮ್ಮ, ಸಂಜೀವರೂ ನನ್ನ ಸಹಾಯಕ್ಕೆ ದೊರೆತರು. ಇಲ್ಲವಾದರೆ ನನ್ನ ಬುದ್ಧಿವಂತಿಕೆಯೂ ನಿಷ್ಫಲವಾಗುತ್ತಿತ್ತು. ಹೀಗೆಯೇ ನಡೆದರೆ ನಾವು ಗೌರವದಿಂದ ನಮ್ಮ ವೃತ್ತಿ ನಡಿಸುವುದೇ ಅಸಾಧ್ಯವಾಗುವ ಪರಿಸ್ಥಿತಿಯೊದಗದಿರುವುದೇ? ಈಗಲೇ ನನ್ನ ಆದಾಯ ಅರ್ಧಕ್ಕರ್ಧ ಕಡಿಮೆಯಾಗಿದೆ. ಪ್ರಾಯದ ಮಗಳೊಬ್ಬಳು ಮದುವೆಯಾಗದೆ ಮನೆಯಲ್ಲೇ ಇರುವಳು. ಹೀಗೆಯೇ ಆದರೆ ಅವಳನ್ನು ಹೊರಹಾಕುವ ಬಗೆ ಯಾವುದೊ ಆ ಪರಮಾತ್ಮನಿಗೇ ಗೊತ್ತು! (ಹೋಗುವನು.)

೭ನೇ ದೃಶ್ಯ

[ಇಂದಿರೆಯು ಕೋಣೆಯಲ್ಲಿ ಕುಳಿತು ಹಾರ್ಮೋನಿಯಮ್ ಬಾರಿಸುತ್ತಾ ಪದ ಹಾಡುತ್ತಿರುವಳು.]

ಇಂದಿರೆ—(ಹಾಡಿಮುಗಿಸಿ, ಸ್ವಗತ) ಅಹ! ಸ್ತ್ರೀಯ ಹೃದಯ ವೀಣೆಯನ್ನು ಮೀಂಟುವ ಪತಿ-ಸುಖ ಸ್ಪರ್ಶವು ಅದೆಷ್ಟು ಮಧುರವಾದುದು! ಪ್ರಿಯಕರನೊಂದಿಷ್ಟು ಅಗಲಿದರೆ ಆ ವೀಣಾತಂತಿಗಳೇ ಮುರಿದು ಬೀಳುವವೋ ಎಂಬಷ್ಟು ವ್ಯಥೆಯುಂಟಾಗುವುದು. ಇಂದು ಇನಿಯನೇಕೆ ಇನ್ನೂ ಬರಲಿಲ್ಲ? (ಯೋಚಿಸಿ) ಪ್ರಾಯಶಃ ಇವತ್ತು ಯುವಕ ಸಂಘದಲ್ಲಿ ·ವರ

ದಕ್ಷಿಣೆಯ ಕಾಟ'ದ ಕುರಿತು ಅವರ ಭಾಷಣವಿದ್ದಿರಬೇಕು. ತನ್ನ ಭಾಷಣವಿರುವುದಾಗಿ ಒಮ್ಮೆ ನನ್ನೊಡನೆ ಹೇಳಿದ್ದರು. ಹಾ! ವರ ದಕ್ಷಿಣೆಯ ಭೂತವು ಎಂತಹ ಭಯಂಕರವಾದುದು! ಇದು ಎಷ್ಟೊಂದು ಕನ್ಯಾಪಿತರನ್ನು ಒಂಟಿಗಾಲಲ್ಲಿ ನಿಲ್ಲಿಸಿರುವುದಿಲ್ಲ! ನಾನೂ ಹೆಂಗುಸಾಗಿ ಕೆಲಸಮಯ ಮನೆಯಲ್ಲೇ ಮರೆಯಾಗಬೇಕಾಗಿದ್ದುದು ಇದರ ಹಾವಳಿ ಯಿಂದಲೇ ಅಲ್ಲವೆ? ಈ ಪುಣ್ಯಾತ್ಮರು ವರದಕ್ಷಿಣೆ ಸ್ವೀಕರಿಸದೆ ನನ್ನನ್ನು ವರಿಸಲು ಮುಂದೆ ಬಾರದಿರುತ್ತಿದ್ದರೆ ಇನ್ನೂ ಅವಿವಾಹಿತಳಾಗಿಯೇ ಕೊರಗ ಬೇಕಾಗಿತ್ತೋ ಏನೊ! ಆದರೆ ಸುದೈವದಿಂದ ಅನುಕೂಲ ಪತಿ ಯನ್ನು ಪಡೆದು ನಿಜದಾಂಪತ್ಯ ಸುಖವನ್ನು ಅನುಭವಿಸುತ್ತಿರುವ ನಾನು ಭಾಗ್ಯಶಾಲಿನಿಯಲ್ಲವೆ?

(ತಾರಾನಾಥನು ಚಿಂತಾಮಗ್ನನಾಗಿ ಪ್ರವೇಶಿಸಿ, ಕುರ್ಚಿಯನ್ನೆಳೆದು ಕುಳಿತುಕೊಳ್ಳುವನು. ಇಂದಿರೆಯು ಅವನು ಬಂದೊಡನೆ ಎದ್ದು ನಿಲ್ಲುವಳು.)

ತಾರಾನಾಥ—(ಸ್ವಗತ) ದೇವರು ಮಾನವನಿಗೆ ವಿಚಾರಶಕ್ತಿ ಯನ್ನೇಕೆ ಕೊಟ್ಟನೋ ತಿಳಿಯದು! ಅವನೂ ಇತರ ಪ್ರಾಣಿಗಳಂತೆ ಸೃಷ್ಟಿಸಲ್ಪಡುತ್ತಿದ್ದರೆ ಮಾನವ ಸಮಾಜವು ಇಷ್ಟೊಂದು ಕೃತಕ, ವಂಚಕ, ಅಸ್ವಾಭಾವಿಕ ಜೀವನವುಳ್ಳದಾಗುತ್ತಿದ್ದಿತೇ? ನನ್ನಲ್ಲಂತೂ ವಿಚಾರ ಪ್ರಕಾಶವು ಹೆಚ್ಚಿದಂತೆ ಅತೃಪ್ತಿತಾಪವು ಅಧಿಕವಾಗುತ್ತಿರುವುದು ಅಂತ ಶ್ಯಾಂತಿಯು ಮಾಯವಾಗುತ್ತಿರುವುದು.

ಇಂದಿರೆ—ಪ್ರಿಯಾ, ಇಂದೇಕೆ ಇಷ್ಟು ಚಿಂತಾಕುಲರಾದಂತಿರುವಿರಿ?

ತಾರಾನಾಥ — (ಥಕ್ಕನೆ ಮುಖಮುದ್ರೆಯನ್ನು ಮಾರ್ಪಡಿಸಿ) ಚಿಂತೆಯೇ? ಎಲ್ಲಿ? ನಿನ್ನಂತಹ ಪ್ರಿಯತಮೆಯನ್ನು ಪಡೆದಿರುವ ನನೆ ಗೆಲ್ಲಿಯ ಚಿಂತೆ?

ಇಂದಿರೆ—ಈ ನಟನೆಯೆಲ್ಲಾ ಬೇಡ. ನಾನು ಅದನ್ನೂ ತಿಳಿಯ ಲಾರದ ಹಳ್ಳಿಯ ಹುಡುಗಿಯೆಂದು ಭಾವಿಸಿದಿರಾ?

ತಾರಾನಾಥ—ನೀನು ವಕೀಲರ ಮಗಳು, ಪಟ್ಟಣದಲ್ಲಿ ಹುಟ್ಟಿ ಬೆಳೆದವಳು, ವಿದ್ಯಾವತಿ, ವಿಚಾರವತಿಯೆಂದೇ ನಿನ್ನನ್ನು ವರಿಸಿದುದಲ್ಲದೆ ನಿನ್ನೀ ರೂಪಕ್ಕಲ್ಲ.

ಇಂದಿರೆ—ಪ್ರಿಯಾ, ಹೀಗೇಕೆ ಪರಿಹಾಸ್ಯ ಮಾಡುವಿರಿ? ನಾವು ನಮ್ಮ ನಡತೆಗೆ ಜವಾಬ್ದಾರರಲ್ಲದೆ ರೂಪಕ್ಕಲ್ಲ.

ತಾರಾನಾಥ—ಹ! ಒಳ್ಳೇ ನಡತೆ! ಏಳುವಾಗ ಎಂಟು ಗಂಟೆಯಂತೆ! ಇಡೀ ದಿವಸ ಉಪ್ಪರಿಗೆಯಲ್ಲಿ ಗಂಡನೊಂದಿಗೆ ಸರಸಸಲ್ಲಾಪವಂತೆ! ಅಡಿಗೆಯೆಂದರೆ ಏನೆಂದು ಗೊತ್ತಿಲ್ಲವಂತೆ! ಚಿನ್ನದ ಗೊಂಬೆಯಂತೆ!

ಇಂದಿರೆ—ಯಾರು?

ತಾರಾನಾಥ—ಇಂದಿರೆ; ಮತ್ತಾರು?

ಇಂದಿರೆ—ಯಾರು ಹೇಳುವುದು?

ತಾರಾನಾಥ - ಅವಳ ಅತ್ತೆ ಮತ್ತು ನಾದಿನಿ.

ಇಂದಿರೆ—ಒಹೋ! ನೀವೀಗ ಅದಕ್ಕಾಗಿ ಚಿಂತಿಸುತ್ತಿರುವುದೇ? ಪ್ರತ್ಯಕ್ಷಕ್ಕೆ ಪ್ರಮಾಣ ಬೇಕೇ? ನೀವೇ ನೋಡುತ್ತೀರಲ್ಲ!

ತಾರಾನಾಥ—ಇಂದಿರಾ, ನೀನು ಆ ವಿಷಯದಲ್ಲಿ ಚಿಂತಿಸಬೇಡ. ನಾನು ವಿನೋದಕ್ಕಾಗಿ ಹೇಳಿದೆನು; ಅಷ್ಟೆ. ವಿದ್ಯಾವತಿ ಸ್ತ್ರೀಯರು ಶೋಭೆಯ ಗೊಂಬೆಗಳು, ಬೆಡಗು ಬಿನ್ನಾಣ ಮಾತ್ರವೇ ಅವರಿಗೆ ಗೊತ್ತು; ಅಡಿಗೆ, ಮನೆ ಕೆಲಸ ಯಾವುದೂ ಅವರಿಂದಾಗದು ಎಂಬ ದುರಭಿಪ್ರಾಯವು ಈಗ ಜನರಲ್ಲಿ ದೃಢವಾಗಿ ಬೇರೂರಿರುವುದು. ಅತ್ತೆ ಸೊಸೆಯರ ಕಾದಾಟದ ಸಂಗತಿಯಂತೂ ಗಾದೆಯು ಮಾತಾಗಿ ಹೋಗಿರುವುದು. ಸೊಸೆಯು ತನ್ನ ದಾಸಿಯಾಗಿದ್ದರೇನೇ ಅತ್ತೆಗೆ ಸಂತೋಷ ಅವಳೇನಾದರೂ ಸ್ವಲ್ಪ ಸ್ವಾತಂತ್ರ್ಯ ತೋರಿಸಿದರೆ ತೀರಿತಲ್ಲಿಗೆ!

(ಮನೋಹರನು ಪ್ರವೇಶಿಸುವನು)

ಮನೋಹರ—ಇದೇನು ಅತ್ತೆ ಸೊಸೆಯರ ಕಾಳಗದ ಪ್ರಸ್ತಾಪ?

ತಾರಾನಾಥ—ಏನೂ ಇಲ್ಲ.

ಮನೋಹರ—ಯಾಕೆ ಇಲ್ಲ! ಊರೆಲ್ಲಾ ಹಬ್ಬಿದೆ ಸಮಾಚಾರ!

ತಾರಾನಾಥ—ಯಾವ ಸಮಾಚಾರ?

ಮನೋಹರ—'ತಾರಾನಾಥನು ಇಂದಿರೆಯ ದಾಸ; ಮನೆಯಲ್ಲಿ ಅತ್ತೆ ಸೊಸೆಯರ ಕಾದಾಟ'ವೆಂದು.

ಇಂದಿರೆ—ನಿಮಗಾರು ಹೇಳಿದರು?

ಮನೋಹರ—ನನ್ನವಳೊಬ್ಬಳು ಇದ್ದಾಳಲ್ಲ? ಅವಳಿಗೆ ಇದೇ ಕೆಲಸ. ಎಷ್ಟು ಹೇಳಿದರೂ ಇಲ್ಲ. ಸಿಕ್ಕಿದವರ ಸಂಗತಿಯನ್ನೆಲ್ಲಾ ಸಿಕ್ಕಿಸಿಕ್ಕಿದವರೊಡನೆ ಕೇಳಿ ಹೆಕ್ಕಿಕೊಳ್ಳುವುದು. ಅನಂತರ ಅದನ್ನು ಊಟಮಾಡುವಾಗ ದೊಡ್ಡ ಸಂಭ್ರಮವೆಂತ ಕಡು ವೈಯ್ಯಾರದಿಂದ ನನ್ನ ಕಿವಿಯಲ್ಲಿ ಹಾಕುವುದು.

ಇಂದಿರೆ—ಇದನ್ನು ನೀವು ನಂಬಿದಿರಾ?

ಮನೋಹರ—ನಾನು ಅಷ್ಟು ಹಿತ್ತಾಳಿ ಕಿವಿಯವನೆಂದು ತಿಳಿದೆಯಾ? ಈ ಹೆಂಗುಸರ ಕಥೆಯೇ ಇಷ್ಟು. ತಮ್ಮ ಪಂಗಡಕ್ಕೆ ಸೇರದ, ಹೊಸ ರೀತಿ ನೀತಿಯವರ ಮೇಲೆ ಅಸೂಯೆಪಟ್ಟು ಕಾಗೆಗಳಂತೆ ನಾನಾ ಸುದ್ದಿ ಹಬ್ಬಿಸುವುದು. ಮತ್ಸರವೆಂದರೆ ಅವರು ಕೊಟ್ಟರೆ ಉಂಟು.

ತಾರಾನಾಥ-ಮಿತ್ರ, ಅದನ್ನೇ ನಾವೀಗ ಮಾತಾಡುತ್ತ ಇದ್ದುದು. ಇಂದಿರೆಯ ಹೊಸ ರೀತಿ ನೀತಿಗಳನ್ನು ನನ್ನ ತಾಯಿಗೂ, ತಂಗಿಗೂ ಕಂಡರೆ ಆಗುವುದಿಲ್ಲ. ಅವರು ಇವಳನ್ನು ಜರೆಯದ ದಿನವೇ ಅಪರೂಪ. ಇವಳು ಏನು ಮಾಡಿದರೂ ಅವರಿಗೆ ಆಗುವುದಿಲ್ಲ.

ಇಂದಿರೆ—ಹೌದು! ನಾನು ಮುಂಜಾನೆ ಬೇಗ ಎದ್ದು ಮನೆಗೆಲಸ ಮಾಡಿದರೆ, 'ಏನು ಉಮೇದಪ್ಪಾ ಇವಳಿಗೆ! ಇದು ಕಡೆತನಕ ಬಂದೀತೆ?' ಎನ್ನುವರು. ಸ್ವಲ್ಪ ತಡವಾಗಿ ಎದ್ದರೆ, 'ಏಳುವುದು ಎಂಟು ಗಂಟೆಗೆ, ಮಡ್ಡಮಳ ಮರ್ಜಿ' ಎನ್ನುವರು. ಪ್ರಾಯದ ಹೆಂಗುಸು ಗಂಡನೊಡನೆ ತುಟಿಯೆತ್ತಿ ಮಾತಾಡಬಾರದಂತೆ! ಪರಪುರುಷರ ಮುಖವನ್ನು ಕಣ್ಣೆತ್ತಿ ನೋಡಬಾರದಂತೆ! ಮನೆ ಬಿಟ್ಟು ಹೊರಗೆ ಕಾಲಿಡಬಾರದಂತೆ! ಒಂದಿಷ್ಟು ಓದಿದರೆ 'ಅದರಲ್ಲಿ ಏನುಹೊಟ್ಟೆ ತುಂಬುವುದೆ? ಮೊದಲಿನ ಹೆಂಗುಸರೆಲ್ಲಾ ಓದುತ್ತಿದ್ದರೆ? ಇದೆಲ್ಲಾ ಈಗಿನ ವೇಷ!' ಎಂಬ ಸಿಡುಕು. ಆರಾಮವಿದ್ದಾಗ ಬೇಸರ ಕಳೆಯಲೆಂದು 'ಹಾರ್ಮೋನಿಯಮ್' ಹಿಡಿದು ಸ್ವಲ್ಪ ಹಾಡಿದರೆ ಅದು ಕರ್ಕಶವಂತೆ! ಗರತಿಯರ ಲಕ್ಷಣವಲ್ಲವಂತೆ! ಒಳ್ಳೇ ಸೀರೆಯನ್ನು ಉಟ್ಟುಕೊಂಡು ಸ್ವಚ್ಛವಾಗಿದ್ದರೆ 'ನಿತ್ಯಕ್ಕೆ ಈ ಶೃಂಗಾರವೇಕೆ' ಎಂದಾಗುವುದು! ಒಟ್ಟಾರೆ, ನಾನು ಏನು ಮಾಡಿದರೂ ತಪ್ಪು! ಇಷ್ಟರ ವರೆಗೆ ಇದನ್ನೆಲ್ಲಾ ತಾಳಿಕೊಂಡಿದ್ದೆನು. ಆದರೆ ಇವರೊಡನೆಯೇ ಬಾರಿ ಬಾರಿ

ದೂರುವಾಗ, ಊರೆಲ್ಲಾ ಈ ಸಂಗತಿ ಹಬ್ಬಿರುವಾಗ ನಾನು ಸುಮ್ಮ ನಿರುವುದು ಹೇಗೆ?

ಮನೋಹರ – ಇದನ್ನು ನಾನು ಮೊದಲೇ ಬಲ್ಲೆ. ಅತ್ತೆಯಂದಿರು, ತಾವು ಸೊಸೆಯಂದಿರಾಗಿದ್ದಾಗ, ತಮ್ಮನ್ನು ತಮ್ಮ ಅತ್ತೆಯಂದಿರು ಯಾವ ರೀತಿ ಕಾಣಬೇಕೆಂದು ಆಶಿಸುತ್ತಿದ್ದರೋ, ಅದೇ ರೀತಿ ಅವರು ತಮ್ಮ ಸೊಸೆಯರನ್ನು ಕಾಣುವಂತಾದರೆ ಈ ಅತ್ತೆಸೊಸೆಯರ ಕಾಳಗ ವೆಂಬ ಗಾದೆಗೇನೇ ಆಸ್ಪದವುಂಟಾಗುತ್ತಿದ್ದಿಲ್ಲ. ಇಂದಿರೆ, ನಿನಗೆ ಈ ವಿಷಯದಲ್ಲಿ ವ್ಯಥೆಬೇಡ. ತಾರಾನಾಥನು ನಿನ್ನ ಸದ್ಗುಣಗಳನ್ನೆಲ್ಲಾ ಚೆನ್ನಾಗಿ ಬಲ್ಲನು. ನನ್ನವಳಂತಹ ಕಾಡು ಹಕ್ಕಿಯೊಂದು ಅವನಿಗೆ ಸಂಘಟನೆಯಾಗುತ್ತಿದ್ದರೆ ಕುತ್ತಿಗೆಗೆ ಹಗ್ಗ ಹಾಕಿಕೊಳ್ಳುತ್ತಿದ್ದನೋ ಏನೊ! ನಾವು ವಿದ್ಯಾರ್ಥಿಗಳಾಗಿದ್ದಾಗ ಎಂತಹ ಗಗನ ಗೋಪುರ ಕಟ್ಟಿ ಕೊಂಡಿದ್ದೆವು! ವಾಸ್ತವಿಕ ಜೀವನದಲ್ಲಿ ಆ ತಿರುಕ ಸ್ವಪ್ನವೆಲ್ಲಾ ಮಾಯವಾಗಿರುವುದು. ನಿನ್ನನ್ನು ಪತ್ನಿಯನ್ನಾಗಿ ಪಡೆದ ತಾರಾನಾಥ ನೊಬ್ಬನೇ ನಮ್ಮಲ್ಲಿ ಭಾಗ್ಯಶಾಲಿಯು.

ತಾರಾನಾಥ—ಅದಂತಿರಲಿ, ಈಗ ಮನೋರಮೆಗೆ ಅಸ್ವಸ್ಥವಂತೆ. ಈಗತಾನೆ ಅವಳ ಗಂಡನ ಮನೆಯಿಂದ ಜನ ಬಂದಿದೆ.

ಮನೋಹರ—ಏನು ಕಾಯಿಲೆ?

ತಾರಾನಾಥ—ಏನೆಂದು ಹೇಳಲಿ? ಚಿಕ್ಕಂದಿನಲ್ಲಿ ದೃಢಕಾಯೆಯಾಗಿ ಕಾಯಿಲೆಯೇನೆಂದು ಅರಿಯದ ಅವಳು ಈಗ ಯಾವಾಗಲೂ ಹಾಸಿಗೆ ಹಿಡಿದಿರುವಂತಾಗಿದೆ. ಅಲ್ಲದೆ ಬಹು ಕಷ್ಟದಿಂದ ಹೆತ್ತ ಅವಳ ಹೆಣ್ಣು ಮಗುವಿಗೂ ಹುಟ್ಟಿದಾರಭ್ಯ ಸೌಖ್ಯವಿಲ್ಲ. ಸಂಜೀವನ ದುರಾಚಾರಕ್ಕಾಗಿ ಮನೋರಮೆಯೂ ಅವಳ ಮಗುವೂ ಈಗ ರೋಗದಿಂದ ನರಳಬೇಕಾಗಿದೆ.

ಮನೋಹರ—ಅಹಹ! ಇದೀಗ ಅತಿ ವಿಷಾದಕರ! ನೀನು ಮನೋರಮೆಯನ್ನು ನೋಡುವುದಕ್ಕೆ ಹೋಗುವೆಯಾ?

ತಾರಾನಾಥ—ಹೌದು, ನಾನೂ ಅಮ್ಮನೂ ನಾಳೆ ಹೋಗುವೆವು. ನಾನು ಇಷ್ಟರ ತನಕ ಭಾವನ ಮನೆಗೆ ಹೋಗಲಿಲ್ಲ. ಈಗ ಹೋಗ

ಬೇಕಾಗಿದೆ. ಸಂಜೀವನು ನಿನ್ನ ಹಳೆಯ ಸ್ನೇಹಿತನಲ್ಲವೇ? ನಾವು ಒಟ್ಟಿಗೆ ಹೋಗುವ, ಆಗದೆ?

ಮನೋಹರ—ನಾನೇಕೆ? ನನಗೆ ಕೆಲಸವಿದೆ. ನಾಳೆ ಒಂದು 'ಕೇಸೂ' (ನಂಬ್ರವೂ) ಇದೆ.

ತಾರಾನಾಥ—'ಕೇಸು'! ಅದನ್ನು ಬೇರೆ ಯಾರಿಗಾದರೂ ಕೊಟ್ಟು ಬರಲಾಗುವುದಿಲ್ಲವೇ?

ಮನೋಹರ—ಸೈ, ಒಳ್ಳೇ ಮಾತು! ತಿಂಗಳಿಗೊಂದೋ ವರ್ಷಕ್ಕೊಂದೋ 'ಕೇಸು' ಬರುವುದು. ಅದನ್ನೂ ಬಿಟ್ಟರೆ ಚೆಲೋದಾಯಿತು! ನಾನು ಬಂದರೆ ಸಂಜೀವನಿಗೂ ಸಂತೋಷವಾಗದು. ಇರಲಿ. ಈಗ ಕಾಲೇಜಿನ ಸಂಗೀತ ಕಚೇರಿಗೆ ಹೊತ್ತಾಯಿತು. ಹೊರಡು, ಹೋಗುವ.

ತಾರಾನಾಥ—ನಾನು ಬರುವುದಿಲ್ಲ. ನನಗೆ ದಣುವಿದೆ.

ಮನೋಹರ—ಅದೆಲ್ಲಾ ನೆವನ ಇರಲಿ ಸಂಗೀತ ಕೇಳಿದರೆ ದಣುಹೋಗುತ್ತದೆ. ಬೇಗ ಹೋಗುವ ಕಡೆಗೆ ಸ್ಥಳ ಸಿಗುವಂತಿಲ್ಲ. ಇಂದಿರೆಯೂ ಬರಲಿ.

ಇಂದಿರೆ—ನನ್ನನ್ನು ಕರೆದುಕೊಂಡು ಹೋಗಲು ಅವರಿಗೆ ಧೈರ್ಯವೆಲ್ಲಿಂದ? ಹಿಂದಿನಂತೆ ಈಗೀಗ ಸಂಜೆ ಹೊರಕರೆದುಕೊಂಡು ಹೋಗುವುದೂ ನಿಂತಿದೆ.

ಮನೋಹರ—ತಾರಾನಾಥ, ನಿಜವೆ? ದೊಡ್ಡ ತತ್ವ ಮಾತ್ರ ಸಾರುವುದೇ? ತಾನಾಗಿ ಆಚರಿಸಲಿಕ್ಕಿಲ್ಲವೇ?

ಇಂದಿರೆ—ಅದು ಅಷ್ಟೆ! ವೈಕುಂಠ ಸಮಾರಾಧನೆ ಮಾಡಬಾರದೆಂದು ಇವರು ಹಠ ಹಿಡಿದುದೇ ಬಂತು. ಅತ್ತೆ, ಅಣ್ಣ ಕೂಡಿ ಮಾಡಿಸಿಯೇ ಬಿಟ್ಟರು. ಇವರು ಬಾಯಿಯಲ್ಲಿ ಹೇಳುತ್ತಿರುವುದು; ಅವರು ಕಾರ್ಯದಲ್ಲಿ ಮಾಡುತ್ತಲೆ ಇರುವುದು.

ತಾರಾನಾಥ—ಇರಲಿ. ನೀನೇಕೆ ನಿನ್ನ ಹೆಂಡತಿಯನ್ನು ಕರೆತರಲಿಲ್ಲ?

ಮನೋಹರ—ಏನು? ಅವಳನ್ನು ಪಂಜರದಲ್ಲಿಟ್ಟು ತರುವುದೇ? ಒಂದು ವಾರದಿಂದ ಆರಂಭಿಸಿದ್ದೇನೆ ಬೋಧಿಸಲಿಕ್ಕೆ! ಈ ಹೊತ್ತು ಬೆಳಿಗ್ಗಿನಿಂದ ನನಗೆ ಅದೇ ಕೆಲಸ ಕಡೆಗೆ ನಾನೇ ಸೀರೆ ಕುಪ್ಪಸ ತೆಗೆದು

ಕೊಂಡು, ಧರಿಸೆಂದು ಬಲಾತ್ಕಾರ ಮಾಡಿದೆ. ಕಾಡು ಬೆಕ್ಕದು, ಕೇಳುವುದೇ? ಇಂದಿರೆಯಂತಹ ವಿದ್ಯಾವತಿ ಪತ್ನಿಯು ನನಗಿರುತ್ತಿದ್ದರೆ ಅವಳನ್ನು 'ಬಾರ್‌ರೂಮಿಗೂ' ನನ್ನೊಂದಿಗೆ ಕರೆದೊಯ್ಯುತ್ತಿದ್ದೆ.

ತಾರಾನಾಥ—('ವಾಚು' ನೋಡಿ) ಈಗ ಹೊತ್ತಾಯಿತು. ಇಂದಿರೆಯ ಶೃಂಗಾರಕ್ಕೆ ಕಡಿಮೆಯೆಂದರೆ ಒಂದು ತಾಸು ಬೇಕು. ಇನ್ನೊಂದು ಸಲ ನೋಡುವ. ಈಗ ಹೋಗುವ. ನಾನೂ ನಿನ್ನ ಒತ್ತಾಯಕ್ಕಾಗಿ ಬರುವುದು.

ಇಂದಿರೆ—ನೆವನಕ್ಕೇನೂ ಕಡಿಮೆಯಿಲ್ಲ. ನೀವು ನಿಮ್ಮ ಮುಖ ತೊಳೆದು 'ಕೊಂಬ್'ಮಾಡಿ ತಲೆಬಾಚಿ) 'ಡ್ರೆಸ್' ಮಾಡುವಾಗ ನಾನು ಎರಡೆರಡು ಸಲ ಶೃಂಗಾರ ಮಾಡಿಕೊಂಡೇನು. (ಒಳಗಿನಿಂದ ತುಂಗಮ್ಮನು 'ಇಂದು! ಇಂದು!' ಎಂದು ಕರೆಯುವುದು ಕೇಳಿಬರುವುದು.)

ತಾರಾನಾಥ—ಅಮ್ಮ ಕರೆಯುತ್ತಾಳೆ, ಹೋಗು.

ಇಂದಿರೆ—ಆಯ್ತು. ನಮಗೆಲ್ಲಾ ಈ ಭಾಗ್ಯವಿದ್ದರೆ! (ಹೋಗುವಳು) ಮನೋಹರ ತತ್ವವೆಲ್ಲಾ ಅನ್ಯರಿಗಲ್ಲವೆ? ಆಗಲಿ, ಹೋಗುವ.

៤ನೇ ದೃಶ್ಯ

[ಡಾಕ್ಟರರಲ್ಲಿಗೆ ಹೋದ ಸಂಜೀವನು ಹಿಂದಿರುಗಿ ಬರುವಾಗ ದಾರಿಯಲ್ಲಿ ಚಂದು ಶೆಟ್ಟಿಯೊಡನೆ ತನ್ನ ದುಷ್ಕೃತ್ಯಗಳ ಒಳಸಂಚಿನ ಕುರಿತು ಆಲೋಚಿಸುವನು.]

ಸಂಜೀವ—ಮನೋರಮೆಗೆ ಈಗೀಗ ಕಾಯಿಲೆ ತಪ್ಪುವುದೇ ಇಲ್ಲವಲ್ಲ!

ಚಂದು—ಹೇಗೆ ತಪ್ಪುವುದು? ನಿಮಗೆ ಆಗದ ರೋಗವಾವುದು? ಮಗುವಿನ ಕಣ್ಣೂ ಆಗುವ ಹಾಗಿಲ್ಲ.

ಸಂಜೀವ—ಬಾಯಿಗೆ ಬಂದಂತೆ ಬಗುಳಬೇಡ. ನಾನೀಗ ಸೌಖ್ಯವಾಗಿಲ್ಲವೆ?

ಚಂದು—ಹೌದು, ಸೌಖ್ಯವಾಗಿದ್ದೀರಿ! ಕೊಳೆತ ಕುಂಬಳಕಾಯಿ!

ಸಂಜೀವ—ನಿನಗೆ ನಾನು ಸಲುಗೆಕೊಟ್ಟದು ಹೆಚ್ಚಾಯಿತು.

ಹೀಗೆಲ್ಲ ನಾಲಿಗೆಗೆ ಸ್ವಾತಂತ್ರ್ಯಕೊಟ್ಟರೆ ನೋಡಿಕೋ!

ಚಂದು—ಆಯಿತು, ನೋಡಿಕೊಳ್ಳುತ್ತೇನೆ.

ಸಂಜೀವ—ಏನೆಂದೆ!

ಚಂದು—ನಾಲಿಗೆಗೆ ಸ್ವಾತಂತ್ರ್ಯ ಕೊಡದಂತೆ ನೋಡುತ್ತೇನೆಂದೆ.

ಸಂಜೀವ ಹಾಗೆ ಬಾ. ಚಂದು! (ಯೋಚಿಸಿ) ಆ ಗಾಣಿಗ ಸುಬ್ಬನು ಈಗ ನಾಗಿಯ ಯೋಚನೆಯನ್ನು ಬಿಟ್ಟಿದ್ದಾನೋ ಇಲ್ಲವೋ?

ಚಂದು—(ಮೌನ.)

ಸಂಜೀವ–(ತಲೆ ಹಿಡಿದು ಕುಲುಕಿ) ಏನೋ ಶನಿ! ಮಾತಾಡೋ.

ಚಂದು—ನಾಲಿಗೆಗೆ ಸ್ವಾತಂತ್ರ್ಯ ಕೊಡಬಾರದೆಂದು ಬಂಧನ ದಲ್ಲಿಟ್ಟಿದ್ದೇನೆ.

ಸಂಜೀವ—ಹೆಣದತ್ತ! ಮಾತಾಡೋ! ಕಂಡಾಬಟ್ಟೆ ಮಾತಾಡ ಬಾರದೆಂದು ಹೇಳಿದ್ದಲ್ಲದೆ ಮಾತಾಡಲೇ ಬಾರದೆಂದು ಹೇಳಿದುದೆ?

ಚಂದು—ಆ ಸುಬ್ಬ, ಆ ನಾಯಿ, ಈಗ ಊರೆಲ್ಲಾ ಡಂಗುರ ಹೊಡೆ ಯುತ್ತಾ ಬರುತ್ತಾನೆ.

ಸಂಜೀವ—ಏನೆಂದು?

ಚಂದು—ಮತ್ತೇನೆಂದು? ತನ್ನ ಹೆಂಡತಿಯನ್ನು ಶೆಟ್ರು ಕೆಡಿಸಿ ದ್ದಾರೆಂದು. ಅವನಿಗೆ ನಾಚಿಕೆಯೂ ಇಲ್ಲ!

ಸಂಜೀವ—ಅವನ ಕಾಲು ಮುರಿಸಿ ಹಾಕಲಿಕ್ಕೆ ನಿನ್ನಿಂದಾಗಲಿಲ್ಲ! ನೀನೊಬ್ಬ!

ಚಂದು—ಸಾಯಲಿ ಪಾಪ! ಎಲ್ಲಿಯಾದರೂ ಕೂಲಿಕೆಲಸಮಾಡಿ ಬದುಕಿಕೊಳ್ಳಲಿ!

ಸಂಜೀವ—ಅದು ಆಯಿತಲ್ಲಾ, ನಮ್ಮ ಮನೆಯವರದು ಏನು ಆಲೋಚನೆ ನಡೆದಿದೆ?

ಚಂದು—ಅವರೂ ಜೋರಾಗಿದ್ದಾರೆ. ನೀವು ಅವರಿಗೆ ಅನ್ನ ಕೊಡುವುದಿಲ್ಲವೆಂದು ಸಿಕ್ಕಿಸಿಕ್ಕಿದವರೊಡನೆ ಸಾರುತ್ತಿದ್ದಾರೆ. ದೊಡ್ಡ ಮನೆ ಮಹಾಬಲ ಶೆಟ್ರನ್ನು ಪಂಚಾಯಿತಿಕೆಗೆ ಕರೆತರಲಿರುವರಂತೆ. ಅವರಿಗೆ ಈಗ ಕೊಡುವ ಕಜೆ ಅಕ್ಕಿಯನ್ನೂ ನಿಲ್ಲಿಸಿಬಿಡಬೇಕು.

ಸಂಜೀವ— ಹಾಗೆಯೇ ಮಾಡು. ಅವರು ಮಾಡುವುದನ್ನು ಮಾಡಲಿ. ಮಹಾಬಲ ಶೆಟ್ಟಿ ಏಕೆ? ಮಹಾರಾಜ ಬೇಕಾದರೂ ಬರಲಿ; ನೋಡುವ! ತಾಯಿ ಪಟ್ಟಾದಾರಳಾಗಿ ಇರುವ ವರೆಗೆ ಸರ್ವಾಧಿಕಾರ ನನ್ನದು. ನನ್ನ ಇಚ್ಛೆಯಂತೆ ನಾನು ನಡೆಯಬಹುದು. ನನ್ನನ್ನು ಕೇಳಲು ಮಹಾಬಲ ಶೆಟ್ಟಿ ಯಾರು?

ಚಂದು ಕುಟುಂಬದವರು ವ್ಯಾಜ್ಯ ಮಾಡಿದರೆ?

ಸಂಜೀವ - ಹೌದು, ವ್ಯಾಜ್ಯ! ಅದೇನು ಊಟವೋ? ಅದಕ್ಕೆ ಧನ ಜನ ಸಹಾಯಬೇಕು. ಈ ನಾಯಿಗಳ ಹತ್ತಿರ ಏನಿದೆ? ಎಲ್ಲಾ ಭೂಭಾರಕ್ಕೆ ಹುಟ್ಟಿದವು. ಒಂದು ವೇಳೆ ವ್ಯಾಜ್ಯಮಾಡಿದರೂ ಆಗುವು ದೇನು? ಅದರ ಭೀತಿ ನನಗಿಲ್ಲ. ಅದಂತಿರಲಿ. (ಯೋಚಿಸಿ) ಆ ಕೃಷ್ಣ ಭಟ್ಟ, ಅವನ ಆಸ್ತಿಯನ್ನು ನನಗೆ ಬರೆದುಹಾಕುವ ಕುರಿತು ಏನು ಹೇಳಿದ?

ಚಂದು— ನೀವು ಬರೇ ಎರಡು ಸಾವಿರ ರೂಪಾಯಿ ಕೊಡುವು ದಂತೆ. ಐದಾರು ಸಾವಿರ ಕೊಡುವವರು ಬೇರೆ ಇದ್ದಾರಂತೆ.

ಸಂಜೀವ— ಹೌದು! ಬೇರೆ ಅವನ ಅಪ್ಪಂದಿರು! ನನ್ನ ಎದುರು ಬರಲು ಯಾರಿಗೆ ಧೈರ್ಯವಿದೆ? ಚಂದು, ಅವನ ಒಕ್ಕಲುಗಳೊಡನೆ ನಾನು ಹೇಳುವವರೆಗೆ ಯಾರೂ ಈ ವರ್ಷದ ಗೇಣಿಯನ್ನು ಕೊಡಬಾರ ದೆಂದು ಹೇಳು. ನೋಡುವ, ಅವನ ದರ್ಪ ಎಲ್ಲಿಯ ವರೆಗೆ ನಡೆಯುತ್ತದೆಂತ!

೯ನೇ ದೃಶ್ಯ

[ಸಂಜೀವನ ಮನೆ. ಮನೋರಮೆಯು ಸ್ವಲ್ಪ ಸೌಖ್ಯಹೊಂದಿ ಕುಳಿ ತಿರುವಳು ತುಂಗಮ್ಮನೂ ಅವಳೊಂದಿಗಿರುವಳು. ತಾರಾನಾಥನು ಮನೋ ರಮೆಯನ್ನು ಬೀಳ್ಕೊಳ್ಳುವನು.]

ತಾರಾನಾಥ— ಮನೋರಮೆ, ಈಗ ನಿನಗೆ ಸ್ವಲ್ಪ ಸೌಖ್ಯ ವಾಗಿರುವುದು. ಸಕಾಲದಲ್ಲಿ ಡಾಕ್ಟರರನ್ನು ಕರೆಸಿ ಔಷಧಿ ಮಾಡಿಸ ದಿರುತ್ತಿದ್ದರೆ ನಿನ್ನ ಅವಸ್ಥೆ ಏನಾಗುತ್ತಿದ್ದಿತೋ ಏನೋ!

ತುಂಗಮ್ಮ—ಅವಳ ಗ್ರಹಗತಿ ಈಗ ಬಹಳ ಕೆಟ್ಟದು. ತಂತ್ರಿಗಳು ಜಾತಕ ನೋಡಿ ಹೇಳಿದರು. ಅದಕ್ಕೆ ಮೃತ್ಯುಂಜಯ ಹೋಮ ಮಾಡಿಸಬೇಕಂತೆ. ನಾನು ನಮ್ಮ ಜುಮಾದಿಗೆ ಒಂದು ಕೋಲವನ್ನೂ, ತಿರುಪತಿಗೆ ಹೋಗುವ ಹರಕೆಯನ್ನೂ ಹೇಳಿಕೊಂಡಿದ್ದೇನೆ. ದೇವರ ದಯೆಯಿಂದಲೂ, ಗುರುಹಿರಿಯರ ಪುಣ್ಯದಿಂದಲೂ ಮನೋರಮೆಯು ಹೇಗಾದರೂ ಬದುಕಿಕೊಂಡಳು. ಅವಳ ಮಗುವಿಗೆ ಬೇಗನೆ ತುಲಾ ಭಾರವನ್ನು ತೂಗಿಸಬೇಕೆಂದು ತಂತ್ರಿಗಳು ಹೇಳಿದ್ದಾರೆ. ಅದರ ದೆಶೆಯೂ ಈಗ ಬಹಳ ಕೆಟ್ಟದಂತೆ.

ಮನೋರಮೆ--ಅಣ್ಣಾ, ನೀನು ಕರೆಸಿದ್ದ ಡಾಕ್ಟರರು ಬಲು ಒಳ್ಳೆಯವರು. ಅವರು ಅಲ್ಲದಿರುತ್ತಿದ್ದರೆ ನನ್ನ ಪಾಡು ಏನಾಗುತ್ತಿತ್ತೊ!

ತಾರಾನಾಥ—ಅವರು ನನ್ನ ಪೂರ್ವಪರಿಚಿತರು. ಇನ್ನು ಮುಂದೆಯೂ ನೀನು ಬಹಳ ಜಾಗ್ರತೆಯಿಂದ ಇರಬೇಕು. ಅಸಡ್ಡೆ ಮಾಡಬಾರದು. ನೀನು ಯಾವಾಗ ಜನ ಕಳುಹಿಸಿದರೂ ಅವರು ಬಂದು ಪರೀಕ್ಷಿಸಿ ಔಷಧವನ್ನು ಕೊಡಲು ಸಿದ್ಧರಿರುವರು.

ಮನೋರಮೆ—ಅಣ್ಣಾ, ನಿನ್ನ ಭಾವನಿಗೆ ಸ್ವಲ್ಪ ಬುದ್ಧಿ ಹೇಳಿ ಹೋಗು. ಮನೆಯಲ್ಲಿ ನನ್ನ ಕಣ್ಣೆದುರಲ್ಲೇ ತರತರದ ಅನಾಚಾರಗಳು ನಡೆಯುತ್ತಿವೆ. ಒಂದೆಡೆ ಕುಟುಂಬದ ಗೋಳೆದ್ದಿದೆ. ಅವರಿಗೆ ಅಕ್ಕಿ ಕೊಡುವುದನ್ನೂ ನಿಲ್ಲಿಸಿರುವರು. ನಾನು ಹೇಳಿದರೆ, 'ಹೆಂಗಸರಿಗೆ ಪಂಚಾಯತಿಕೆಯನ್ನು ಕೊಟ್ಟವರು ಯಾರು' ಎಂದು ಗದರಿಸುವರು....

(ಸಂಜೀವನು ಪ್ರವೇಶಿಸುವನು.)

ತಾರಾನಾಥ—ಭಾವ, ನಾನು ಹೋಗುವೆನು. ಇಂದಿರೆಯೊಬ್ಬಳೇ ಮನೆಯಲ್ಲಿರುವಳು. ಮನೋರಮೆಗೂ ಈಗ ಸ್ವಲ್ಪ ಸೌಖ್ಯವಾಗಿರುವುದು.

ಸಂಜೀವ – ಆಯಿತು.

ತಾರಾನಾಥ—ಆದರೆ ಕೆಲವು ಮಾತುಗಳನ್ನು ನಿನಗೆ ಹೇಳಬೇಕೆಂದಿರುವೆನು.

ಸಂಜೀವ— ಹೇಳು.

ತಾರಾನಾಥ—ಸಿಟ್ಟಾಗಲಾರದಷ್ಟೆ?

ಸಂಜೀವ—ಸಿಟ್ಟೇನು?

ತಾರಾನಾಥ--ಮನೋರಮೆಯ ಈ ಘನರೋಗಕ್ಕೂ, ನಿನ್ನ ಮಗುವಿನ ಕಣ್ಣುನೋವಿಗೂ ಮೂಲಕಾರಣರಾರೆಂಬುದನ್ನು ಬಲ್ಲೆಯಾ?

ಸಂಜೀವ—ಯಾರು, ನಾನೇ?

ತಾರಾನಾಥ—ಹೌದು, ನೀನೇ. ಬೇಕಾದರೆ ಡಾಕ್ಟರರೊಡನೆ ಕೇಳು. ನಾನು ಕಲ್ಪಿಸಿ ಹೇಳುವುದಲ್ಲ. ನಿನ್ನ ದುಷ್ಕರ್ಮದ ಫಲವನ್ನು ನಿನ್ನ ನಿರ್ದೋಷಿ ಹೆಂಡತಿಯೂ, ಮಕ್ಕಳೂ, ಮುಂದೆ ನಿನ್ನ ಮೊಮ್ಮಕ್ಕಳೂ ಮರಿ ಮಕ್ಕಳೇ ಮೊದಲಾದ ತಲತಲಾಂತರದವರೂ ಅನುಭವಿಸಬೇಕಾಗುವುದೆಂಬುದನ್ನು ಸ್ವಲ್ಪವಾದರೂ ವಿಚಾರಿಸಿರುವೆಯಾ? ಮದುವೆಯ ಮೊದಲು ಅಷ್ಟೊಂದು ಆರೋಗ್ಯಶಾಲಿನಿಯಾಗಿದ್ದ ಮನೋರಮೆಯು ಇಂದು ರೋಗದ ಬೇರಿನಂತಾಗಿರುವಳು. ಇನ್ನು ನಿನ್ನ ಮಗುವಿನ ವಿಷಯದಲ್ಲಿ ಪ್ರತ್ಯಕ್ಷಕ್ಕೆ ಪ್ರಮಾಣಬೇಡ. ಅದರ ಕಣ್ಣು ಸರಿಯಾಗುವುದು ಕಷ್ಟಸಾಧ್ಯವೆಂದೇ ಡಾಕ್ಟರರ ಅಭಿಮತ. ಇಷ್ಟಾದರೂ ನೀನು ನಿನ್ನ ದುರಾಚಾರವನ್ನು ನಿರ್ದಯನಾಗಿ ಮುನ್ನಡೆಸುತ್ತಿರುವೆ. ಐಶ್ವರ್ಯದರ್ಪದಿಂದ ಹಲವು ಸ್ತ್ರೀಯರನ್ನು ಕೆಡಿಸಿ ಅವರ ಅನ್ನ ತೆಗೆದಿರುವೆ. ಊರಲ್ಲಿ ನಿನ್ನನ್ನು ಒಳ್ಳೆಯುವನೆನ್ನುವವನು ಒಬ್ಬನೂ ಇಲ್ಲ. ಎದುರಿನಲ್ಲಿ ಹೆದರಿದರೂ ಹಿಂದಿನಿಂದ ಎಲ್ಲರೂ ನಿನ್ನನ್ನು ನಿಂದಿಸಿ ದ್ವೇಷಿಸುತ್ತಿರುವರು. ಸ್ವಕುಟುಂಬಕ್ಕೇನೇ ಅನ್ನ ಹಾಕದೆ ನರಳಿಸುತ್ತೀ. ಇದರಿಂದ ಸಿಕ್ಕುವ ಪುರುಷಾರ್ಥವೇನೋ ನನಗೆ ತಿಳಿಯದು. ದೇವರು ನಮಗೆ ಆಸ್ತಿಬದುಕನ್ನು ಕೊಡುವುದು ಪರಹಿತಕ್ಕಾಗಿ ಅಲ್ಲದೆ ಪರ ಉಪದ್ರವಕ್ಕಲ್ಲ. ನಮ್ಮ ಈ ಮೂರು ದಿನದ ಬಾಳುವೆಯನ್ನು ಜನೋಪಕಾರದಲ್ಲಿ, ಸತ್ಕಾರ್ಯಕ್ಕಾಗಿ ಕಳೆಯದೆ ಊರಿಗೊಂದು ಮಾರಿಯಂತಿರುವುದೇ? ನಾನು ನಿರ್ದಾಕ್ಷಿಣ್ಯವಾಗಿ ಬಿರುಸಾಗಿ ಮಾತಾಡಿದುದನ್ನು ಕ್ಷಮಿಸು. ನಿನ್ನ ಆ ನೀಚ ಚಂದುವಿನ ಸಹವಾಸ ಬಿಟ್ಟು ಇನ್ನಾದರೂ ಒಳ್ಳೆಯವನಾಗು.

ಸಂಜೀವ– (ಸಿಟ್ಟಿನಿಂದ) ಹೂಂ! ಆಯಿತೊ, ಇನ್ನೇನಾದರೂ ಉಳಿದಿರುವುದೊ? ಇದ್ದರೆ ಎಲ್ಲವೂ ಒಮ್ಮೆಯೇ ಹೊರಬರಲಿ ಮನೆಗೆ ಬಂದು ಇಷ್ಟು ದಿವಸ ಇದ್ದುದಕ್ಕೆ ಏನಾದರೂ ಒಂದು ಕೆಲಸಮಾಡಿ ಹೋಗಬೇಕಲ್ಲವೆ?

ತಾರಾನಾಥ—(ಕೋಪದಿಂದ) ನಾನು ನನ್ನ ಮನೆಯಲ್ಲಿ ಅನ್ನವಿಲ್ಲವೆಂದು ನಿನ್ನ ಮನೆಗೆ ಬಂದುದಲ್ಲ. ಮನೋರಮೆ, ಹೋಗುವೆನು. ಅಮ್ಮನಿಗೆ ಎರಡು ಮೂರು ದಿವಸಗಳ ಮೇಲೆ ಜನ ಕಳುಹಿಸುವೆನು. (ಹೋಗಿಬಿಡುವನು.)

ಸಂಜೀವ—(ವಿಕಾರವಾಗಿ ನಗುತ್ತ, ಸ್ವಗತ) ಅಹಹ! ಇವನೂ ನನಗೆ ಬುದ್ಧಿ ಹೇಳುವವನು! ನಾನು ಒಂದು ಕ್ಷಣದೊಳಗೆ ಮಾಡುವ ಒಂದೇ ಒಂದು ಕಾರ್ಯವನ್ನು ಇವನು ಮಾಡುವುದಂತಿರಲಿ, ಇಡೀ ಜೀವಮಾನದಲ್ಲಿ ಯೋಚಿಸಲು ಕೂಡ ಇವನಿಂದ ಸಾಧ್ಯವಿಲ್ಲದಿರುವಾಗ ನನಗೆ ಉಪದೇಶ ಕೊಡುವ ಹುಚ್ಚೇಕೆ? ಇವನ ಸಿಟ್ಟಿಗೆ ನಾನು ಸೊಪ್ಪು ಹಾಕುವವನೆ? ಸಿಟ್ಟಿನಿಂದ ಹೋದ, ಹೋಗಲಿ.

೧೦ನೇ ದೃಶ್ಯ

[ಮನೋರಮೆಯು ಕಾಯಿಲೆ ನೋಡಬಂದ ತುಂಗಮ್ಮನು ಸಂಜೀವನ ಮನೆಯಿಂದ ಹೊರಟು ಮಂಗಳೂರಿನ ತನ್ನ ಮನೆಗೆ ಹೋಗುತ್ತಿರುವಾಗ, ದಾರಿಯಲ್ಲಿ, ಮುದಿ ವಯಸ್ಸಿನಲ್ಲಿ ತನಗುಂಟಾದ ಸಂಕಷ್ಟದ ಕುರಿತು ಚಿಂತಿಸುವಳು.]

ತುಂಗಮ್ಮ—(ಸ್ವಗತ) ಪ್ರಾಯ ಹೋಗುತ್ತಾ ಬಂದಂತೆ, ನನ್ನ ಚಿಂತೆಯು ಕಡಿಮೆಯಾಗುವ ಬದಲಿಗೆ ದಿನೇ ದಿನೇ ಅಧಿಕವಾಗ ಹತ್ತಿದೆ. ಒಂದೆಡೆ ಪ್ರಿಯ ಪುತ್ರಿ ಮನೋರಮೆಯ ಕಾಯಿಲೆಯ ಚಿಂತೆ, ಇನ್ನೊಂದೆಡೆ ಧೂರ್ತ ಸೊಸೆಯ ಅನುನಿತ್ಯದ ಕಾಟ. ಒಂದೆಡೆ ಏಕ ಮಾತ್ರ ಪುತ್ರನ ಅಸಡ್ಡೆ, ಇನ್ನೊಂದೆಡೆ ಅಳಿಯನ ದುಂದುಗಾರಿಕೆ. ಈ ಚಿಂತೆಗಳೆಲ್ಲಾ ನನ್ನ ಮುಪ್ಪನ್ನು ಇಮ್ಮಡಿ ಹೆಚ್ಚಿಸಿರುವವು; ನನಗೇಕೆ ಸಾವು ಬಾರದೆಂಬ ಯೋಚನೆಗೀಡುಮಾಡಿರುವವು. ಸಂಜೀವನ ಈಗೀಗಿನ

ವರ್ತನೆ ಮತ್ತು ಅವನ ಕುರಿತು ಜನರಾಡುವ ಮಾತುಗಳು ನನ್ನ ಹೃದಯವನ್ನು ತಲ್ಲಣಗೊಳಿಸುತ್ತಿರುವವು. ಕಡಿಮೆಯೆಂದರೆ ಎರಡು ಮೂರು ಸಾವಿರ ರೂಪಾಯಿಗಳನ್ನು ನಾನು ಇತ್ತಲಾಗಿ ಅವನಿಗೆ ಕೊಟ್ಟದಾಯಿತು. ಅಲ್ಲದೆ ಮನೋರಮೆಯ ಆಭರಣಗಳಾವುವೂ ಇರುವಂತೆ ತೋರುವುದಿಲ್ಲ. ಅವಳೆಷ್ಟು ಗುಟ್ಟುಮಾಡಿದರೂ ನನಗದು ಸಾಕಷ್ಟು ಸ್ಪಷ್ಟವಾಗಿಯೇ ತಿಳಿದು ಬಂದಿರುವುದು. ಇನ್ನೂ ಅವನಿಗೆ ಅಡಚಣೆ ತಪ್ಪಲಿಕ್ಕಿಲ್ಲ. ಯಾವಾಗಲೂ ಬಿದ್ದುಕೊಂಡಿರುವುದು ಕೋರ್ಟು ಕಚೇರಿಗಳ ಬಾಗಿಲಲ್ಲಿ. ಮುಂದೆ ಎಂತಹ ಗಂಡಾಂತರವೊದಗುವುದೋ ಹೇಳಬರುವುದಿಲ್ಲ. ಮನೋರಮೆಯು ಕಣ್ಣೀರಿಳಿಸುವಾಗ ನನಗೆ ಕಠಿಣ ಮನಸು ಮಾಡಿಕೊಂಡಿರಲು ಸಾಧ್ಯವಿಲ್ಲ. ಇದೀಗ ಮಗಳನ್ನು ಮದುವೆ ಮಾಡಿ ಕೊಟ್ಟು ನಾನು ಪಡೆದ ಸುಖ! ಇನ್ನು, ಸೊಸೆಯ ಕುರಿತು ಹೇಳಿ ಫಲವಿಲ್ಲ. ನಾನು ಕೆಲಸಮಯ ಮನೆಯಲ್ಲಿಲ್ಲದಿರುವುದು ಬಹಳ ಸಂತೋಷವಾಗಿರಬೇಕವಳಿಗೆ. ಏನೆಲ್ಲಾ ಕಾರ್ಬಾರು ನಡಿಸಿರುವಳೋ ನೋಡಬೇಕು. (ಹೋಗುವಳು).

೧೧ನೇ ದೃಶ್ಯ

[ಇಂದಿರೆಯು ಮನೆಯ ಮುಖಮಂಟಪದಲ್ಲಿ, ಕುರ್ಚಿಯ ಮೇಲೆ ಕುಳಿತು "ನವಯುಗ" ಪತ್ರಿಕೆಯನ್ನೋದುತ್ತಿರುವಳು.]

ಇಂದಿರೆ – (ಪತ್ರಿಕೆ ಮುಚ್ಚಿ, ಸ್ವಗತ) ಹೌದು, ಸ್ತ್ರೀ ಸುಧಾರಣೆ! ಬರೆಯುವುದಕ್ಕೇನೂ ಕಡಿಮೆಯಿಲ್ಲ! ಆದರೆ ಹೆಂಗುಸರಿಗೂ ಗಂಡುಸರಂತೆಯೇ ಲೋಕದ ಸಂಗತಿಗಳನ್ನು ತಿಳಿಯುವ ಉತ್ಸುಕತೆಯಿದೆ; ತಿಳುವಳಿಕೆಯನ್ನು ಪಡೆಯುವ ಆತುರವಿದೆ; ವಿನೋದ ವಿಹಾರೋಲ್ಲಾಸದ ಹೃದಯವಿದೆಯೆಂದು ಮನಗಂಡು ಅದರಂತೆ ಕಾರ್ಯತಃ ವರ್ತಿಸುವ ಗಂಡುಸರು ಇಂದು ಸಮಾಜದಲ್ಲಿ ಅದೆಷ್ಟು ಮಂದಿಯಿರುವರು! ಪತ್ರಿಕೆಗಳಲ್ಲೇನೋ ಉದ್ದುದ್ದ ಲೇಖನ, ಭಾಷಣ ಪ್ರಚಾರವು ಎಡೆಬಿಡದೆ ನಡೆಯುತ್ತಿದೆ. ಆದರೂ ಅದರಿಂದ ಗಂಡುಸರಲ್ಲಿ ನಿಜವಾದ ಹೃದಯ

ಮಾರ್ಪಾಟವುಂಟಾದಂತೆ ತೋರುವುದಿಲ್ಲ. ಮಂಗಳೂರಿನಂತಹ ಬಹಳ ಮುಂದುವರಿದುದೆನಿಸುವ ಪಟ್ಟಣದಲ್ಲಿಯೂ ಸ್ತ್ರೀಯರ ಕುರಿತಾದ ಗಂಡುಸರ ಸಂಕುಚಿತ ಬುದ್ಧಿಯು ಇನ್ನೂ ಪ್ರಬಲವಾಗಿಯೇ ಇರುವಂತಿದೆ. ಇದೆಷ್ಟು ಶೋಚನೀಯವಾದುದು! (ಬದಿಗೆ ನೋಡಿ) ಅದೋ ಅತ್ತೆ ಬಂದರು ಇನ್ನೇನೆಲ್ಲಾ ಬೈದುಭಂಗಿಸುವರೋ! (ಪತ್ರಿಕೆಯನ್ನು ಮೇಜಿಯ ಮೇಲೆ ಹಾಕಿ ಕುರ್ಚಿಯಿಂದ ಎದ್ದು ನಿಲ್ಲುವಳು. ತುಂಗಮ್ಮನು ಪ್ರವೇಶಿಸಿ ಇಂದಿರೆಯ ಕಡೆಗೆ ಕ್ರೂರನೋಟ ಬೀರುವಳು.)

ತುಂಗಮ್ಮ—(ಸ್ವಗತ) ನಡೆದಿದೆಯಲ್ಲಾ ಮಹಾರಾಣಿಯ ದರ್ಬಾರು! ಇನ್ನು, ಒಳಗೇನೆಲ್ಲಾ ಕಾರ್ಬಾರು ನಡೆದಿದೆಯೋ ನೋಡಬೇಕು! (ಇಂದಿರೆಯನ್ನು ದಿಟ್ಟಿಸಿ ನೋಡುತ್ತ ಒಳ ಹೋಗುವಳು.)

ಇಂದಿರೆ—(ಸ್ವಗತ) ಇಂದು ಬಹು ರೌದ್ರಾವತಾರ ತಾಳಿದ್ದಾರೆ! ಈಗಲೇ ಸಹಸ್ರನಾಮವಾಗಲಿದೆ. ಹಳೆಯ ಬಾಕಿಯನ್ನೆಲ್ಲಾ ಬಡ್ಡಿ ಕೂಡಿಸಿ ಕೊಡದಿರರು! (ಒಳಕ್ಕೆ ನೋಡಿ) ಎಷ್ಟು ಚಂದವಾಗಿ 'ಜಡ್ತಿ' ಮಾಡುತ್ತಿದ್ದಾರೆ! ಇಲ್ಲಿಗೇನು ಕಳ್ಳರು ನುಗ್ಗಿರುವರೆಂದು ತಿಳಿದಿರುವರೆ? ಏನೇ ಆಗಲಿ; ಅವರು ಏನೇ ಹೇಳಲಿ, ನಾನು ಧೈರ್ಯದಿಂದ ಅವರಿಗಿಂದು ಉತ್ತರಕೊಡುವುದೇ ಖಂಡಿತ.

(ತುಂಗಮ್ಮನು ಒಳಗಿಂದ ಧಾವಿಸಿಬರುವಳು)

ತುಂಗಮ್ಮ—(ಸಿಟ್ಟಿನಿಂದ) ಇಲ್ಲಿ ಪ್ರತಿನಿತ್ಯ ಸಮಾರಾಧನೆ ನಡೆದಿದೆಯೇ? ನಾನು ಹೋಗುವಾಗ ಒಂದು ತಿಂಗಳ ಸಾಮಾನುಗಳನ್ನಿಟ್ಟು ಹೋಗಿದ್ದೆ. ಈಗ ಒಂದು ಚೂರೂ ಇಲ್ಲ.

ಇಂದಿರೆ—ಹೌದು, ನಾನು ಬ್ರಾಹ್ಮಣರನ್ನು ಕರೆಸಿ ಅನ್ನ ಹಾಕಿಸಿದೆ!

ತುಂಗಮ್ಮ - ಬ್ರಾಹ್ಮಣರಿಗೇಕೆ ಹಾಕುತ್ತಿ? ಹೊಲೆಯರು, ಕೊರಗರು ಇಲ್ಲವೆ? ಪುಣ್ಯ ಸಿಗುವುದು ನೀಚ ಜನರಿಗೆ ಅನ್ನ ಹಾಕುವುದರಿಂದ!

ಇಂದಿರೆ—ಬಡವರಿಗೆ ಅನ್ನ ಹಾಕಿದರೇನೇ ಪುಣ್ಯ ದೊರೆಯುವುದು. ಎಷ್ಟು ಕೊಟ್ಟರೂ ತೃಪ್ತರಾಗದ, ಉಚ್ಚರೆನಿಸುವ ಬ್ರಾಹ್ಮಣರಿಗೆ ಹಾಕುವುದರಿಂದಲ್ಲ.

ತುಂಗಮ್ಮ—ಸಾಕು, ಸಾಕು! ಕಲಿತವಳೆಂದು ಹೆಚ್ಚು ಮಾತ ನಾಡಬೇಡ.

ಇಂದಿರೆ—ನಾನೇನು ಹೆಚ್ಚು ಮಾತನಾಡಿದೆ?

ತುಂಗಮ್ಮ—ಏನು ಹೆಚ್ಚು ಮಾತಾಡಿದುದೆ? ನನ್ನನ್ನು ತುಟಿ ಯೆತ್ತ ಬಿಡುವುದಿಲ್ಲ! ನಿನ್ನದೇ ರಾಜ್ಯ! ನೀನೇ ದೊಡ್ಡ ರಾಣಿ! ಅಬ್ಬಬ್ಬ! ನೀನು ಯಾವಾಗ ಕಾಲಿಟ್ಟೆಯೋ ಆಗಲೇ ಹಿಡಿದಿದೆ ಈ ಮನೆಗೆ ಶನಿ!

ಇಂದಿರೆ—ನಾನು ಬಂದು ಹಿಡಿದ ಶನಿ ಏನು?

ತುಂಗಮ್ಮ—ಎದುರು ಮಾತನಾಡಬೇಡ! ನಿನ್ನ ಗಂಡ ನೀನು ಹೇಳಿದ ಹಾಗೆ ಕುಣಿಯುತ್ತಾನೆಂದು ಗೊತ್ತುಂಟು!

ಇಂದಿರೆ—ಅವರು ನಾನು ಹೇಳಿದ ಹಾಗೆ ಕುಣಿದುದೇನು?

ತುಂಗಮ್ಮ—ಕುಣಿದುದೇನು! ನಿನಗೆ ಗೊತ್ತೇ ಇಲ್ಲವೆ? ನೀನು ಎಷ್ಟರವಳು? ನನಗೆದುರು ಮಾತನಾಡಲು ನಿನಗೆ ಧೈರ್ಯವೆಲ್ಲಿಂದ ಬಂತು? ಈ ಮನೆಗೆ ಬರುವಾಗ ನೀನೇನು ತಂದಿದ್ದಿ? ಏನು ಹತ್ತು ಸಾವಿರ ವರದಕ್ಷಿಣೆ ಕೊಟ್ಟಿದ್ದೆಯೇ? ಅಲ್ಲ, ನೂರಾರು ರೂಪಾಯಿಯ ಬಳುವಳಿ ತಂದಿದ್ದೆಯೇ? ಅಣ್ಣನ ಬೊಜ್ಜಕ್ಕೆ ನಿನ್ನ ಮನೆಯವರು ಒಂದೇ ಒಂದು ಹೊರೆಯನ್ನಾದರೂ ಕಳುಹಿಸಿದ್ದರೇ?

ಇಂದಿರೆ—ಅವರೇ ಬೇಡವೆಂದುದಕ್ಕೆ ನಾವೇನು ಮಾಡಬೇಕು?

ತುಂಗಮ್ಮ—ಯಾರು? ತಾರಾನಾಥನು ಬೇಡವೆಂದನೇ? ಎಷ್ಟು ಚಂದ ಮಾತನಾಡುತ್ತಿ! ಯಾರಾದರೂ ತಮಗೆ ಹೊರೆಬೇಕು, ಹೊರೆ ಬೇಕು ಎಂದು ಬೇಡುವರೆ? ಸಂಜೀವ ೫೦೦ ಹೊರೆ ಕಳುಹಿಸಿದ್ದನಲ್ಲಾ—ನಾವೇನು ಬೇಕೆಂದು ಕೇಳಿಯೋ? ಅದೊಂದು ಮರ್ಯಾದೆ. ನಿಮ್ಮ ಮನೆಯವರಿಗೆ ಮರ್ಯಾದೆಯ ಸಂಗತಿ ಗೊತ್ತಿದ್ದರಲ್ಲವೇ!

ಇಂದಿರೆ—ನನ್ನ ವಿಷಯ ಏನು ಬೇಕಾದರೂ ಹೇಳಿ; ಮನೆಯವರ ಸಂಗತಿ ಮಾತನಾಡಬೇಡಿ.

ತುಂಗಮ್ಮ—ಏನಾಗುವುದು ಮಾತನಾಡಿದರೆ? ದೊಡ್ಡ ರಾಜರೋ ನಿನ್ನ ಮನೆಯವರು? ಅಪ್ಪನೊಬ್ಬ ವಕೀಲನೆಂದೊ?

ಇಂದಿರೆ—ಆಯಿತು, ನೀವೇ ಮಾತನಾಡಿ. ನಾನು ಮಾತನಾಡುವುದಿಲ್ಲ.

ತಾರಾನಾಥ—(ಪ್ರವೇಶಿಸಿ) ಏನಿದು, ಜಗಳವೇನು?

ತುಂಗಮ್ಮ—ಏನೂ ಇಲ್ಲ! ನಿನ್ನೊಡನೆ ಹೇಳಿ ಏನು ಪ್ರಯೋಜನ? ನೀನೂ ಅವಳ ಸಾಲಿನವನೇ!

ತಾರಾನಾಥ—ಹೌದು, ನಾನು ಅವಳ ಸಾಲಿನವನೇ. ನಿನ್ನ ಗಂಡ ನಿನ್ನ ಸಾಲಿನವನೇ ಆಗಿರಲಿಲ್ಲವೆ? ಗಂಡಹೆಂಡಿರು ಒಂದೇ ಸಾಲು ಹಿಡಿಯುವುದು ತಪ್ಪೆ?

ತುಂಗಮ್ಮ—ತಪ್ಪಲ್ಲ, ಸರಿ! ಎಲ್ಲಾ ಸರಿ! (ಕಣ್ಣು ಕೆರಳಿಸಿ ಹೋಗುವಳು)

ತಾರಾನಾಥ—ಇಂದಿರೆ, ನೀನೇನು ಮಾಡಿದೆ?

ಇಂದಿರೆ—ನಾನೇನೂ ಮಾಡಲಿಲ್ಲ. ಅವರು, ಬಂದವರೇ ಆರಂಭಿಸಿದ್ದಾರೆ 'ಅದು ಇಲ್ಲ, ಇದು ಇಲ್ಲ' ಎಂದು ದೂರಲಿಕ್ಕೆ. ನಾನು ಒಂದು ತಿಂಗಳ ಸಾಮಾನುಗಳನ್ನು ಹದಿನೈದು ದಿವಸಗಳಲ್ಲಿಯೇ ಖರ್ಚುಮಾಡಿಬಿಟ್ಟೆನಂತೆ! ಸಿಕ್ಕಿಸಿಕ್ಕಿದವರಿಗೆ ಅನ್ನಹಾಕಿ ಸಮಾರಾಧನೆ ಮಾಡಿದೆನಂತೆ!

ತಾರಾನಾಥ ಆಗಲಿ, ಸುಮ್ಮನಿರು. ಇನ್ನು ಮುಂದೆ ಅವಳೇನು ಮಾತನಾಡಿದರೂ ನೀನು ಎದುರಾಡಬೇಡ.

ಇಂದಿರೆ—(ದುಃಖದಿಂದ) ನಾನು ಎದುರಾಡಲೇ ಇಲ್ಲ. ಅವರೇ ನನ್ನನ್ನು ಮರ್ಯಾದೆ ಇಲ್ಲದವಳೆಂದು ಬೈದು ಭಂಗಿಸಿದುದು. (ಕಣ್ಣೀರಿಡುವಳು)

ತುಂಗಮ್ಮ—(ಪುನಃ ಧಾವಿಸಿಬಂದು) ಎದುರಾಡಲೇ ಇಲ್ಲ! ಅವರೇ ನನ್ನನ್ನು ಬೈದುದು! ಅಬ್ಬಬ್ಬ ಏನು ಜಾಣೆಯಪ್ಪ ಇವಳು! ಏನು ಕಣ್ಣು ಕಟ್ಟಿನವಳು!

ತಾರಾನಾಥ—ಅಮ್ಮಾ, ನಿನ್ನಿಂದ ನನಗೆ ಸುಖವಿಲ್ಲ. ನಾನು ಎಲ್ಲಿಯಾದರೂ ಮನೆಬಿಟ್ಟು ಹೋಗುವುದೇ ಲೇಸೆಂದು ತೋರುತ್ತದೆ.

ತುಂಗಮ್ಮ ನೀನೇಕೆ? ನಾನೇ ಹೋಗುವುದು ಒಳ್ಳೇದು! ಆಗ ನೀವಿಬ್ಬರೂ ಸುಖದಲ್ಲಿರಬಹುದಲ್ಲವೇ? (ಸಿಡುಕಿನಿಂದ ಹೋಗಿಬಿಡುವಳು.)

೧೨ನೇ ದೃಶ್ಯ

[ಬೀದಿ-ತಾರಾನಾಥನಿಗೆ ಮನೆಯ ವಾತಾವರಣವೇ ಅಸಹನೀಯವಾಗಿ ಅವನು ಹೊರಗೆ ತಿರುಗಾಡಹೋದಾಗ ಜನರ ಕುರುಡು ವಿಶ್ವಾಸಗಳ ಅನರ್ಥದ ಕುರಿತು ವಿಚಾರಮಗ್ನನಾಗುವನು]

ತಾರಾನಾಥ—(ಸ್ವಗತ) ಮಾನವಪ್ರಾಣಿಗೆ ವಿಚಾರ ಸ್ವಾತಂತ್ರ್ಯವಿದ್ದೂ ಫಲವೇನು? ಅವನು ಮೂಕ ಪ್ರಾಣಿಗಳಂತಾದರೂ ನಿರ್ಮಿಸಲ್ಪಟ್ಟಿದ್ದರೆ ನಿಸರ್ಗ ಪ್ರೇರಣೆಯ ಮೇರೆಗೆ ನಡೆದು ವಿಚಾರ ಸ್ವಾತಂತ್ರ್ಯವುಳ್ಳ ಅವಸ್ಥೆಗಿಂತಲೂ ಉತ್ತಮ ಸ್ಥಿತಿಯಲ್ಲಿರುವಂತಾಗುತ್ತಿದ್ದಿಲ್ಲವೇ ಎಂಬ ಸಂದೇಹವು ನನ್ನಲ್ಲಿ ಬಲಗೊಳ್ಳುತ್ತಿರುವುದು. ಏಕೆಂದರೆ ಸೇಕಡಾ ೯೯ ಕ್ಕಿಂತಲೂ ಮಿಕ್ಕಿದ ಜನರು ಯಾವುದೋ ಒಂದು ಕಾಲದ, ಯಾವ ಪರಿಸ್ಥಿತಿಯ ಒತ್ತಾಯದಿಂದಲೋ ಉಂಟಾದ ಆಚಾರ ಪದ್ಧತಿಗಳಿಗೆ ಒಂದಿಷ್ಟು ವಿಚಾರವಿಲ್ಲದೆ ಕಟ್ಟುಬಿದ್ದು, ಅವುಗಳಿಂದಾಗುವ ಪ್ರತ್ಯಕ್ಷ ಅನರ್ಥಗಳಿಗೂ ಕಣ್ಮುಚ್ಚಿ ಸ್ವಪರ ಘಾತುಕಜೀವನ ನಡಿಸಿ ಮಾನವ ಸಮಾಜವನ್ನೇ ಅಧೋಗತಿಗಿಳಿಸುವಾಗ ವಿಚಾರಿಯಾದವನು ಜುಗುಪ್ಸೆಗೊಳ್ಳದಿರುವುದಾದರೂ ಹೇಗೆ? ಏನಾದರೂ ಕಾಯಿಲೆ ಹುಟ್ಟಿದರೆ ಅದರ ಕಾರಣ ಶೋಧಿಸಿ ತಕ್ಕ ಔಷಧಿಮಾಡಿಸುವ ಬದಲಿಗೆ ಮೊದಲಾಗಿ ಹರಕೆ, ಕಾಣಿಕೆ, ನಿಮಿತ್ತವೆಂದೆಲ್ಲಾ ಬರಿಯ ಭ್ರಾಂತಿಯಿಂದ ವೃಥಾ ಹಣ ಹಾಗೂ ಕಾಲವ್ಯಯಮಾಡುವ ಹುಚ್ಚುತನಕ್ಕೇನೆನ್ನಬೇಕು! ನಾನೆಷ್ಟು ಬಗೆಯಿಂದ ಪ್ರಾರ್ಥಿಸಿದರೂ, ಜನರ ಕುರುಡು ವಿಶ್ವಾಸವು ಒಂದಿಷ್ಟು ಕಡಿಮೆಯಾಗುವಂತೆ ತೋರುವುದಿಲ್ಲ. ಅಮ್ಮನಂತೂ ಕೇವಲ ಅಂಧ ಶ್ರದ್ಧೆಯ ಪ್ರತಿಮೂರ್ತಿಯಾಗಿ ಪೂಜಾರಿ, ಪುರೋಹಿತರುಗಳ ಕೈಗೊಂಬೆಯಾಗಿ ಕುಣಿಯುತ್ತಿದ್ದಾಳೆ! ಈ ಹಳಬರ ಮನೋವೃತ್ತಿಯು ಹೇಗೂ ಇರಲಿ. ನವತರುಣರಾದ ನಾವು ಪ್ರಬಲ ಜನ ವಿರೋಧದಿಂದ ನಿರಾಶೆಗೊಳ್ಳದೆ, ಸಮಾಜ ಶರೀರವನ್ನೇ ತಿನ್ನುತ್ತಿರುವ ಕ್ಷಯಕೀಟವಾದ ಹಳೆಯ ಅಂಧರೂಢಿಗಳನ್ನು ಕಿತ್ತುಹಾಕಲು ಎಡೆಬಿಡದೆ ಯತ್ನಿಸುವುದು ನಮ್ಮ ಕರ್ತವ್ಯವಿದೆ. ಇದರಿಂದ ಮುಂದಿನ ಜನಾಂಗವಾದರೂ ಉನ್ನತಿ ಹೊಂದಲು ಹಾದಿಮಾಡಿ ಕೊಟ್ಟಂತಾಗುವುದಿಲ್ಲವೇ? (ಹೋಗುವನು)

೧೩ನೇ ದೃಶ್ಯ

[ತುಂಗಮ್ಮನ ಮನೆ. ಮನೋರಮೆಯು ಮಗುವಿಗುಂಟಾದ ಕಾಯಿಲೆಗಾಗಿ ತಂತ್ರಿಯು ನಿಮಿತ್ತ ನೋಡುವನು. ತಾರಾನಾಥ, ಮನೋಹರ, ಇಂದಿರೆಯರು ಒಂದೆಡೆ; ತುಂಗಮ್ಮ, ಮನೋರಮೆ, ಸಂಜೀವರು ಇನ್ನೊಂದೆಡೆ ಕುಳಿತಿರುವರು.]

ತಂತ್ರಿ—(ಮಂತ್ರ ಹೇಳುತ್ತಾ ಕಣ್ಣುಮುಚ್ಚಿ ಕೈಯಲ್ಲಿ ಏನನ್ನೋ ಗುಣಿಸಿದಂತೆ ನಟಿಸಿ) ಹೂಂ, ಪ್ರಥಮ ಪ್ರಶ್ನೆ ತುಂಗಮ್ಮನದು. ಬರಲಿ ಒಂದು ರೂಪಾಯಿ.

ತುಂಗಮ್ಮ. ತಾರಾನಾಥ, ಕೊಡು. ಮನೋರಮೆಯ ಮಗುವಿನ ವಿಷಯ ಪ್ರಶ್ನೆ ಕೇಳಬೇಕು.

ತಾರಾನಾಥ—ನನ್ನ ಕೈಯ್ಯಲ್ಲಿಲ್ಲ.

ತಂತ್ರಿ—ಯಾರಾದರೂ ಬೇಗ ಕೊಡಿರಪ್ಪ! ವಿಷಗಳಿಗೆ ಬರುತ್ತದೆ. ಬೇಗ ಕೊಡಿರಿ. (ಸಂಜೀವನು ಒಂದು ರೂಪಾಯಿ ತೆಗೆದು ಮಣೆಯ ಮೇಲಿಡುವನು. ತಂತ್ರಿಯು ಮಂತ್ರ ಹೇಳಿ ಕವಡಿ ಮಗುಚಿ ಹಾಕಿ ಎಣಿಸುತ್ತಿರುವನು.)

ಮನೋರಮೆ—ತಂತ್ರಿಗಳೆ, ಸರಿಯಾಗಿ ಹೇಳಿರಿ—ನನ್ನ ಮಗುವಿಗೆ ಏಕೆ ಹೀಗಾಯಿತು? ಒಂದು ದಿನವೂ ಅದಕ್ಕೆ ಸೌಖ್ಯವಿಲ್ಲ.

ತಂತ್ರಿ—(ಯೋಚಿಸುತ್ತಾ) ಮಗುವಿಗೆ ನಾಗನ ಉಪದ್ರವವುಂಟು.

ತುಂಗಮ್ಮ—ಹೌದು, ಅಣ್ಣ ತೀರಿಹೋದಂದಿನಿಂದ ನಾಗನಿಗೆ ಪೂಜೆಯಿಲ್ಲ. ತಾರಾನಾಥನು ನಾಗನ ಕಲ್ಲನ್ನೇ ತೆಗೆದು ಬಿಸಾಡುತ್ತಿದ್ದಾಗ ಬೊಬ್ಬೆಹಾಕಿ ತಡೆದದ್ದು ನಾನು. ತೋರಿ ಬಂತಲ್ಲಾ ಈಗ ಅದರ ಫಲ!

ತಂತ್ರಿ—ಅದಾಯಿತಲ್ಲ. ಇನ್ನು, ಈ ಮನೆಯಲ್ಲಿ ದೇವರ ಗಂಟೊಂದು ಅಪಹಾರವಾಗಿದೆ.

ತುಂಗಮ್ಮ—ಸೈ, ಮೊದಲೇ ನಾನು ಹೇಳಿದ್ದೆನಲ್ಲ! ನಾನು ಹೇಳಿದರೆ ಯಾರು ಕೇಳುತ್ತಾರೆ. ಅವರ ಇಂಗ್ಲಿಷ್ ಮರ್ಜಿಯೇ ಅವರಿಗೆ.

ಅಲ್ಲವಾದರೆ ತಿರುಪತಿ ದೇವರ ಮುಡುಪನ್ನು ಯಾರಾದರೂ ಕೊರಗರಿಗೆ ಹಂಚಿಯಾರೇ ತಂತ್ರಿಗಳೇ?

ಸಂಜೀವ—ಹೀಗೂ ಲೋಕದಲ್ಲುಂಟೇ ತಂತ್ರಿಗಳೇ?

ತಂತ್ರಿ—ರಾಮ, ರಾಮ! ಇದೇನು ಅನರ್ಥವಪ್ಪ!

ಮನೋರಮೆ—ತಂತ್ರಿಗಳೆ, ನೀವೇ ನನ್ನ ಮಗುವನ್ನು ಬದುಕಿಸಬೇಕು.

ತಾರಾನಾಥ—ತಿರುಪತಿ ವೆಂಕಟರಮಣನ ಗಂಟನ್ನು ಬಡ ಕೊರಗರಿಗೆ ಹಂಚಿದವ ನಾನು. ನನಗೇಕೆ ಏನೂ ಉಪದ್ರವವಾಗಲಿಲ್ಲ?

ತಂತ್ರಿ—ನಿನ್ನ ದಶಾನಾಥ ಸ್ವಲ್ಪ ಗಟ್ಟಿಯಿದೆ ಈಗ. ಆ ಮಗುವಿನ ದೆಶೆ ಕೆಟ್ಟದು. ಆದುದರಿಂದಲೇ ನಿಮ್ಮ ಕರ್ಮ ಅದಕ್ಕೆ ತಾಗಿದೆ.

ಮನೋಹರ—ಅವನವನ ಕರ್ಮವನ್ನು ಅವನವನೇ ಅನುಭವಿಸಬೇಕಲ್ಲವೆ? ಒಬ್ಬನ ಕರ್ಮದ ಫಲ ಇನ್ನೊಬ್ಬನಿಗೆ ತಾಗುವುದುಂಟೇ ತಂತ್ರಿಗಳೇ? ದೇವರ ನ್ಯಾಯವೆಂದರೆ ಇದೇ ರೀತಿಯೇ?

ತಂತ್ರಿ—ಒಬ್ಬನ ಕರ್ಮಫಲ ಇಡೀ ಕುಟುಂಬಕ್ಕೇ ಏಕೆ? ತಲತಲಾಂತರಕ್ಕೆ ಬರುತ್ತದೆ. ಅದಕ್ಕೆ ಶ್ಲೋಕಾಧಾರವೇ ಇದೆ. ಅದಂತಿರಲಿ. ಈ ಮನೆದೈವದ ಮನಸ್ಸಂತೋಷವಿಲ್ಲ. ಅದಕ್ಕೆ ಹೇಳಿದ ಹರಕೆ ಸಲ್ಲಿಸಲಿಲ್ಲ. ಅಲ್ಲದೆ ಅದರ ಸ್ಥಳವೇ ಅಶುದ್ಧವಾಗಿದೆ.

ತುಂಗಮ್ಮ—ಹೌದು ತಂತ್ರಿಗಳೇ, ಹೌದು. ನೀವು ಹೇಳಿದುದರಲ್ಲಿ ಒಂದು ಅಕ್ಷರವೂ ಸುಳ್ಳು ಇಲ್ಲ. ನಾನು ಹರಕೆ ಹೇಳಿಕೊಂಡಂತೆ ಕೋಲಮಾಡಿಸಲಿಲ್ಲ. ನನ್ನ ಸೊಸೆಯಿದ್ದಾಳಲ್ಲ, ಅವಳು ಇಂಗ್ಲಿಷ್ ಕಲಿತವಳಂತೆ, ಮುಟ್ಟುಗಿಟ್ಟಾದರೂ ಅವಳಿಗೆ ಅದರ ಗಣ್ಯವಿಲ್ಲ. ಅಡಿಗೆ ಮನೆಯುಂತಿಲ್ಲ, ಭೂತದ ಗುಡಿಯುಂತಿಲ್ಲ; ಎಲ್ಲಿವರೆಗೂ ಹೋಗುವುದೇ! ಈ ಕರ್ಮ ಅನುಭವಿಸಲಿಕ್ಕೆ ನನ್ನ ಮಗುವಿಗೆ ಬಂದದೆ.

ತಂತ್ರಿ—ಪರಹೆಂಗುಸೊಬ್ಬಳಿಂದ ಈ ಮನೆಗೆ ಬಹಳ ಹಾನಿಯುಂಟಾಗುವಂತೆ ತೋರುತ್ತದೆ.

ತುಂಗಮ್ಮ—ಇನ್ನು ಉಂಟಾಗುವುದೇನು? ಆಗಿವೆಯಲ್ಲ ಈಗಲೇ!

ತಂತ್ರಿ—ಇನ್ನು ಆ ಮಗುವಿಗೊಂದು ಕಠಿಣ ಕಂಟಕವುಂಟು. ಅದರ ಪರಿಹಾರಾರ್ಥವಾಗಿ ಚಂಡಿಕಾಹೋಮ ಮಾಡಿಸಬೇಕು. ಆಗ ಮಗುವಿನ ಜೀವಕ್ಕೇನೂ ಅಪಾಯ ಬರಲಿಕ್ಕಿಲ್ಲ, ನಾನಿದ್ದೇನೆ.

ತುಂಗಮ್ಮ—ಆಯಿತು ತಂತ್ರಿಗಳೆ, ನೀವೇ ಹೋಮ ಮಾಡಿ. ಕುಟುಂಬಕ್ಕೆ ಒಂದೇ ಒಂದಾಗಿರುವ ಮಗುವೊಂದು ಹೇಗಾದರೂ ಬದುಕಲಿ. ಎಷ್ಟು ವೆಚ್ಚವಾದರೂ ಚಿಂತೆ ಇಲ್ಲ.

ಮನೋರಮೆ—ಹೌದು ತಂತ್ರಿಗಳೆ! ಹೇಗಾದರೂ ಮಾಡಿ ನನ್ನ ಮಗುವನ್ನೊಮ್ಮೆ ಉಳಿಸಿರಿ.

ತಂತ್ರಿ—ಅದಕ್ಕೇನೂ ಹೆದರಿಕೆ ಬೇಡ. ನಾನಿದ್ದೇನೆ.

ಮನೋಹರ—ತಂತ್ರಿಗಳೇ, ನನ್ನದೊಂದು ಪ್ರಶ್ನೆಯುಂಟು. ಆ ಕುರಿತು ನಿಮ್ಮ ನಿಮಿತ್ತ ನಿಜವಾದರೆ ನಾನು ನಿಮಗೆ ಹತ್ತು ರೂಪಾಯಿ ಕೊಡುವುದು; ಸುಳ್ಳಾದರೆ ನೀವು ಐದು ರೂಪಾಯಿ ಕೊಡುವಿರಾ?

ತಂತ್ರಿ—ನನಗೆ ಆ ಪಂಥಗಿಂಥ ಅಗತ್ಯವಿಲ್ಲ. ನನಗೆ ತೋರಿದ ಹಾಗೆ ನಾನು ಹೇಳುತ್ತೇನೆ. ಸುಳ್ಳಾಗಲಿ ಸತ್ಯವಾಗಲಿ ಮೊದಲು ಒಂದು ರೂಪಾಯಿ ಕೊಟ್ಟದ್ದು ಹಿಂದೆ ಸಿಗಲಾರದು.

ಮನೋಹರ—ಆಯಿತು. ಇಗೊಳ್ಳಿ, ಒಂದು ರೂಪಾಯಿ ತೆಗೆದುಕೊಳ್ಳಿ. ನಮ್ಮ ಮನೆಯುಲ್ಲೊಂದು ಸಾಮಾನು ಹೋಗಿದೆ.

ತಂತ್ರಿ— (ಕವಡಿ ಮುಗುಚಿ ಬಹಳ ಹೊತ್ತು ಗುಣಿಸಿ) ಹೌದು, ನಿಮ್ಮ ಮನೆಯಿಂದ ಹೋದುದು ಒಬ್ಬ ಹೆಂಗುಸಿನ ಆಭರಣ.

ಮನೋಹರ—ನಿಜ, ಆಭರಣ. ನಿಮಗೆ ಹೇಗೆ ತಿಳಿಯಿತು ಸ್ವಾಮಿ?

ತಂತ್ರಿ—ಹೇಗೆ ತಿಳಿಯಿತು ಅಂದರೆ? ಮತ್ತೆ ನಾನಿಲ್ಲಿ ಕವಡಿ ಹಿಡಿದು ಗುಣಿಸುವುದೇಕೆ?

ಮನೋಹರ - ಆಗಲಿ, ಅದು ಯಾರಿಗೆ ಸಿಕ್ಕಿದೆ?

ತಂತ್ರಿ—(ಪುನಃ ಕವಡಿ ಮುಗುಚಿ) ಅದನ್ನು ಮನೆಯೊಳಗಿನ ಒಂದು ಪ್ರಾಣಿಯೇ ತೆಗೆದಿರುತ್ತದೆ.

ಮನೋಹರ—ಪ್ರಾಣಿಯೆಂದರೆ ಎಮ್ಮೆಯೋ, ಕೋಣನೋ? ಸ್ಪಷ್ಟ ಹೇಳಿಬಿಡಿ ತಂತ್ರಿಗಳೇ!

ತಂತ್ರಿ—ಸ್ಪಷ್ಟ ಹೇಳಬೇಕೆ? (ಪುನಃ ಕವಡಿ ಮುಗುಚಿ) ತೆಗೆದುದು ಹೆಂಗುಸೆಂತ ತೋರುತ್ತದೆ. ಬಹುಶಃ ಹೆಂಗುಸೇ ಆಗಿರಬೇಕು. (ಮನೋಹರನ ಮುಖ ನೋಡಿ) ಹೌದು, ನಿಶ್ಚಯ; ಹೆಂಗುಸು.

ಮನೋಹರ—ಈಗ ಅದೆಲ್ಲಿದೆ?

ತಂತ್ರಿ—(ಪುನಃ ಕವಡಿ ಗುಣಿಸಿ) ಈಗ ಅದು ಹೆಂಗುಸಿನಿಂದ ಬೇರೆ ಕೈಸೇರಿದೆ.

ಮನೋಹರ—ಅದು ಸಿಕ್ಕೀತೋ ಹೇಗೆ?

ತಂತ್ರಿ—ಸಂಶಯ. ಪ್ರಯತ್ನಮಾಡಿದರೆ ಸಿಗಲೂ ಬಹುದು. ಆದರೆ ಅದು ಕೈಯಿಂದ ಕೈಗೆ ಹೋಗಿಬಿಟ್ಟದೆ. ಸಿಕ್ಕುವುದು ಬಹಳ ಕಷ್ಟ. (ಮನೋಹರನು ಗಹಗಹಿಸಿ ನಗುವುದನ್ನು ನೋಡಿ, ಸಿಟ್ಟಾಗಿ) ಏನು ಸುಳ್ಳೇ?

ಮನೋಹರ—ಎಲ್ಲಾ ಸುಳ್ಳು.

ತಂತ್ರಿ—(ಸಿಟ್ಟಿನಿಂದ ಎದ್ದು) ನೋಡಿ! ಹೊತ್ತು ನೋಡಿ! ಹದಿನೈದು ಗಳಿಗೆ ದಾಟಿತು. ವಿಷಗಳಿಗೆ ಬಂದುಹೋಯಿತು. ಮತ್ತೆ ಸುಳ್ಳಾಗದಿರುವುದು ಹೇಗೆ?

ಮನೋಹರ—ತಂತ್ರಿಗಳೇ, ನೀವು ಒಳ್ಳೆಯ ತಂತ್ರಗಾರರು. ಆದರೆ ಇಲ್ಲಿ ನಿಮ್ಮ ತಂತ್ರ ನಡೆಯಲಿಲ್ಲ. ನಾನು ಕೇಳಿದ ಪ್ರಶ್ನೆಯೇ ಸುಳ್ಳು. ನನ್ನ ಮನೆಯಲ್ಲಿ ಏನೂ ಹೋಗಲಿಲ್ಲ. ನಿಮ್ಮನ್ನು ಪರೀಕ್ಷಿಸಲೆಂದೇ ಕೇಳಿದೆ. ನೀವು 'ನಾಪಾಸಾಗಿ' ಬಿಟ್ಟಿರಿ!

ತಂತ್ರಿ—ರಾಮ ರಾಮ! ಈ ಇಂಗ್ಲಿಷ್ ಕಲಿತವರಿಂದ ಆಗುವುದಿಲ್ಲಪ್ಪ! ನಾನು ತಪ್ಪಿಬೀಳುತ್ತಿದ್ದಿಲ್ಲ; ವಿಷಗಳಿಗೆ ಬಂದುಹೋಯಿತು. ಏನು ಮಾಡುವುದು! ತುಂಗಮ್ಮನಿಗೆ ಹೇಳಿದ ಪ್ರಶ್ನೆಯು ಸತ್ಯವಲ್ಲವೇ? ಅದಲ್ಲದೆ ನಾನು ದಿವಸಕ್ಕೆ ನೋಡುವುದು ಒಂದೇ ಪ್ರಶ್ನೆ.

ತುಂಗಮ್ಮ—ನಮಗೆ ಹೇಳಿದ್ದು ಎಲ್ಲಾ ಸಮ ತಂತ್ರಿಗಳೇ! ಅವರು ಇಂಗ್ಲಿಷ್ ಕಲಿತವರು. ಏನೂ ಹೇಳುತ್ತಾರೆ; ಏನೂ ಮಾಡುತ್ತಾರೆ!

ಮನೋಹರ—ತಂತ್ರಿಗಳೇ, ನಿಮ್ಮ ಈ ತಂತ್ರ ಇನ್ನು ಹೆಚ್ಚು ಸಮಯ ನಡೆಯದು. ನೀವು ಬೇಗನೆ ಈ ವೃತ್ತಿಯನ್ನು ಬಿಟ್ಟು ಬೇರೇನಾದರೂ ವೃತ್ತಿ ಕೈಕೊಳ್ಳುವುದೇ ಲೇಸು. (ಹೋಗುವನು. ಅವನ ಹಿಂದೆಯೇ ತಾರಾನಾಥ ಇಂದಿರೆಯರೂ ಹೋಗುವರು)

ತಂತ್ರಿ—ಅವನು ಯಾರಪ್ಪ! ವಿಚಿತ್ರ ಪ್ರಾಣಿ! ಈ ಹುಡುಗರಿಗೆಲ್ಲಾ ಯಾವಾಗ ಆ ಇಂಗ್ಲಿಷ್ ವಿದ್ಯೆ ಕಲಿಸತೊಡಗಿದೆವೋ ಆಗಲೆ ನಮ್ಮ ಧರ್ಮ ಕೆಟ್ಟಿದೆ. ನಮ್ಮ ನೀತಿಧರ್ಮ, ವೇದಶಾಸ್ತ್ರವೆಂದರೆ ಅವರಿಗೆ ತಿರಸ್ಕಾರ! ಅದಕ್ಕಾಗಿಯೇ ನಾನು ನನ್ನ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳುಹಿಸದಿದ್ದುದು.

ತುಂಗಮ್ಮ—ಹೌದು ತಂತ್ರಿಗಳೇ, ಹೌದು! ನಾವು ಒಬ್ಬನಿಗೆ ಕಲಿಸಿದ್ದು ಸಾಕು. ಒಂದು ಕಾಸಿನ ಪ್ರಯೋಜನವೂ ಇಲ್ಲದೆ ಎರಡು ಮೂರು ಸಾವಿರ ರೂಪಾಯಿ ಖರ್ಚುಮಾಡಿದೆವು. ಈಗ ಅವನಿಗೆ ದೇವರೆಂದಿಲ್ಲ, ಹಿರಿಯರೆಂದಿಲ್ಲ! ತಾನಾಯಿತು; ತನ್ನ ಹೆಂಡತಿಯಾಯಿತು! ಬೇರೆ ಯಾರೂ ಇಲ್ಲ!

ತಂತ್ರಿ—ಆಯಿತು. ಈಗ ಹೋಗುತ್ತೇನೆ. ಚಂಡಿಕಾಹೋಮಕ್ಕೆ ಸಾಹಿತ್ಯದ ಪಟ್ಟಿಯನ್ನು ಮಾಡಿಕೊಂಡು ನಾಡದು ಬರುತ್ತೇನೆ. ಎಲ್ಲಾ ಚುಟುಕಿನಿಂದ ಮಾಡಿ ತೀರಿಸುವ.

ಸಂಜೀವ—ಖರ್ಚಿಗೆ ಎಷ್ಟು ಬೇಕಾದೀತು ಸ್ವಾಮಿ?

ತಂತ್ರಿ—ಚಂಡಿಕಾ ಹೋಮವಲ್ಲವೇ? ದಕ್ಷಿಣೆ ಮುಖ್ಯ; ಹೆಚ್ಚೆಂದರೆ ೩೦೦—೪೦೦ ರೂಪಾಯಿ ಬೇಕಾದೀತು; ಅಷ್ಟೆ. ಅದಕ್ಕೆಲ್ಲಾ ನಾನು ಪಟ್ಟಿಮಾಡುತ್ತೇನೆ. ಪಟ್ಟಿ ಪ್ರಕಾರ ಎಲ್ಲಾ ಸಾಹಿತ್ಯ ಮಾಡಿದರೆ ಸರಿ.

ತುಂಗಮ್ಮ—ಆಯಿತು. ತಂತ್ರಿಗಳೇ, ಬಹಳ ಉಪಕಾರವಾಯಿತು.

ತಂತ್ರಿ—ಮನೆಯಲ್ಲಿ ಪದಾರ್ಥಕ್ಕೆ ತೆಂಗಿನಕಾಯಿ ಇಲ್ಲವೆಂತ ಅವಳು ಹೇಳುತ್ತಿದ್ದಳು. ಅಂಗಡಿಯಿಂದ ತರಿಸಿದಳೋ ಏನೋ.

ತುಂಗಮ್ಮ—ಏಕೆ ಅಂಗಡಿಯಿಂದ ತರಿಸುವುದು? ಪಾಪ! ನಾನು ಕೊಡುತ್ತೇನೆ. ನಾಲ್ಕು ಕಾಯಿ ಕೊಡುವುದು ದೊಡ್ಡದೇ?

ತಂತ್ರಿ—ಹಾಗಾದರೆ ನಾಲ್ಕು ಕಾಯಿ, ಅದರೊಂದಿಗೆ ಸೌತೆಕಾಯಿ

ಏನಾದರೂ ಇದ್ದರೆ, ಕಡೆಗೆ ನಿಮ್ಮ ಕೆಲಸದವನ ಹತ್ತಿರ ಮನೆಗೆ ಕಳು ಹಿಸಿಬಿಡು. ನನಗೆ ಇನ್ನೊಂದು ಕಡೆಗೆ ಹೋಗಬೇಕಾಗಿದೆ.(ಹೋಗುವನು)

೧೪ನೇ ದೃಶ್ಯ

[ಮನೆ ದೈವದ ಕೋಲನಾಡಿಸುವ ಸಂಬಂಧವಾಗಿ ತುಂಗಮ್ಮನು ಸಂಜೀವನನ್ನು ಮನೆಗೆ ಕರೆಯಿಸಿ ಕಳುಹಿಸುವಳು. ಹೇಗಾದರೂ ಅತ್ತೆಯನ್ನು ಒಲಿಸಿಕೊಂಡು ಹಣ ಪಡೆಯಲು ಸಂದರ್ಭಕಾಯುತ್ತಿದ್ದ ಸಂಜೀವನು ಕೂಡಲೆ ಅತ್ತೆ ಮನೆಗೆ ಹೊರಟು ದಾರಿಯಲ್ಲಿ ನಾನಾ ದುರಾಲೋಚನೆಗಳನ್ನು ಮಾಡುವನು.]

ಸಂಜೀವ--(ಸ್ವಗತ) ಅತ್ತೆಗೂ ಈಗೀಗ ನನ್ನ ಕುರಿತು ಸಂದೇಹ ವುಂಟಾದಂತಿದೆ. ಯಾರೋಧೂರ್ತರು ಅವರಮನಸ್ಸನ್ನೂ ಕೆಡಿಸಿರುವರು. ಆದ್ದರಿಂದ ಅವರೀಗ ಕೈ ಬಿಗಿಹಿಡಿದಿದ್ದಾರೆ. ಇದರಿಂದ ನನ್ನ ಕೈ ಕಟ್ಟಿ ಹೋಗಿದೆ. ನಾನು ನಾನಾ ನೆವನ ಹೇಳಿ ನನ್ನ ವಾಸ್ತವಿಕ ಸ್ಥಿತಿಗತಿ ಯನ್ನು ಅವರ ಕಣ್ಣಿಂದ ಮರೆಮಾಜಲು ಮಾಡಿದ ವಂಚನೆಯು ಬಯಲಾಗ ಹತ್ತಿದೆ. ಏನಾದರೂ ಮಾಡಿ ಅವರನ್ನು ಸಂಪೂರ್ಣ ನನ್ನಾಧೀನ ಪಡಿಸಿಕೊಳ್ಳದಿದ್ದರೆ ನನ್ನ ಮರ್ಯಾದೆ ಉಳಿವ ಬಗೆ ತೋರುವುದಿಲ್ಲ. ಆದರೆ ಹೇಗೆ ಒಲಿಸಿಕೊಳ್ಳಲಿ? (ಯೋಚಿಸಿ) ಸರಿ, ಅವರಿಗೂ ಇಂದಿರೆಗೂ ಈಗ ಬದ್ಧ ದ್ವೇಷವುಂಟಾಗಿರುವುದು. ಆದರೆ.... (ಪುನಃ ಯೋಚಿಸಿ) ಆದರೆ ತಾರಾನಾಥನು ಸಂಪೂರ್ಣ ಇಂದಿರೆಯ ಪಕ್ಷ ಹಿಡಿದಿರುವುದರಿಂದ ಇಂದಿರೆಯು ಏನು ಮಾಡಿದರೂ ಅವರು ಸಹಿಸಿ ಕೊಂಡಿರಬೇಕಾಗಿದೆ. ಆದುದರಿಂದ ಇಂದಿರೆಯ ಕುರಿತು ತಾರಾನಾಥನ ಮನಸ್ಸನ್ನೇ ಕೆಡಿಸಲೆತ್ನಿಸಬೇಕು. ಅವಳಿಗೂ, ಅವಳೊಡನೆ ಬಲು ಸಲುಗೆಯಿಂದಿರುವ ಮನೋಹರನಿಗೂ ಪ್ರೇಮವಿರುವುದೆಂಬುದನ್ನು ರುಜುಪಡಿಸುವ ತಂತ್ರಹೂಡಿ, ಇಂದಿರೆಯನ್ನು ತಾರಾನಾಥನು ಮನೆ ಯಿಂದ ಹೊರಡಿಸುವಂತೆ ಮಾಡಿದರೆ ಮತ್ತೆ ನಾನೇ ಅತ್ತೆಯ ಪಾಲಿನ ದೈವವಾಗುವೆನಲ್ಲವೆ? ಆಗ ಅತ್ತೆಯಿಂದ ನನಗೆ ಬೇಕಾದಷ್ಟು ಹಣ ಪಡೆಯಲನುಕೂಲವಾಗುವುದಿಲ್ಲವೆ? (ತೆರಳುವನು).

೧೫ನೇ ದೃಶ್ಯ

[ಕೋಣೆಯಲ್ಲಿ ತುಂಗಮ್ಮ, ಮನೋರಮೆ ಮತ್ತು ಸಂಜೀವ ಇವರು ಕುಳಿತು ಮಾತನಾಡುತ್ತಿರುವರು.]

ತುಂಗಮ್ಮ—ಸಂಜೀವ, ಕೋಲದ ಕೆಲಸಗಳನ್ನೆಲ್ಲಾ ನೀನೇ ಮಾಡಿಸಬೇಕು. ತಾರಾನಾಥನನ್ನು ನಂಬಿಕೊಂಡಿದ್ದರಾಗದು. ಅವನ ಸಂಗತಿ ನಿನಗೆ ತಿಳಿಯಿತಲ್ಲ. ತಂತ್ರಿಗಳಿಗೆ ಕೊಡಲು ಒಂದು ರೂಪಾಯಿ ಕೂಡ ಅವನ ಕೈಯ್ಯಲ್ಲಿಲ್ಲವಂತೆ! ಹೆಂಡತಿಗೆ ಸೀರೆ, ಕುಪ್ಪಸ, ಚಿನ್ನ ಮಾಡಿಸಲಿಕ್ಕಾದರೆ ಅವನಲ್ಲಿ ಬೇಕಾದಷ್ಟು ಹಣವಿದೆ! ಸಂಜೀವ, ನೀನಿದನ್ನು ನಂಬಲಿಕ್ಕಿಲ್ಲ. ಬರೇ ಸಾಬೂನಿಗಾಗಿ ಅವಳಿಗೆ ತಿಂಗಳಿಗೆ ಒಂದೆರಡು ರೂಪಾಯಿ ಬೇಕಾಗುತ್ತದೆ ನೋಡು!

ಸಂಜೀವ - ಕೋಲದ ವಿಷಯದಲ್ಲಿ ನಿಮಗೆ ಯಾವ ಭಯವೂ ಬೇಡ. ಎಲ್ಲಾ ನಾನು ಮಾಡಿಸುತ್ತೇನೆ. ತಾರಾನಾಥನು ನನ್ನ ಮನೆಗೆ ಬಂದವನು ಸಿಕ್ಕಿದವರ ಮಾತು ಕೇಳಿ ನನಗೇನೇ ಬುದ್ಧಿ ಹೇಳಲಿಕ್ಕೆ ಹೊರಟಿದ್ದಾನೆ! ಅವನಿಂದ ಕಾಸಿನ ಕೆಲಸವಾಗುವುದಿಲ್ಲವಾದರೂ ಪರೋಪದೇಶ ಪಾಂಡಿತ್ಯಕ್ಕೆ ಏನೂ ಕಡಿಮೆಯಿಲ್ಲ!

ಮನೋರಮೆ—ಇದಕ್ಕೆ ಅವನು ಕಾರಣನಲ್ಲ; ಅವನ ಹೆಂಡತಿ. ಅವಳೊಬ್ಬಳು ರಾಣಿ! ತನಗಿಂತ ಮೇಲೆ ಯಾರೂ ಇಲ್ಲವೆಂದು ಭಾವಿಸಿಕೊಂಡಿದ್ದಾಳೆ! ಅವಳ ಮಾತೇನು! ‘ಮರ್ಜಿ’ಯೇನು!

ತುಂಗಮ್ಮ-‘ಮರ್ಜಿ’ಯೆಲ್ಲಾ ‘ಮಡ್ಡಮ’ರದೆ. ಅವಳಿಂದಲೇ ನನ್ನ ಮಗ ಕೆಟ್ಟುಹೋದುದು. ಅವಳು ಬರುವ ಮೊದಲು ನನ್ನ ಮಾತನ್ನು ಕಡ್ಡಿ ಮೀರದ ಅವನಿಗೆ ಈಗ ನಾನೆಂದರೆ ಒಂದು ಸಣ್ಣ ಕಡ್ಡಿ! ಅವಳನ್ನು ಹೇಗಾದರೂ ಹೊರಡಿಸದಿದ್ದರೆ ತಂತ್ರಿಗಳು ಹೇಳಿದ ಹಾಗೆ ನಮ್ಮ ಮನೆ ಒಳ್ಳೇದಾಗದು. ನಮಗೆ ರೋಗ ತಪ್ಪದು. ನನ್ನ ಮಗನ ಬುದ್ಧಿ ಸರಿ ನಿಲ್ಲದು. ಏನಾದರೊಂದು ಉಪಾಯಮಾಡಿ, ಆ ಮಾರಿಯನ್ನೊಮ್ಮೆ ಮನೆಯಿಂದ ಹೊರಡಿಸು. ಸಾಕುಸಾಕಾಯಿತು ನನಗವಳ ಕಾಟ! ನಾನು ಇದ್ದೂ ಸತ್ತ ಹಾಗೆ ಈ ಮನೆಯಲ್ಲಿ.

ಮನೋರಮೆ—ಅವಳದೇ ಸಂಭ್ರಮ ಅವಳಿಗೆ! ನಾನು ಎಲ್ಲಿಯಾದರೂ ಅಪರೂಪದಲ್ಲಿ ಒಮ್ಮೆ ಬಂದರೆ ನನ್ನನ್ನು ಗಣಿಸಲಿಕ್ಕಿಲ್ಲ. ಯಾವಾಗಲೂ ಇರುವುದು ಉಪ್ಪರಿಗೆಯಲ್ಲಿ. ಯಾರು ಇದ್ದಾರೆಂದಿಲ್ಲ, ಇಲ್ಲವೆಂದಿಲ್ಲ; ಇಡೀ ದಿವಸ ಅಣ್ಣನೊಡನೆ, ಆ ಮನೋಹರನೊಡನೆ ಮಾತನಾಡುತ್ತಿರುವುದು.

ಸಂಜೀವ ಇಂದಿರೆಯನ್ನು ಮನೆಯಿಂದ ಹೊರಡಿಸುವುದೊಂದು ದೊಡ್ಡ ಕೆಲಸವಲ್ಲ. ನೀವು ಮಾತ್ರ ನಾನು ಹೇಳಿದ ಹಾಗೆ ಕೇಳಬೇಕು.

ತುಂಗಮ್ಮ ನೀನು ಹೇಳಿದ ಹಾಗೆ ಕೇಳದಿದ್ದರೆ ಮತ್ತಾರು ಹೇಳಿದ ಹಾಗೆ ಕೇಳುವುದು? ನೀನೊಬ್ಬನಲ್ಲದಿರುತಿದ್ದರೆ ನಮ್ಮ ಗತಿಯೇನಾಗುತಿತ್ತೋ! ತಾರಾನಾಥನ ಮಾತಿನಂತೆ ಮನೋರಮೆಯನ್ನು ಮನೋಹರನಿಗೆ ಮದುವೆಮಾಡಿಬಿಡುತ್ತಿದ್ದರೆ ಎಲ್ಲವೂ ಅವನ ಇಚ್ಛೆಯಂತೆಯೇ ನಡೆಯುತ್ತಿದ್ದಿತು ಈಗ ನೀನಾದರೊಬ್ಬ ತಡೆಯಾಗಿರುವಿ.

ಸಂಜೀವ—ನಿಮಗೆ ಮನಸ್ಸಿದ್ದರೆ ಅವನನ್ನು ಒಂದು ಕ್ಷಣದಲ್ಲಿ 'ದೇಹಿ ದೇಹಿ' ಎನ್ನಿಸಬಹುದು. ಪಟ್ಟಿ ಇರುವುದು ನಿಮ್ಮ ಹೆಸರಲ್ಲಿ ಅಲ್ಲವೆ? ಅವನಿಗೆ ಏನು ಅಧಿಕಾರವುಂಟು? ನೀವು ಹೇಳಿದಂತೆ ಕೇಳಬೇಕು ಅವ.

ತುಂಗಮ್ಮ - ಅವನೇನೂ ಕೆಟ್ಟವನಲ್ಲ. ಎಲ್ಲಕ್ಕೂ ಕಾರಣ ಅವನ ಹೆಂಡತಿ ಆ ತಾಟಕಿ.

ಸಂಜೀವ – ತಾರಾನಾಥನು ಇಂದಿರೆಯನ್ನು ಬಿಟ್ಟ ಮೇಲೆ ಅವನಿಗೆ ಎರಡನೆ ಮದುವೆಯಾಗಬೇಕು. ಐದು ಸಾವಿರ ರೂಪಾಯಿ ವರದಕ್ಷಿಣೆ ಸಮೇತ ಹುಡುಗಿ ಕೊಡಿಸುವುದು ನನಗೆ ಸಂದಿತು.

ತುಂಗಮ್ಮ—ಆಯಿತು, ಒಮ್ಮೆ ಈ ಮಾರಿಯನ್ನು ಮನೆಯಿಂದ ಹೊರಡಿಸು. ಮತ್ತೆ ನೀನು ಹೇಳಿದ ಹಾಗೆ ಮಾಡುವ.

ಸಂಜೀವ ಇಂದಿರೆಯನ್ನು ತಾರಾನಾಥನು ಬಿಡುವಂತೆ ಮಾಡುವುದು ನನಗೆ ಸಂದಿತು. ಈ ಭಾಗದಲ್ಲಿ ನಿನಗೆ ಸಂದೇಹವೇ ಬೇಡ. ಆದರೆ ನಾನು ಹೇಳಿದ ಹಾಗೆ ಕೇಳಬೇಕು.

ಮನೋರಮೆ—ಆಯ್ತು ಅದನ್ನೇ ಎಷ್ಟು ಬಾರಿ ಹೇಳುವುದು? ಕಾಫಿಯಾಯಿತೆಂತ ಕಾಣುತ್ತದೆ. ಹೋಗುವ. (ಹೋಗುವರು)

೧೬ನೇ ದೃಶ್ಯ

[ತಾರಾನಾಥ, ಮನೋಹರ, ಇಂದಿರೆ ಇವರು ಕದ್ರಿಗೆ ತಿರುಗಾಡ ಹೋದವರು ದಾರಿಯಲ್ಲಿ ಮಾತನಾಡುತ್ತ ಬರುತ್ತಿರುವರು.]

ಇಂದಿರೆ--ಪ್ರಕೃತಿ ಸೌಂದರ್ಯದಿಂದೆಸವ ಈ ಕದ್ರಿ ಬೆಟ್ಟವನ್ನಗಲಿ ಹೋಗಲು ನನ್ನ ಕಾಲೇ ಬಾರದು. ಅಣ್ಣಾ! ನೋಡು; ಸಂಧ್ಯಾರಾಗವು ಎಷ್ಟು ಮನೋಹರವಾಗಿದೆ? ನಾವು ಇನ್ನೂ ಸ್ವಲ್ಪ ಹೊತ್ತು ಇಲ್ಲೇ ಸಮೀಪದಲ್ಲಿ ವಿರಮಿಸಬಾರದೇಕೆ?

ಮನೋಹರ—ಮಂದಮಾರುತವೂ ಬಹು ಶೀತಳವಾಗಿ ಬೀಸುತ್ತಿದೆ. ಇಷ್ಟು ಬೇಗ ಮನೆಗೆ ಹೋಗಿ ಮಾಡುವುದೇನು ತಾರಾನಾಥ? ಕೊಂಚ ಹೊತ್ತು ವಿಶ್ರಮಿಸುವ.

ತಾರಾನಾಥ - ಮಿತ್ರ, ನನಗೇಕೋ ಇಂದಿರೆಯೊಂದಿಗೆ ಹೀಗೆ ತಿರುಗಾಡ ಹೋಗುವುದೆಂದರೆ ಈಗೀಗ ಉತ್ಸಾಹವಿಲ್ಲ. ಮನೆಯಲ್ಲಿ ಏನೇನೋ ಹೇಳುತ್ತಾರೆ.

ಮನೋಹರ—ನೀನೊಬ್ಬ! ಯಾವಾಗಲೂ ಮನೆಯವರು ಹಾಗೆ ಹೇಳುತ್ತಾರೆ; ಊರವರು ಹೀಗೆ ಹೇಳುತ್ತಾರೆ ಎನ್ನುತ್ತಿರುವೆ. ನಾವು ಮನೆಯವರಿಗಾಗಿ ಅಥವಾ ಊರವರಿಗಾಗಿ ಮದುವೆಮಾಡಿಕೊಂಡಿರುವುದೋ? ನಮ್ಮ ಸುಖಕ್ಕಾಗಿಯೋ? ನಮ್ಮ ಹೆಂಡಿರೊಡನೆಯೂ ನಮಗೆ ಬೇಕಾದಂತೆ ತಿರುಗಾಡುವ ಸ್ವಾತಂತ್ರ್ಯವಿಲ್ಲವೆ?

ಇಂದಿರೆ—ಹೌದು, ಸ್ವಾತಂತ್ರ್ಯ! ಅದೆಲ್ಲಾ ದೊಡ್ಡ 'ಲೆಕ್ಚರು' ಕೊಡಲಿಕ್ಕೆ, ಲೇಖನ ಬರಿಯಲಿಕ್ಕೆ!

ಮನೋಹರ—ಹೌದು, ತಾರಾನಾಥ! ಆ ಚಂಡಿಕಾ ಹೋಮ, ಕೋಲಗಳನ್ನೆಲ್ಲಾ ಮಾಡಿಸಲಿಕ್ಕೆ ಬಿಟ್ಟೆಯಲ್ಲ, ಯಾಕೆ? ಸ್ವಲ್ಪ ನಿರ್ಧಾರದಿಂದ ನಿರ್ದಾಕ್ಷಿಣ್ಯವಾಗಿ ವರ್ತಿಸದಿದ್ದರೆ ಯಾವ ಕಾರ್ಯವೂ ಸಾಧ್ಯವಾಗದು.

ತಾರಾನಾಥ—ನಾನೇನು ಮಾಡಲಿ? ನಾನು ಬೇಡ ಬೇಡವೆಂದರೂ ಕೆಲಸವೆಲ್ಲಾ ನಡೆದೇ ಹೋಗುತ್ತದೆ. ಸಂಜೀವನು ನನ್ನನ್ನು ಲಕ್ಷಿಸದೆ

ಎಲ್ಲವನ್ನೂ ಮಾಡಿಸಿ ಬಿಡುತ್ತಾನೆ. ಅವನು ಎಷ್ಟೆಷ್ಟು ಪೂಜೆಪುರಸ್ಕಾರಗಳನ್ನು ಮಾಡಿಸುತ್ತಾ ಬರುತ್ತಾನೋ ಅಷ್ಟಷ್ಟು ದುಷ್ಕೃತ್ಯಗಳನ್ನೂ ಹೆಚ್ಚಿಸುತ್ತಾನೆ. ಯಾವ ಕೃತ್ಯಮಾಡಿದರೂ ಚಿಂತೆ ಇಲ್ಲವಂತೆ! ಪುಣ್ಯವೊಂದು ಸಂಪಾದಿಸಿದರೆ ಸರಿಯಂತೆ!

ಮನೋಹರ—ಈ ಪುಣ್ಯ ಸಂಪಾದನೆಯ ಅರ್ಥವೇನೋ ತಿಳಿಯದು! ಈ ಜಡಮೂಢ ಮನೋವೃತ್ತಿಯ ಘನರೋಗ ಕೀಟವೇ ನಮ್ಮ ಸಮಾಜದ ಹೃದಯವನ್ನು ತಿನ್ನುತ್ತಿರುವುದು! ನಮ್ಮ ಜನರು ಕಣ್ಮುಚ್ಚಿಕೊಂಡು ಹಿಂದಿನ ಆಚಾರವಿಚಾರಗಳಿಗೆ ಇನ್ನೂ ಕಟ್ಟುಬಿದ್ದು, ಗಾಣದೆತ್ತಿನಂತೆ ಸುತ್ತುತ್ತಿರುವರು.

ತಾರಾನಾಥ—ನೀನು ಹೇಳಿದ ಮಾತು ಅಕ್ಷರಶಃ ನಿಜ. ಪ್ರತ್ಯಕ್ಷ ಪ್ರಮಾಣಕ್ಕಿಂತಲೂ ಶಬ್ದಪ್ರಮಾಣಕ್ಕೆ ನಮ್ಮ ಜನರು ಲಕ್ಷ್ಯಕೊಡುವುದೇ ಹೆಚ್ಚು. ತಮ್ಮ ಪ್ರತ್ಯಕ್ಷ ಅನುಭವವನ್ನಾದರೂ ಅಲ್ಲಗಳೆಯುವರೇ ಹೊರತು ವೇದಶಾಸ್ತ್ರಗಳಲ್ಲಿ ಹೇಳಿದುದು ಸುಳ್ಳೆಂದು ನಂಬರು. ಪೂರ್ವದ ಆಚಾರವಿಚಾರಗಳೆಂಬ ಪ್ರೇತಬಾಧೆಯಿಂದ ನಮ್ಮ ಸಮಾಜವು ದಿನೇ ದಿನೇ ಅಧಃಪತನ ಹೊಂದುತ್ತಿರುವುದು ಇರಲಿ, ಮನೋಹರ, ಈಗ ಕತ್ತಲಾಗುತ್ತ ಬಂತು, ತಿಂಗಳ ಬೆಳಕು ಸಹ ಇಲ್ಲ. ಇಷ್ಟರವರೆಗೆ ತಿರುಗಾಡಿದುದೇ ಸಾಕು. ಹೋಗುವ.

(ಎಲ್ಲರೂ ಹೋಗುವರು.)

೧೭ನೇ ದೃಶ್ಯ

[ತುಂಗಮ್ಮನ ಮನೆ. ತಾರಾನಾಥನನ್ನು ಒಂದೆಡೆ ಕರೆದು ತುಂಗಮ್ಮನೂ, ಮನೋರಮೆಯೂ ರಹಸ್ಯವಾಗಿ ಮಾತಾಡುವರು.]

ತುಂಗಮ್ಮ—ನಿನ್ನ ಇಂದಿರೆಯು ನಿನಗೆ ಮಹಾಪತಿವ್ರತೆ! ಸೀತಾಸ್ವರೂಪೆ! ಆದರೆ............

ತಾರಾನಾಥ—ಆದರೇನು?

ಮನೋರಮೆ—ಆದರೆ ಏನು! ಕಲಿತ ಹುಡುಗಿಯರ ಕಥೆಯು ಅಷ್ಟಿಷ್ಟೆ?

ತಾರಾನಾಥ—ಏನು ಅಷ್ಟಷ್ಟೆ?

ಮನೋರಮೆ—ಅದನ್ನು ಹೇಳಿ ನಾವೇಕೆ ನಿಷ್ಠುರ ಮಾಡಿಕೊಳ್ಳ ಬೇಕು? ಇಂದಿರೆಯು ನಿನ್ನ ಪರಮಪ್ರಿಯೆ! ಮನೋಹರನು ನಿನ್ನ ಪರಮಾಪ್ತ! ಅಹಹ! ಎಲ್ಲಿ ಸಿಕ್ಕಿತೋ ನಿನಗೆ ಈ ಜತೆ! ಎಲ್ಲಕ್ಕೂ ಕಣ್ಮುಚ್ಚಿ ಕೊಂಡಿದ್ದರೆ ಏನೂ ಇಲ್ಲ!

ತಾರಾನಾಥ—ತಂಗೀ, ಸುಮ್ಮನೆ ಏನೇನೋ ಮನಸ್ಸಿನಲ್ಲಿಟ್ಟು ಕೊಂಡು ಸಿಕ್ಕಸಿಕ್ಕವರನ್ನು ದೂರಬೇಡ. ಇದ್ದುದನ್ನು ಇದ್ದ ಹಾಗೆ ಹೇಳು.

ತುಂಗಮ್ಮ—ನಾವು ಏನು ಹೇಳಿದರೂ ದೂರು ಎಂದಾಗುವುದು. ಅದರಲ್ಲಿ ನಿನಗೆ ವಿಶ್ವಾಸವುಂಟಾಗಲಾರದು.

ತಾರಾನಾಥ—ಸತ್ಯ ಸಂಗತಿ ಹೇಳಿದರೆ ಯಾರಿಗೂ ವಿಶ್ವಾಸ ವುಂಟಾಗುತ್ತದೆ.

ಮನೋರಮೆ – ಹಾಗಾದರೆ ಸತ್ಯ ಸಂಗತಿ ಹೇಳಲೆ?

ತಾರಾನಾಥ—ಅವಶ್ಯವಾಗಿ ಹೇಳಬೇಕು.

ಮನೋರಮೆ--ಇಂದಿರೆಗೂ ಮನೋಹರನಿಗೂ........

ತಾರಾನಾಥ—ಏನು? ಪೂರ್ಣ ಹೇಳು.

ಮನೋರಮೆ—ಅವರಿಗೆ ಸ್ನೇಹಾಚಾರವಿದೆಯಂತೆ!

ತಾರಾನಾಥ—ಯಾರು ಹೇಳುವುದು?

ಮನೋರಮೆ—ಹೇಳುವುದಾರು! ಊರಲ್ಲೆಲ್ಲಾ ಸುದ್ದಿ ಹಬ್ಬಿರು ವುದು. ನಿನ್ನ ಕೆಲಸದ ಹುಡುಗನನ್ನೇ ಕೇಳು. ಅವನಿಗೆ ಇಂದಿರೆ ಯೆಂದರೆ ಪ್ರಾಣ. ಅವನೇನೂ ಸುಳ್ಳು ಹೇಳಲಾರನಷ್ಟೆ.

ತಾರಾನಾಥ— ನೀವಿಬ್ಬರೂ ಹೊರಗೆ ಹೋಗಿ. ಅಮ್ಮಾ, ಆ ಹುಡುಗನನ್ನು ಇಲ್ಲಿಗೆ ಕಳುಹಿಸು. (ಮನೋರಮೆ, ತುಂಗಮ್ಮ ಹೋಗು ವರು. ತಾರಾನಾಥನು ಅತ್ಯಂತ ಖೇದಗೊಂಡು ತಲೆಗೆ ಕೈಹಿಡಿದು ಕುಳಿತುಕೊ ಳ್ಳುವನು. ಆಗ ಹೆದರಿ ಹೆದರಿಕೊಂಡು ಇಂದಿರೆಯ ಪ್ರೀತಿಯ ಸೇವಕನಾದ ಹುಡುಗ ಪ್ರಾಯದ ಸೋಮನು ಬರುವನು. ತಾರಾನಾಥನು ಅವನನ್ನು ಕಂಡೊ ಡನೆಯೇ ಜಗ್ಗನೆದ್ದು ದಿಟ್ಟಿಸಿ) ಸೋಮ, ಸತ್ಯಹೇಳು. ನಿನ್ನ ಮಾತನ್ನು

ನಂಬುವೆನು. ನಾನು ಸಂಜೀವನ ಮನೆಗೆ ಹೋಗಿದ್ದಾಗ ಇಲ್ಲಿ ನಡೆದ ಸಮಾಚಾರವನ್ನು ಹೇಳು. ಹೆದರಬೇಡ, ನಾನಿದ್ದೇನೆ.

ಸೋಮು—ಏನೂ ಇಲ್ಲ ಸ್ವಾಮಿ. ಅದು ಚಾಕರಿಯವನಾದ ನನಗೆ ಏಕೆ? ಕಡೆಗೆ ನೀವು ಎಲ್ಲಾ ಒಂದೇ.

ತಾರಾನಾಥ—ಇದ್ದುದನ್ನು ಇದ್ದ ಹಾಗೆ ಬೇಗ ಹೇಳುವೆಯೋ? ಇಲ್ಲವೋ?

ಸೋಮು—ಯಾವ ವಿಷಯವನ್ನು ಸ್ವಾಮಿ?

ತಾರಾನಾಥ—ಯಾವ ವಿಷಯವೆಂಬುದು ನಿನಗೆ ಗೊತ್ತೇ ಇಲ್ಲವೇ? ನೀಚಾ, ನಾನು ಭಾವನ ಮನೆಗೆ ಹೋಗಿದ್ದಾಗ ಇಂದಿರೆಯು ಏನು ಮಾಡುತ್ತಿದ್ದಳೆಂಬುದನ್ನು ಹೇಳು.

ಸೋಮು—ಏನೂ ಇಲ್ಲ ಸ್ವಾಮಿ.

ತಾರಾನಾಥ—ಏನೂ ಇಲ್ಲ! ನೀನು ಇಂದೇ ಮನೆಯಿಂದ ಹೊರಡಬೇಕು. ನಡೆ.

ಸೋಮು—ಇಂದಿರಮ್ಮನವರು ಒಳ್ಳೆಯವರು ಸ್ವಾಮಿ! ದಯಾಳು.

ತಾರಾನಾಥ—ಒಳ್ಳೆಯವಳಾಗಲಿ ಕೆಟ್ಟವಳಾಗಲಿ. ಆ ವಿಚಾರ ನಿನಗೆ ಬೇಡ. ನಡೆದ ಸಂಗತಿಗಳನ್ನೆಲ್ಲಾ ಹೇಳು. ಇಲ್ಲವಾದರೆ ಇಲ್ಲಿಂದ ತೊಲಗು

ಸೋಮು—ಒಂದು ದಿನ ಮನೋಹರರ ಸೇವಕ ಒಂದು ಕಾಗದ ವನ್ನು ತಂದ ಸ್ವಾಮಿ. ಇಂದಿರಮ್ಮನವರು ಅವನನ್ನು ಉಪ್ಪರಿಗೆಗೆ ಕರೆದು ಕೊಂಡು ಹೋಗಿ ಪದ್ಯ ಹೇಳಿಸಿ ಏನೋ ಬರೆದುಕೊಟ್ಟರು.

ತಾರಾನಾಥ—ಅಷ್ಟೆಯೋ? ಮತ್ತೇನಾದರೂ ಇದೆಯೋ?

ಸೋಮು—ಆ ದಿನ ಸಂಜೆಯೇ ಮನೋಹರರು ಬಂದರು. ಉಪ್ಪರಿಗೆಯಲ್ಲಿ ಅವರಿಬ್ಬರೂ ಏನೇನೋ ಮಾತಾಡುತ್ತಿದ್ದರು.

ತಾರಾನಾಥ—(ಕ್ರುದ್ಧನಾಗಿ) ಇದು ನಿಜವೇ? ಹ! ಮಿತ್ರದ್ರೋಹೀ!

ಸೋಮು—ಹೌದು ಸ್ವಾಮಿ! ತಂದೆಯಾಣೆ ನಿಜ. ತಿರುಪತಿ ದೇವರ ಪಾದದಾಣೆ ಸತ್ಯ.

ತಾರಾನಾಥ—ಆಗಲಿ ಹೋಗು. (ಸೋಮು ಹೋಗುವನು. ದುಃಖ ಕ್ರೋಧಾತಿಶಯದಿಂದ ಹುಚ್ಚನಂತೆ ಅತ್ತಿತ್ತ ತಿರುಗಿ) ಅಹ! ಅಂತರಾಳದೊಳಗೆ

ಇಂತಹ ವಿಷಕೀಟವು ಹುದುಗಿರುವ ಕಮಲ ಪುಷ್ಪವು ಇಷ್ಟೊಂದು ಸೊಬಗು, ಸೊಂಪಿನ ಮನೋಹರತೆ ಬೀರಲು ಸಾಧ್ಯವೇ? ಅಮೃತ ಪಾತ್ರದ ತಳದಲ್ಲಿ ವಿಷದ ಪದರು ಅಡಗಿರುವುದೇ? ವಸಂತ ಮಂದಾನಿಲವು ವಿಷವಾಯು ಸಮ್ಮಿಳಿತವಾಗಿರುವುದೇ? ಇದು ನಿಜವಾಗಿರಬಹುದೇ? ಸೋಮನು ಸುಳ್ಳು ಹೇಳಿರಬಹುದೆ? ಛೆ! ಅವನನ್ನು ಸರಿಯಾಗಿ ವಿಚಾರಿಸದೇನೇ ಕಳುಹಿಸಿಬಿಟ್ಟೆನು. ಇನ್ನೊಮ್ಮೆ ವಿಚಾರಿಸಿ ಸಂಗತಿಯನ್ನೆಲ್ಲಾ ವಿವರವಾಗಿ ತಿಳಿದುಕೊಳ್ಳಲೇ ಬೇಕು.

(ಇಂದಿರೆಯು ಪ್ರವೇಶಿಸುವಳು.)

ಇಂದಿರೆ—ಪ್ರಿಯ, ಮನೋಹರರು ಬಂದು, ಹೆಬ್ಬಾಗಿಲಲ್ಲಿ ನಿಮ್ಮನ್ನು ಕಾಯುತ್ತಿರುವರು.

ತಾರಾನಾಥ—ಅವನನ್ನು ಉಪ್ಪರಿಗೆಗೆ ಕರೆದುಕೊಂಡು ಹೋಗು.

ಇಂದಿರೆ—ಅಂದರೆ?

ತಾರಾನಾಥ—ಅಂದರೆ ಅದೇ! ನಡೆ! ನನಗೆ ಇಂದು ಅವನನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಸೌಖ್ಯವೂ ಇಲ್ಲ.

ಇಂದಿರೆ—ಏನು, ತಲೆಸಿಡಿತವೇ? ನೀಲಗಿರಿ ತೈಲ ತರಲೇ?

ತಾರಾನಾಥ—ಏನೂ ಬೇಡ. ನಿನ್ನ ಕೆಲಸ ನೋಡು.

ಇಂದಿರೆ – ಅಲ್ಲಿ ಅವರು ಆವಾಗಿನಿಂದ ಕಾದುಕುಳಿತಿರುವರಲ್ಲ!

ತಾರಾನಾಥ – ನೀನು ಹೋಗಿ ಮಾತನಾಡು!

ಇಂದಿರೆ—ಅವರು ಆತುರಪಡುತ್ತಿರುವುದು ನಿಮ್ಮೊಡನೆ ಮಾತನಾಡಲು; ನನ್ನೊಡನೆ ಅಲ್ಲ.

ತಾರಾನಾಥ—ಅಹಹ! ನಿನ್ನೊಡನೆ ಅಲ್ಲವೇ? ನನ್ನೊಡನೆಯೇ? ಹೋಗು, ನನಗೆ ಈ ದಿನ ಸೌಖ್ಯವಿಲ್ಲವೆಂದು ಹೇಳು. ಅವನು ಹೋಗಲಿ.

ಇಂದಿರೆ—(ತಾರಾನಾಥನ ತಲೆಸವರಿ) ಪ್ರಾಣೇಶ, ಏನು? ಏನಾಯಿತು ನಿಮಗೆ? ನಿಜವಾಗಿಯೂ ತಲೆಸಿಡಿತವೆ?

ತಾರಾನಾಥ – (ಇಂದಿರೆಯನ್ನು ದೂಡಿ) ಅಲ್ಲ, ನಟನೆ! ದೂರ ಸರಿ, ನನ್ನ ಮೈ ಮುಟ್ಟಬೇಡ.

ಇಂದಿರೆ—ಏನಿದು ಪ್ರಿಯ? ನಿಮ್ಮ ಮನೋಸ್ಥಿತಿಯು ಹೀಗೆ ಮಾರ್ಪಡಲು ಕಾರಣವೇನು? ನನ್ನಿಂದೇನಾದರೂ ಅಪರಾಧವಾಯಿತೆ? ಮನಬಿಚ್ಚಿ ಹೇಳಿ.

ತಾರಾನಾಥ—ನಿನ್ನೊಡನೆ ಮನಬಿಚ್ಚಿ ಹೇಳುವುದೇ! ಏನನ್ನು? ನೀನು ಅತ್ಯಂತ ನಿರ್ಮಲೆ! ನಿರ್ದೋಷಿ! ನಿಷ್ಕಪಟಿ!

ಇಂದಿರೆ--ಅಹ! ಪ್ರಿಯ, ಈ ವ್ಯಂಗ್ಯೋಕ್ತಿಯ ಕೂರಲಗಿನಿಂದ ನನ್ನ ಹೃದಯವನ್ನು ಏಕೆ ಇರಿಯುತ್ತಿರುವಿರಿ? ನನ್ನಲ್ಲಿರುವ ದೋಷ ವೇನು? ನಾನು ಮಾಡಿದ ಅಪರಾಧವನ್ನಾದರೂ ಹೇಳಬಾರದೆ?

ತಾರಾನಾಥ - ಯಾವ ದೋಷವೂ ಇಲ್ಲ ನಿನ್ನಲ್ಲಿ! ದೋಷವಿರು ವುದು ನನ್ನಲ್ಲಿ! ಇಂದಿರೆ, ನಡೆ. ದೋಷಿಯಾದ ನನ್ನ ಬಳಿ ನಿರ್ದೋಷಿ ಯಾದ ನೀನಿರಬಾರದು.

ಇಂದಿರೆ - ಈ ಮಾತಿನ ಅರ್ಥವೇ ನನಗಾಗದು. ಪ್ರಿಯ, ನನ್ನನ್ನು ಈ ರೀತಿ ಏಕೆ ಕೊರಗಿಸುತ್ತಿರುವಿರಿ?

ತಾರಾನಾಥ—ನಿನ್ನನ್ನು ಕೊರಗಿಸುತ್ತಿರುವುದೆ? ಇಂದಿರೆ, ನನ್ನ ಹೃದಯದ ಸಂತಾಪವನ್ನು ನೀನು ಬಲ್ಲೆಯಾ?

ಇಂದಿರೆ—ಏತಕ್ಕಾಗಿ ನೀವು ಸಂತಾಪಪಡುತ್ತಿರುವುದು? ಯಾರು ಏನು ಮಾಡಿದರು?

ತಾರಾನಾಥ—ಯಾರೂ ಏನೂ ಮಾಡಲಿಲ್ಲ! ನಾನೇ ನನ್ನಷ್ಟಕ್ಕೆ ಸಂತಾಪ ಪಡುತ್ತಿರುವೆನು. ನೀನು ನಡೆ. ನಿನ್ನ ಸಮಾಧಾನೋಕ್ತಿಯು ನನಗೆ ಬೇಕಾಗಿಲ್ಲ. ನಿನ್ನ ಸಾಮಿಪ್ಯವು ನನ್ನ ಹೃದಯದ ಕಿಚ್ಚನ್ನು ಮತ್ತಷ್ಟು ಜ್ವಲಿಸುವುದು.

ಇಂದಿರೆ—ನನ್ನ ಸಾಮಿಪ್ಯವು ನಿಮಗೆ ಅಸಹನೀಯವಾಗುವುದಾ ದರೆ ನಾನಿಲ್ಲಿಂದ ಹೋಗುವೆನು. (ಹೋಗುವಳು)

ತಾರಾನಾಥ—(ಸ್ವಗತ) ಇಂತಹ ವಿಶ್ವಾಸ ಘಾತುಕವೂ ಇದೆಯೇ? ಮನೋಹರನು ಈ ರೀತಿ ಮಿತ್ರದ್ರೋಹ ಮಾಡುವ ಘಾತಕಿಯೇ? ಇಂದಿರೆಯೂ ಇಂತಹ ವಂಚಕ ಪಾತಕಿಯೇ? ಅವಳ ಪ್ರೀತಿಯ ಸೇವಕ ಸೋಮನು ಹೇಳಿದುದು ಸುಳ್ಳೇ? (ತುಸು ಯೋಚಿಸಿ) ಆಹ! ನಿಶ್ಚಯ,

ನಿಶ್ಚಯ, ಈ ಲೋಕದಲ್ಲಿ ಯಾರನ್ನೂ ನಂಬಬಾರದೆಂಬುದು ನಿಶ್ಚಯ ಮನೋಹರ, ಈಗ ನಿನ್ನ ಮತ್ತು ಇಂದಿರೆಯ ಸಂಧ್ಯಾಟನದ, ಸರಸ ಸಲ್ಲಾಪದ ಅಂತರ್ಯವು ತಿಳಿಯಿತು. ಇಂದಿರೆ, ನೀನೂ ಮನೋಹರನೂ ಪರಸ್ಪರ ಮೆಚ್ಚುಗೆಯಿಂದ ಹಾಡುವ ಬಗೆಯೂ ಬಯಲಾಯಿತು ಮೈತ್ರಿಯ ಮಂತ್ರಜಾಲ ಬೀರಿದ ಮಾಂತ್ರಿಕನ ಕುಹಕತನವನ್ನು ಅರಿತುಕೊಳ್ಳದ ನಾನು ಎಂಥಾ ಮೊದ್ದು ಜಂತು! (ತಲೆಬಾಗಿ ಆಲೋಚನಾಪರನಾಗುವನು ಆಗ ಇಂದಿರೆಯೂ, ಮನೋಹರನೂ ಪ್ರವೇಶಿಸುವರು.)

ಇಂದಿರೆ—ಅಣ್ಣಾ, ಇವರು ಈ ರೀತಿ ವರ್ತಿಸಲು ಕಾರಣವೇನೆಂಬುದನ್ನು ನೀವಾದರೂ ಕೇಳಿ ನನಗಿದರ ಅರ್ಥವೇ ಆಗದು. ಅವರು ನನ್ನನ್ನು ತೀವ್ರವಾಗಿ ದ್ವೇಷಿಸುವಂತಿದೆ. ನನ್ನ ಸಾಮಿಪ್ಯವು ಅವರಿಗೆ ಸಂತಾಪಕರವಾಗುವುದಂತೆ!

ಮನೋಹರ—ತಾರಾನಾಥ, ಏನೀ ವಿಚಿತ್ರ ಪರಿವರ್ತನೆ? ಮನಬಿಚ್ಚಿ ಹೇಳು. ನಾನು ನಿನ್ನ ಆಪ್ತನೆಂದಾದರೆ, ಅಂತರಂಗದಲ್ಲಿರುವುದನ್ನೆಲ್ಲಾ ಮರೆಮಾಜದೆ ತಿಳಿಸು.

ತಾರಾನಾಥ—ನೀನೂ ನನ್ನ ಪರಮಾಪ್ತ! ನಿನಗೆ ನನ್ನ ಆಂತರ್ಯವನ್ನರುಹಬೇಕೆ? ನೀನು ಇಲ್ಲಿಗೆ ಬಂದ ಆಂತರ್ಯವನ್ನು ನನಗೆ ತಿಳಿಸುವೆಯಾ?

ಮನೋಹರ—ಅಂದರೇನು? ನಾನು ಇಲ್ಲಿಗೆ ಬರಲಾಗದೆ?

ತಾರಾನಾಥ—ಬರಲಾಗದೆಂದು ಯಾರು ಹೇಳಿದರು? ನಾನು ಹೇಳಿದರೂ ನಿನ್ನ ಮನಸ್ಸು ಒಪ್ಪುವುದೇ?

ಮನೋಹರ—ತಾರಾನಾಥ, ನಿನ್ನ ಈ ವರ್ತನೆಯು ಅತಿ ವಿಚಿತ್ರವಾದುದು. ನಮ್ಮಿಬ್ಬರ ಸ್ನೇಹಲತೆಯ ತಾಯಿಬೇರನ್ನೇ ಆವುದೋ ವಿಷಕೀಟವೊಂದು ಕೊರೆಯುತ್ತಿರುವಂತಿದೆ ನನ್ನ ಆಗಮನವು ನಿನಗೆ ಅಸಹನೀಯವಾದರೆ ಇನ್ನು ನಾನು ಬರುವುದೇ ಇಲ್ಲ. ಇದೋ ಹೊರಟೆನು.

ಇಂದಿರೆ—ಅಣ್ಣಾ, ನಿಲ್ಲಿ. ಒಮ್ಮೆಯೇ ಕೋಪಕ್ಕೆ ಮನಸ್ಸು ಕೊಡಬೇಡಿ. ಇತ್ತಿತ್ತ ಇವರ ಮನಸ್ಸೇ ಕೆಟ್ಟು ಹೋದಂತಿರುವುದು.

ತಾರಾನಾಥ--ನಿಜ, ಮನೋಹರ! ಹೋಗಬೇಡ, ನಿಲ್ಲು! ನಿಲ್ಲು! ನನ್ನ ಮನೋಸ್ಥಿತಿಯು ಕೆಟ್ಟಿದೆ! ಸ್ವಸ್ಥಚಿತ್ತನಾದ ನೀನು ಅವಳ ಬಳಿ ಇರಲೇಬೇಕು!

ಮನೋಹರ- ನೀನಿಂದು ಮೊದಲಿನ ತಾರಾನಾಥನಲ್ಲ ನಿನ್ನ ಮನಸ್ಸು ಅವುದೋ **ಸಂಶಯ ಪಿಶಾಚಿ** ಗ್ರಸ್ತವಾಗಿರುವುದು. ಚಿಕ್ಕಂದಿನಿಂದಲೂ ಬೆಳೆದು ಬಂದ ನಮ್ಮಿಬ್ಬರ ಪರಸ್ಪರ ವಿಶ್ವಾಸ ಪೂರ್ಣವಾದ ಮೈತ್ರಿಯ ಕಟ್ಟಡವನ್ನು, ಆವುದೋ ಸುಳಿಗಾಳಿಯು ತಳ ಮಗುಚಿರುವುದು. ನಿನ್ನ ಹೃದಯವನ್ನು ಆವರಿಸಿರುವ ಸಂದೇಹವನ್ನು ನೀನು ಮನಬಿಚ್ಚಿ ಹೇಳುವುದಿಲ್ಲ. ಆಗಲಿ, ಕಾಲವು ತನ್ನಷ್ಟಕ್ಕೇನೇ ಎಲ್ಲವನ್ನೂ ಬಯಲುಮಾಡುವುದು. ತಂಗಿ, ಈಗ ನಾನು ಹೋಗುವೆನು. ನಿನ್ನಗೇನೋ ವಿಪತ್ತು ಉಂಟಾಗುವಂತಿರುವುದು. ಎಂತಹ ಸಂಕಷ್ಟದಲ್ಲಿಯೂ ಧೃತಿಗೆಡದೆ ಸ್ಥಿರಚಿತ್ತದಿಂದಿರು. ನಿಷ್ಕಳಂಕ ಸ್ವಭಾವವು, ದಿನಕರನಂತೆ ಒಮ್ಮೆಗೆ ಕಾರ್ಮುಗಿಲಿನಿಂದ ಆವರಿತವಾದರೂ ಕಟ್ಟಕಡೆಗೆ ಅತ್ಯುಜ್ವಲ ಪ್ರಕಾಶದಿಂದ ಬೆಳಗದಿರದು. (ಹೋಗಿಬಿಡುವನು.)

ತಾರಾನಾಥ – ಇಂದಿರೆ ಮನೋಹರನು ಹೋದನು. ನೀನೂ ಹೋಗಬಹುದಲ್ಲವೆ?

ಇಂದಿರೆ—ನಿಮ್ಮನ್ನು ಬಿಟ್ಟು ನಾನು ಎಲ್ಲಿಗೆ ಹೋಗಲಿ? ಪ್ರಿಯ, ಏಕೆ ಹೀಗೆ ಮಾತನಾಡುತ್ತಿರುವಿರಿ? ನಿಮ್ಮ ಮನಸ್ಸನ್ನು ಯಾರು ಕೆಡಿಸಿರುವರು? ಯಾರ ಚಾಡಿಯನ್ನು ಕೇಳಿರುವಿರಿ?

ತಾರಾನಾಥ—ಇಂದಿರೆ, ನಡೆ. ಹೆಚ್ಚು ಮಾತನಾಡಬೇಡ. ನನ್ನನ್ನು ನನ್ನಷ್ಟಕ್ಕಾದರೂ ಇರಬಿಡು; ಹೋಗು. (ಇಂದಿರೆಯು ಹೋಗುವಳು)

೧೮ನೇ ದೃಶ್ಯ

[ತೋಟದ ಒಂದು ಮರೆಯಲ್ಲಿ, ತಮ್ಮ ಒಳಸಂಚಿನ ಗುಟ್ಟನ್ನು ಯಾರಿಗೂ ತಿಳಿಸದಂತೆ ಸಂಜೀವನೂ ಚಂದು ಸೆಟ್ಟಿಯೂ ಸೋಮುನನ್ನು ಬೆದರಿಸುತ್ತಿರುವರು]

ಸಂಜೀವ—ಸೋಮು, ನೀನು ಇಷ್ಟರವರೆಗೆ ಆ ಗುಟ್ಟನ್ನು ಯಾರಿಗೂ ತಿಳಿಸಿಲ್ಲವೆಂಬುದು ನಿಶ್ಚಯವಲ್ಲವೆ?

ಸೋಮು—ಇಷ್ಟರವರೆಗೆ ಯಾರಿಗೂ ತಿಳಿಸಲಿಲ್ಲ. ಆದರೆ........

ಚಂದು—ಆದರೆ ಏನು? ಯಾರಿಗಾದರೂ ತಿಳಿಸಿದರೆ ಜಾಗ್ರತೆ! ನಿನ್ನ ಎಲುಬು ಒಂದೂ ಉಳಿಯದಂತೆ ಪುಡಿಮಾಡಿ ಬಿಟ್ಟೇನು. ಪ್ರಾಣದಾಶೆ ಇದ್ದರೆ ಆ ಕುರಿತು ತುಟಿ ಎತ್ತದಿರಬೇಕು. ಜಾಗ್ರತೆ!

ಸೋಮು—ಇಂದಿರಮ್ಮನವರು ಬಹಳ ಒಳ್ಳೆಯವರು. ಈಗ ಅವರ ಮುಖವನ್ನು ನೋಡಿದರೆ ನನ್ನ ಎದೆ ಒಡೆದು ಹೋಗುವುದು. ಅಹ! ನಾನೆಂತಹ ಪಾಪ ಮಾಡಿದೆ!

ಸಂಜೀವ-ಏನೆಂದೆ? ನಿನಗೆ, ನಾಯಿಮರಿಗೆ ಪಾಪ-ಪುಣ್ಯ! ಚಂದು, ಹಿಡಿ ಇವನನ್ನು. ಈಗಲೇ 'ಫೈಸಲ್' ಮಾಡಿಬಿಟ್ಟರೆ ಮತ್ತೆ ಯಾವ ತೊಂದರೆಯೂ ಇಲ್ಲ. ಮತ್ತೆ ಎಲ್ಲಿಯ ಪಾಪ-ಪುಣ್ಯ ನೋಡುವ.

ಸೋಮು—ಇಲ್ಲ ಸ್ವಾಮಿ, ಇಲ್ಲ. ನೀವು ಹೇಳಿದ ಹಾಗೆ ಕೇಳುತ್ತೇನೆ. ಯಾರಿಗೂ ಹೇಳುವುದಿಲ್ಲ. ಒಮ್ಮೆ ಮಾಫಿ ಬಿಡಿ, ದಮ್ಮಯ್ಯ!

ಸಂಜೀವ—ಹಾಗಾದರೆ, ಇಗೋ, ಈ ಶಾಲು. ನಿನಗೆ ಬೇಕಾದಾಗ ಎಷ್ಟು ಹಣ ಬೇಕಾದರೂ ಕೇಳು. ಇಷ್ಟೇ ಅಲ್ಲ, ಇನ್ನು ಮುಂದೆ ಇದಕ್ಕಿಂತಲೂ ಹೆಚ್ಚಿನದು ದೊರೆಯಬಹುದು. ಗುಟ್ಟು ಮಾತ್ರ ಬಿಡಬೇಡ.

ಚಂದು—ಜಾಗ್ರತೆ! ನಿನಗೆ ಅನಂತರ ಮನೆಗಿನೆ ಕಟ್ಟಿಸಿಕೊಟ್ಟು ಮದುವೆ ಮಾಡಿಸುವ ತಿಳಿಯಿತೆ?

ಸೋಮು—ಆಯಿತು. ಸ್ವಾಮಿ, ಆಯಿತು.

ಚಂದು—ಈಗ ಹೋಗು, ನಡೆ. (ಸೋಮು ಹೋಗುವನು)

ಸಂಜೀವ—ಚಂದು, ಹೇಗೆ ಉಪಾಯ? ಉಪಾಯವೊಂದಿದ್ದರೆ ಎಂತಹ ಕೆಲಸವನ್ನಾದರೂ ಸಾಧಿಸಬಹುದಲ್ಲವೆ?

ಚಂದು—ಉಪಾಯವಿದ್ದರೆ ಮಾತ್ರ ಸಾಲದು. ನನ್ನ ಸಹಾಯವೂ ಬೇಕು. ರಥಿಕ ನೀವಾದರೂ ಸಾರಥಿ ನಾನು.

ಸಂಜೀವ—ಸ್ವಲ್ಪ ಸುಮ್ಮನಿರು ತಲೆ ತುಂಬಾ ಮಾತನಾಡಬೇಡ.

ಚಂದು—ಪಾಪ! ಆ ಇಂದಿರಮ್ಮ ಒಳ್ಳೆಯವರೆಂಬುದಕ್ಕೆ ಸಂದೇಹ

ವಿಲ್ಲ. ಅದರಲ್ಲೂ ಗರ್ಭಿಣಿ. ಅವರ ಅನ್ನ ತೆಗೆಯಲು ನೋಡುವ ನೀವು ಏನೂ ಮಾಡುವಿರಿ!

ಸಂಜೀವ—ಸೈತಾನನ ಶಾಸ್ತ್ರೋಪದೇಶವೇ? ಸಾಕು! ಸಾಕು! ಬಾಯಿ ಮುಚ್ಚುತ್ತೀಯೋ ಇಲ್ಲವೋ?

ಚಂದು—ಮುಚ್ಚದೆ! ಇರಲಿ. ಈಗ ತಾರಾನಾಥನು ಇಂದಿರೆಯನ್ನು ತವರುಮನೆಗೆ ಕಳುಹಿಸುವ ವಿಷಯದಲ್ಲಿ ಇನ್ನೂ ಚಂಚಲ ಪಡುತ್ತಲೇ ಇರುವನಲ್ಲಾ! ನೀವೇನು ಮಾಡುವಿರಿ?

ಸಂಜೀವ—ಅವನು ಈಗಲೆ ಇಂದಿರೆಯನ್ನು ಕಳುಹಿಸಿಬಿಡುವ ನಿರ್ಧಾರಕ್ಕೆ ಬರುವಂತೆ ಮಾಡುವೆನು. ನೋಡು, ಬಾ! (ಹೋಗುವರು.)

೧೯ನೇ ದೃಶ್ಯ

[ತುಂಗಮ್ಮನ ಮನೆ. ತುಂಗಮ್ಮ, ಮನೋರಮೆ, ಸಂಜೀವ, ಚಂದು ಇವರು ಕುಳಿತಿರುವರು. ತಾರಾನಾಥನು ಅತ್ಯಂತ ಖಿನ್ನನಾಗಿ ಪ್ರವೇಶಿಸುವನು.]

ಸಂಜೀವ—ಲೋಕಕ್ಕೆಲ್ಲಾ ಬುದ್ಧಿ ಹೇಳ ಹೊರಟಿರುವ ಮಹಾಶಯರು ಈಗ ತಾನೇ ಮಾಡುತ್ತಿರುವುದೇನು? ತಾರಾನಾಥ, ನಿನ್ನ ವಿಷಯದಲ್ಲಿ ಜನರು ಏನು ಹೇಳುತ್ತಿರುವರೆಂಬುದನ್ನು ಬಲ್ಲೆಯಾ? ನಮಗೆ ಅದನ್ನು ತಿಳಿಸಲೂ ನಾಚಿಕೆಯಾಗುತ್ತದೆ.

ಚಂದು—ಹೌದು ಸ್ವಾಮಿ. 'ಮರ್ಯಾದಸ್ತರು ಅಂತಹ ಹೆಂಗುಸನ್ನು ಮನೆಯಲ್ಲಿ ಇಟ್ಟುಕೊಳ್ಳಲಿಕ್ಕಿಲ್ಲ' ಎಂದು ಜನರಾಡಿಕೊಳ್ಳುತ್ತಿದ್ದಾರೆ.

ತುಂಗಮ್ಮ—ನಮಗೆ ಮರ್ಯಾದೆಯಿದ್ದರೆ! ಇಂಗ್ಲಿಷ್ ಕಲಿತವರು ಏನು ಮಾಡಿದರೂ ಚಂದ!

ಮನೋರಮೆ—ಅಣ್ಣಾ, ಇಷ್ಟೊಂದು ಮರ್ಯಾದೆ ಕೆಟ್ಟೂ ಆ ಗಯ್ಯಾಳಿಯನ್ನು ಮನೆಯಲ್ಲಿ ಇಟ್ಟುಕೊಳ್ಳಬೇಕೆ?

ತಾರಾನಾಥ—ಸೋಮು! ಹೆ! ಸೋಮು! (ಸೋಮನು ಬರುವನು.) ಹೋಗು, ಇಂದಿರೆಯನ್ನು ಕೂಡಲೆ ಮನೆಯಿಂದ ಹೊರಟು ಹೋಗ ಹೇಳು.

ಸೋಮ—ಆಯಿತು ಸ್ವಾಮಿ. (ಬಹಳ ದುಃಖದಿಂದ ಒಳಹೋಗಿ ಇಂದಿರೆಗೆ ತಿಳಿಸುವನು. ಇಂದಿರೆಯು ಚಿಂತಾಕ್ರಾಂತಳಾಗಿ ಬಂದು ತಾರಾನಾಥನ ಇದಿರಲ್ಲಿ ಮೂರ್ತಿಯಂತೆ ನಿಲ್ಲುವಳು. ತಾರಾನಾಥನು ಅವಳ ಮುಖವನ್ನು ನೋಡದೆ ಸುಮ್ಮನೆ ನಿಲ್ಲುವನು. ಎಲ್ಲರೂ ಸ್ವಲ್ಪ ಸಮಯ ಮೌನವಾಗಿರುವರು.)

ತುಂಗಮ್ಮ—ಇಂದಿರೆ, ನೀನು ಇಷ್ಟು ಮಾಡಿದ್ದು ಸಾಕು. ಇನ್ನು ಮುಂದೆ ನೀನು ನಿನ್ನ ತವರುಮನೆಗೆ ಹೋಗಬಹುದೆಂದು ನಿನ್ನ ಗಂಡನೇ ಈಗ ಆಜ್ಞಾಪಿಸಿರುವನು. ಅದನ್ನು ನಿನಗೆ ಸೋಮನು ತಿಳಿಸಲಿಲ್ಲವೇ?

ಇಂದಿರೆ—ನಾನು ಮಾಡಿದ ತಪ್ಪೇನು?

ತಾರಾನಾಥ—ನೀನೇನೂ ತಪ್ಪು ಮಾಡಿಲ್ಲ! ನಿನ್ನ ಈ ಕಪಟವು ಇನ್ನು ನಡೆಯದು. ಇದಿರು ಮಾತನಾಡಬೇಡ. ನಡೆ.

ತುಂಗಮ್ಮ—ಹೌದು. ಇಷ್ಟರ ವರೆಗೆ ಕಾದಾಡಿದುದೇ ಸಾಕು.

ಇಂದಿರೆ—(ತುಸು ಹೊತ್ತು ಸುಮ್ಮನಿದ್ದು. ಅನಂತರ ನಿಟ್ಟುಸಿರು ಬಿಡುತ್ತಾ ದುಃಖಾತಿಶಯದಿಂದ ತಾರಾನಾಥನ ಕಾಲಡಿಯಲ್ಲಿ ಮೊಣಕಾಲೂರಿ) ಪ್ರಿಯಕರ, ನನ್ನ ತಪ್ಪೇನೆಂದಾದರೂ ಹೇಳಬಾರದೇ? ನನ್ನನ್ನು ಈ ರೀತಿ ಸೂಜಿಯ ಮೊನೆಯ ಮೇಲಿರಿಸಿ ಕೊಲ್ಲುವಿರಾ? ತಪ್ಪನ್ನು ತಿಳಿಸದೆ ಓರ್ವ ವ್ಯಕ್ತಿಯನ್ನು ಏಕಾಏಕಿ ಗಲ್ಲಿಗೇರಿಸುವುದು ಯಾವ ನ್ಯಾಯ? (ತಾರಾನಾಥನು ಮೌನವಾಗಿರುವುದನ್ನು ಕಂಡು ಎದ್ದು) ಯಾಕೆ ಸುಮ್ಮನಿರುವಿರಿ? ನನ್ನೀ ಸಂತಾಪವು ನಿಮಗೆ ಚಂದವೆಣಿಸುವುದೆ? ನಿಮ್ಮ ಹೃದಯದ ಕನಿಕರದ ಬುಗ್ಗೆಯು ಬತ್ತಿಹೋಯಿತೆ? ಯಾರು ನಿಮ್ಮ ಮನಸ್ಸನ್ನು ಕೆಡಿಸಿದವರು?

ತುಂಗಮ್ಮ—ನೀನೆ!

ಇಂದಿರೆ—(ಅತ್ತೆಯ ಕಾಲುಹಿಡಿದು) ನಾನು ಮಾಡಿದ ಅಪರಾಧವೇನಾದರೂ ಇದ್ದರೆ ನಿಮ್ಮ ಮಗಳಂತೆ ಕ್ಷಮಿಸಿರಿ. ನನ್ನಂತೆಯೇ ಓರ್ವ ಪುತ್ರಿಯಿರುವ ನಿಮಗೆ ಕರುಣೆಯ ಕರುಳಿಲ್ಲವೆ? ಮಮತೆಯ ಹೃದಯವಿಲ್ಲವೆ? ಸ್ತ್ರೀ ಸಹಜ ಅಂತಃಕರಣವಿಲ್ಲವೆ? ನನ್ನ ತಪ್ಪೇನೆಂದು ನೀವಾದರೂ ಹೇಳಬಾರದೇ?

ತುಂಗಮ್ಮ—ಇದು ಈಗ ನೆನಪಾಯಿತೆ? ಮೊದಲೇ ಆಲೋಚನೆ ಮಾಡಿಕೊಳ್ಳಬೇಕಿತ್ತು!

ಇಂದಿರೆ—(ಕ್ರುದ್ಧಳಾಗಿ ಎದ್ದು ನಿಂತು ಪುನಃ ಸಂತಾಪಾತಿಶಯದಿಂದ ಮನೋರಮೆಯನ್ನುದ್ದೇಶಿಸಿ) ಅಕ್ಕಾ, ನೀವಾದರೂ ನನ್ನ ತಪ್ಪೇನೆಂದು ತಿಳಿಸುವಿರಾ? ನನ್ನ ದೋಷವು ಇಂತಹದೇ ಎಂದು ಹೇಳಿದರೆ ನಾನು ಸಂತೋಷದಿಂದ ನನ್ನ ಮನೆಗೆ ಹೋಗುವೆನು.

ಮನೋರಮೆ—ಅದು ಕ್ರಮೇಣ ತಾನಾಗಿ ತಿಳಿಯುವುದು. ನಾವು ಹೇಳಬೇಕಾಗಿಲ್ಲ.

ಇಂದಿರೆ—(ಸ್ವಗತ) ಅಹ! ಯಾರನ್ನು ನಾನು ಜೀವನದ ಏಕ ಮಾತ್ರ ಆಶಯವೆಂದು ನಂಬಿಕೊಂಡಿದ್ದೆನೋ ಯಾರಿಗಾಗಿ ನನ್ನ ಜೀವ, ಭಾವ, ಹೃದಯವನ್ನೆಲ್ಲಾ ಸಮರ್ಪಿಸಿದ್ದೆನೋ, ಎಂತಹ ವಿಪತ್ತಿನಲ್ಲಿಯೂ ಯಾರು ನನ್ನ ಸಹಾಯಕರಾಗಬೇಕಾಗಿದ್ದಿತೋ, ಅವರೇ ಈಗ ನನ್ನ ಕೈ ಬಿಟ್ಟಿರುವಾಗ ನಾನು ಅನ್ಯರನ್ನೇಕೆ ದೂರಬೇಕು? (ಪ್ರಕಾಶ) ಆಯಿತು, ಪ್ರಾಣನಾಥ, ನಾನು ನಿಮ್ಮನ್ನಗಲಿರುವುದರಿಂದಲೇ ನಿಮಗೆ ಸುಖವೆಂದಾದರೆ, ಅದರಿಂದಲೇ ನಿಮ್ಮಲ್ಲಿ ಶಾಂತಿಯುಂಟಾಗುವುದಾದರೆ, ನಾನು ಸಂತೋಷದಿಂದ ನನ್ನ ತವರುಮನೆಗೆ ಹೋಗುವೆನು. ಆದರೆ ನಿಮ್ಮಲ್ಲಿ ಯಾರಾದರೂ ನನ್ನ ಅಪರಾಧವೇನೆಂದು ಹೇಳುತ್ತಿದ್ದರೆ ನನಗೆ ಮಹದುಪಕಾರ ಮಾಡಿದಂತಾಗುತ್ತಿತ್ತು.

ಸಂಜೀವ—'ತಪ್ಪೇನು ತಪ್ಪೇನು' ಎಂಬ ಪಲ್ಲವಿ ಹಾಡುವುದರಿಂದ ಪ್ರಯೋಜನವೇನು? ಬೇರೆಯವರನ್ನು ಕೇಳುವುದಕ್ಕಿಂತ ತಾನೇ ವಿಚಾರಿಸಿದರೆ ತಿಳಿಯದೆ? ನಿನಗೂ, ಅತ್ತೆ ಮತ್ತು ಮನೋರಮೆಯರಿಗೂ ಸರಿ ಹೋಗುವುದಿಲ್ಲ. ತಾರಾನಾಥನು ಒಂದೋ ನಿನ್ನನ್ನು ಮನೆಯಿಂದ ಕಳುಹಿಸಬೇಕು; ಇಲ್ಲವೆ, ತನ್ನ ತಾಯಿತಂಗಿಯರನ್ನು ಮನೆಯಿಂದ ಹೊರಡಿಸಬೇಕು. ಅವನು ನಿನ್ನನ್ನೇ ಈಗ ತವರುಮನೆಗೆ ಕಳುಹಿಸುವ ನಿರ್ಧಾರ ಮಾಡಿರುವನು. ಇನ್ನು ಬೇರೆ ಕಾರಣಗಳೂ ಇವೆ.

ಇಂದಿರೆ—ಅದಾದರೂ ಅವರ ಬಾಯಿಯಿಂದ ಬರಲಿ.

ತಾರಾನಾಥ—ಯಾರ ಬಾಯಿಯಿಂದ ಬಂದರೇನು? ಅವನು ನನ್ನ ಭಾವನಲ್ಲವೇ?

ಇಂದಿರೆ—ಆಯಿತು ಪ್ರಿಯ! ನೀವು ನಿಮ್ಮ ತಾಯಿತಂಗಿಯ ರೊಂದಿಗೆ ಸುಖವಾಗಿರುವ ನಿಮಿತ್ತ ನಾನು ಸಂತೋಷದಿಂದ ನಿಮ್ಮಿಂದ ದೂರವಾಗುವೆನು. ಆದರೆ, ನನ್ನ ನಿರ್ದೋಷ ನಿಷ್ಕಳಂಕತೆಗೆ ದೇವರೇ ಸಾಕ್ಷಿ.

ತುಂಗವ್ಮು—ಹೌದು. ನಿನಗೆ ಒಬ್ಬ ದೇವರು!

ಇಂದಿರೆ—ಅತ್ತೆಯವರೆ, ಸಿಟ್ಟುಮಾಡಬೇಡಿ. ನನ್ನನ್ನು ಕಳುಹಿಸಿ ಕೊಡುವಾಗಲಾದರೂ ಸಂತೋಷದಿಂದ ಕಳುಹಿಸಿಕೊಡಿ.

ತುಂಗವ್ಮು—ಏನು ಭಾಗ್ಯ ಮಾಡಿದವಳು ನೀನು!

ಇಂದಿರೆ—ಏನು ಭಾಗ್ಯ ಮಾಡಿದವಳೇ? ನಿಮ್ಮ ಮನೆಯಲ್ಲಿ ಚಾಕರಿಯವಳಂತೆ ಸೇವೆ ಮಾಡಿದುದು ಸಾಕಾಗಲಿಲ್ಲವೆ? ಇನ್ನು ನೀವು ನನಗಿಂತಲೂ ಒಳ್ಳೆಯ ಸೊಸೆಯನ್ನು ತಂದುಕೊಳ್ಳಿರಿ. ಇದು ಯಾರ ಮಾತವೆಂಬುದನ್ನು ನಾನು ಬಲ್ಲೆನು. ಆದರೆ, ಮನೆಬಿಟ್ಟು ಹೋಗು ವಾಗ ಜಗಳಮಾಡಿ ಹೋದಳೆಂದು ನೀವು ಮತ್ತೆ ಸಾರುವಂತಾಗಬಾರ ದೆಂದು ಸುಮ್ಮನಿದ್ದೆ. ಪರಂತು, ನಿಮ್ಮ ವಾಗ್ಬಾಣವು ಅಸಹನೀಯ ವಾಗಿದೆ. ನನಗೂ ನಿಮ್ಮಂತೆಯೇ ಪ್ರಾಣ, ಮಾನ, ಅಭಿಮಾನವಿದೆ. ನಾನು ಮಣ್ಣಿನ ಗೊಂಬೆಯಲ್ಲ; ಮರದ ಕೊರಡಲ್ಲ. ನೀವು ಸೊಸೆ ಯಾಗಿದ್ದಾಗ ಪಟ್ಟ ಕಷ್ಟವನ್ನು ಒಂದಿಷ್ಟು ನೆನಸಿಕೊಳ್ಳುತ್ತಿದ್ದರೆ ನನ್ನನ್ನು ಈ ಪಾಡಿಗೆ ಈಡು ಮಾಡುತ್ತಿದ್ದಿಲ್ಲ! ನಿಮಗೆ ದೇವರು ಒಳ್ಳೇದು ಮಾಡಲಿ. ನಾನು ಸಂತೋಷದಿಂದ ನಿಮ್ಮನ್ನು ಅಗಲುವೆನು.

ಸಂಜೀವ—ಹೆಚ್ಚು ಮಾತನಾಡಿ ಪ್ರಯೋಜನವೇನು? ಆಗುವ ಕೆಲಸ ಆಗಿ ಹೋಯಿತಲ್ಲವೇ? ತಾರಾನಾಥ! ಅವಳನ್ನು, ಒಂದು ಜನ ಮಾಡಿ ನಾಳೆ ಕಳುಹಿಸಿಬಿಟ್ಟರಾಯಿತು.

ಇಂದಿರೆ—ನಾಳೆ ಏಕೆ? ಜನ ಏಕೆ? ಅಷ್ಟರ ಕರುಣೆ ನಿಮಗೆ ಬೇಡ. ನಾನು ಇಂದೇ ಹೋಗುವೆನು. ಆ ಕುರಿತು ನಿಮಗೆ ಯಾವ ಯೋಚ ನೆಯೂ ಬೇಡ.

ತುಂಗಮ್ಮ—ಹಾಗಾದರೆ ಹೋಗಬಹುದಲ್ಲವೆ?

ಇಂದಿರೆ ಆಯಿತು; ಹೊರಟೆನು. (ಒಳ ಹೋಗುವಳು.)

ತುಂಗಮ್ಮ— ಮನೋರಮೆ, ನಾವೂ ಒಳ ಹೋಗುವ. ಅವಳು ಇದ್ದ ಸಾಮಾನುಗಳನ್ನೆಲ್ಲಾ ಕೊಂಡುಹೋದಾಳು.

(ಇಬ್ಬರೂ ಒಳಹೋಗುವರು.)

೨೦ನೇ ದೃಶ್ಯ

[ಬೀದಿ—ಗಂಡನ ಮನೆಯಿಂದ ಹೊರಡಿಸಲ್ಪಟ್ಟ ಇಂದಿರೆಯು ಸಂತಾಪಾತಿಶಯದಿಂದ ನಡೆಯಲು ಕಾಲುಬಾರದೆ ಉಕ್ಕಿಬರುವ ಕಣ್ಣೀರನ್ನು ಸೆರಗಿಂದೊರಸಿ ತನ್ನ ಅವಸ್ಥೆಯ ಕುರಿತು ಚಿಂತಿಸುವಳು.]

ಇಂದಿರೆ—(ಸ್ವಗತ) ಹಾಯ್! ಪ್ರಾಣಿಗಳಲ್ಲೆಲ್ಲಾ ಮಿಗಿಲಾದ ಮಾನವನ ದ್ವೇಷವನ್ನು ಹಿಮ್ಮೆಟ್ಟಿಸುವ ದ್ವೇಷವು ಲೋಕದಲ್ಲಿ ಇನ್ನಾವುದಾದರೂ ಇರುವುದೇ? ಅದರಲ್ಲೂ ಬಂಧು ಬಳಗದೊಳಗಣ ದ್ವೇಷವು ಎಂತಹ ಘೋರಕೃತ್ಯವನ್ನಾದರೂ ಹೃದಯರಹಿತವಾಗಿ ಮಾಡಬಲ್ಲುದು. ನಾನೀಗ ಆ ದ್ವೇಷಾಗ್ನಿಗೆ ಬಲಿಬಿದ್ದು ಸಜೀವವಾಗಿ ವಧಿಸಲ್ಪಟ್ಟಿರುವೆನು. ಅಷ್ಟೊಂದು ಸೊಂಸು ಪೆಂಪಿನಿಂದ ಬೆಳೆದು ನಳನಳಿಸುತ್ತಿದ್ದ ನಮ್ಮ ದಾಂಪತ್ಯಜೀವನ ಲತೆಯ ತಾಯಿಬೇರನ್ನೇ ಅದಾವುದೋ ದ್ವೇಷಕೀಟವು ಕೊರೆದು ಮುರಿದು ಬಿಟ್ಟಿರುವುದು. ಆಹ! ನನ್ನ ದುರ್ದೈವವೇ! (ಧರಧರ ಇಳಿವ ಕಣ್ಣೀರನ್ನು ಸೆರಗಿಂದೊರಸಿ) ನನ್ನ ಪತಿಯ ಮನಸ್ಸು ಈ ರೀತಿಯಾಗುವುದೆಂದು ನಾನು ಕನಸಿನಲ್ಲಿಯೂ ನೆನಸಲಿಲ್ಲ. ಮತ್ಸರವು ಎಂತಹ ನಿರ್ಮಲ ಮನಸ್ಸಿನ ಮೇಲೂ ಸುಲಭವಾಗಿ ಅಧಿಕಾರ ನಡೆಸಬಲ್ಲುದು. ಎಂತಹ ವಿವೇಕಶಾಲಿಯನ್ನೂ ಅವಿವೇಕದಲ್ಲಿ ಕೆಡಹಬಲ್ಲುದು. ಮತ್ಸರಿ ಪತಿಯ ಚಂಚಲ ಮನಸ್ಸು ಆ ನೀಚ ಸಂಜೀವನ ಕುತಂತ್ರಕ್ಕೆ ಅನಾಯಾಸವಾಗಿ ಬಲಿಬಿದ್ದಿರಬೇಕು. ಆಗಲಿ; ಸತ್ಯಕ್ಕೆ ಜಯವೆಂಬುದಿದ್ದರೆ, ನಿರ್ವಂಚಕ ಸರಳ ವರ್ತನೆಗೇನಾದರೂ ಪ್ರಭಾವವಿದ್ದರೆ, ನನ್ನ ಸತ್ಯವು, ನನ್ನ ನಿರ್ವಂಚಕತನವು ಒಂದಲ್ಲೊಂದು ದಿನ ಪ್ರಸಿದ್ಧ

ವಾಗದಿರದು. ಅದೊಂದರ ಹೊರತು ಗರ್ಭಿಣಿಯಾದ ನನಗಿನ್ನಾವ ಬಯಕೆಯೂ ಇಲ್ಲ. ಪರಮಾತ್ಮನು ಎಂದಾದರೊಂದು ದಿನ ಅದನ್ನು ನೆರವೇರಿಸಿಕೊಟ್ಟನೆಂದರೆ ನಾನು ನನ್ನ ಜನ್ಮ ಸಾರ್ಥಕವಾಯಿತೆಂದೆಣಿಸಿ ಆನಂದದಿಂದ ಇಹ ಜೀವನವನ್ನು ಕೊನೆಗೊಳಿಸುವೆನು. (ಹೋಗುವಳು)

೨೧ನೇ ದೃಶ್ಯ

[ಸಂಜೀವನು ತನ್ನ ಮನೆ ಚಾವಡಿಯಲ್ಲಿ ಕಠಿಣ ರೋಗದಿಂದ ಮರಣೋನ್ಮುಖನಾಗಿ ಮಲಗಿರುವನು. ಮನೋರಮೆಯೂ ತುಂಗಮ್ಮನೂ ಒಂದೆಡೆ ಕಣ್ಣೀರಿಡುತ್ತಾ ಕುಳಿತಿರುವರು. ನಾರಾಯಣ ತಂತ್ರಿಯೂ ಇರುವನು.]

ಸಂಜೀವ—(ನರಳುತ್ತ) ಹಾ! ಉರಿ! ಉರಿ! ಅಯ್ಯೋ! ಸತ್ತೆ; ಸತ್ತೆ.

ಮನೋರಮೆ—(ದುಃಖದಿಂದ) ಹೆಚ್ಚು ಮಾತನಾಡಬೇಡಿರಿ. ಸ್ವಸ್ಥವಾಗಿ ಮಲಗಿರಿ. ತಾರಾನಾಥನು ಈಗಲೇ ಔಷಧ ತರುವನು.

ಸಂಜೀವ—ಅಯ್ಯೋ! ನಾನು ಸತ್ತೆ. ನನಗೇಕೆ ಔಷಧ? ಇನ್ನು ಬದುಕಲಾರೆ. ಹಾ! ಹಾ! ನನ್ನ ಅವಸ್ಥೆಯೇ? (ಹೊರಳುವನು)

ಮನೋರಮೆ—ಸ್ವಸ್ಥಚಿತ್ತರಾಗಿ ಮಲಗಿರಿ ಮಾತನಾಡಬಾರದೆಂದು ಡಾಕ್ಟರರು ಹೇಳಿದ್ದಾರೆ. (ಗಾಳಿ ಹಾಕುತ್ತಾ ಸ್ವಗತ) ಹಾಯ್! ದೇವಾ! ಒಮ್ಮೆಗೆ ಇವರ ದುರಾಚಾರಗಳನ್ನೆಲ್ಲಾ ಕ್ಷಮಿಸಿ ಆರೋಗ್ಯವನ್ನು ಕರುಣಿಸಲಾರೆಯಾ? ನನ್ನ ಓಲೆಭಾಗ್ಯವನ್ನು ಕಾಪಾಡಲಾರೆಯಾ? ಕರುಣಾಕರ, ದೀನೆಯ ಮೇಲೆ ಅಷ್ಟು ದಯೆದೋರು! ಸೆರಗೊಡ್ಡಿ ಬೇಡುವೆನು. ಒಮ್ಮೆಗೆ ರಕ್ಷಿಸು! (ತಾರಾನಾಥನು ಔಷಧವನ್ನು ಹಿಡಿದುಕೊಂಡು ಪ್ರವೇಶಿಸುವನು) ಅಣ್ಣಾ! ಡಾಕ್ಟರರು ಏನೆಂದರು?

ತಾರಾನಾಥ—'ಕಾಯಿಲೆ ಬಹಳ ಕಠಿಣವಿದೆ; ಇನ್ನು ಎರಡು ಮೂರು ದಿವಸ ಬಹಳ ಅಪಾಯವಿದೆ' ಎಂದರು.

ತಂತ್ರಿ—ನಾನು ಮೊದಲೇ ಹೇಳಲಿಲ್ಲವೆ?—ಈ ಹೊತ್ತು ಏಕಾದಶಿ, ಇನ್ನು ಅಮಾವಾಸ್ಯೆ ದಾಟುವ ವರೆಗೆ ಕಠಿಣವೆಂದು. ಅದನ್ನು ಡಾಕ್ಟರರು ಹೇಳುವುದೇನು? ಆದರೆ, ಪ್ರಾಣಕ್ಕೇನೂ ಅಪಾಯವಿಲ್ಲ. ಅದು ನಿಶ್ಚಯ.

ಸಂಜೀವ—(ಸಿಟ್ಟಿನಿಂದ) ಏನು? ಪ್ರಾಣಕ್ಕೇನೂ ಅಪಾಯವಿಲ್ಲವೆ? ತಂತ್ರಿ, ನಡೆ! ಇಲ್ಲಿಂದ ತೊಲಗು. ನೀನು ಇಷ್ಟರವರೆಗೆ ತಂತ್ರ ನಡೆಸಿದುದು ಸಾಕು!

ತುಂಗಮ್ಮ—ಮಾತಾಡಬೇಡ, ಸಂಜೀವ! ಆಯಾಸ ಹೆಚ್ಚಾಗುತ್ತದೆ.

ತಂತ್ರಿ—ನಾನೇನು ತಂತ್ರ ನಡೆಸಿದೆ? ಇಷ್ಟೆಲ್ಲಾ ಉಪಕಾರ ಮಾಡಿದುದಕ್ಕೆ ಇದೀಗ ತಕ್ಕ ಪುರಸ್ಕಾರವೇ?

ಸಂಜೀವ—ನಿನಗೆ ಪುರಸ್ಕಾರ! ಚಂದು, ಈ ತಂತ್ರಿಯನ್ನು ಹೊರ ಹೋಗ ಹೇಳು. ಇಲ್ಲವಾದರೆ ದೂಡು. ನನಗೆ ಜೀವ ಎಳೆಯುತ್ತದೆ; ಅವನು 'ಜೀವಕ್ಕೇನೂ ಅಪಾಯವಿಲ್ಲ, ಎನ್ನುತ್ತಾನೆ!

ತುಂಗಮ್ಮ—ತಂತ್ರಿಗಳೆ, ನೀವು ಮಾತನಾಡಬೇಡಿರಿ. ಹೋಗಿರಿ, ಇದೆಲ್ಲಾ ನಮ್ಮ ಗ್ರಹಚಾರ; ಮಾಡುವುದೇನು?

ತಂತ್ರಿ—ನನ್ನನ್ನು ಯಾರೂ ದೂಡಬೇಕಾಗಿಲ್ಲ. ನಾನೇ ದೂಡಿಕೊಳ್ಳುತ್ತೇನೆ. (ಹೋಗಿಬಿಡುವನು ಸಂಜೀವನ ಕುಟುಂಬಿಕರಲ್ಲಿ ಎರಡು ಮೂರು ಜನರು ಬಂದು ಹಾಸಿಗೆಯಲ್ಲಿ ಬೀಗದ ಕೈ ಹುಡುಕಿ ಗಲಾಟೆಯನ್ನೆಬ್ಬಿಸುವರು.)

ಸಂಜೀವ—ಚಂದು, ಇವರನ್ನೆಲ್ಲಾ ಇಲ್ಲಿಂದ ದೂಡು. ಇದೋ! ಮನೋರಮೆ, ನನ್ನ ಬೀಗದ ಕೈ ತೆಗೆದುಕೊ. ಒಳಗಿದ್ದುದನ್ನು ಬೇಗ ತೆಗೆ. (ಬೀಗದ ಕೈ ಕೊಡುವಷ್ಟರಲ್ಲಿ ಕುಟುಂಬದವನೊಬ್ಬನು ಅದನ್ನು ಕಸುಕೊಳ್ಳುವನು.) ಅಹ! ತಾರಾನಾಥ, ನಾನು ಬಯಸಿದುದೆಲ್ಲಾ ತಿರುಕನ ಸ್ವಪ್ನವಾಯಿತು. ನನ್ನೀ ಜೀವನವು ಹೀಗೆ ಹಠಾತ್ತಾಗಿ ಕೊನೆಗೊಳ್ಳುವುದೆಂದು ನಾನು ನೆನಸಿರಲಿಲ್ಲ ನಾನು ಯಾವ ಆಸ್ತಿ ಬದುಕನ್ನಾದರೂ ಮನೋರಮೆಯ ಹೆಸರಲ್ಲಿ ಮಾಡಡೆ ಕೆಟ್ಟೆ. ಹೊಸದಾಗಿ ಕಟ್ಟಿಸಿದ ಈ ಮನೆಯೂ ನನ್ನ ಹೆಸರಲ್ಲೇ ಇರುವುದು. ಎಂತಹ ಅಚಾತುರ್ಯವಾಯಿತು! ಮನೋರಮೆಗೂ ಆವಳ ಮಗುವಿಗೂ ಏನು ಗತಿ? ನೀಚರಾದ ನನ್ನ ಕುಟುಂಬಿಕರು ನನ್ನನ್ನು ಸಜೀವವಾಗಿ ಸುಟ್ಟುಬಿಡಲೂ ಸಿದ್ಧರು! ಅವರು ಸಾಕ್ಷಾತ್ ಯಮದೂತರಂತೆ ಹೊಂಚುಹಾಕಿ

ಕೊಂಡಿರುವರು. ಮನೋರಮೆಯನ್ನು, ಅವಳ ದೇಹದ ಹೊರತು ಮತ್ತಾವುದನ್ನೂ ಕೊಂಡೊಯ್ಯಬಿಡರು. ಒಂದು ಕಡ್ಡಿಯನ್ನೂ ಮುಟ್ಟಬಿಡರು. ಚಂದು, ಚಂದು!

ತಾರಾನಾಥ— ಎಲ್ಲಿದ್ದಾನೆ ಚಂದು? ಅವನು ನಿನ್ನ ಕುಟುಂಬದವರೊಂದಿಗೆ ಸೇರಿರುವನು!

ಸಂಜೀವ— ಅಹ! ಘಾತಕಿ! ತಾರಾನಾಥ, ನಾನು ಮಾಡಿದುದನ್ನು ನಾನೇ ಉಣ್ಣುತ್ತಿರುವೆನು. ಜೀವಿತವು ಕ್ಷಣಿಕವೆಂಬುದನ್ನು ಮರೆತು ಚಿರಂಜೀವಿಯೆಂಬಂತೆ ಬಾಳಿದೆನು. ಅಯ್ಯೋ! ಮೋಸಹೋದೆನು.

ತಾರಾನಾಥ—ನಿನಗೆ, ಮನೋರಮೆಯ ಮತ್ತು ಅವಳ ಮಗುವಿನ ವಿಷಯದಲ್ಲಿ ಯಾವ ಆತುರವೂ ಬೇಡ. ಶಾಂತಚಿತ್ತನಾಗು. ವೃಥಾ ತಳಮಳಿಸಬೇಡ. ನಾನಿರುವವರೆಗೆ ಅವರಿಗೆ ಯಾವ ತೊಂದರೆಯೂ ಬರಲಾರದು.

ಸಂಜೀವ— ತಾರಾನಾಥ, ನಿನ್ನ ಮಾತನ್ನು ಕೇಳುತ್ತಿದ್ದರೆ ನನಗೆ ಈ ಅವಸ್ಥೆಯುಂಟಾಗುತ್ತಿದ್ದೀತೆ? ನಾನು ಈ ಘನ ರೋಗಕ್ಕೆ ಬಲಿಯಾಗುತ್ತಿದ್ದೆನೇ? ಆ ತಂತ್ರ, ಮಂತ್ರ, ಬಲಿ, ಹೋಮಗಳಿಗೆ ನೂರಾರು ರೂಪಾಯಿಗಳನ್ನು ವೆಚ್ಚ ಮಾಡಿದೆನೇ ಹೊರತು ಡಾಕ್ಟರರನ್ನು ಕರೆಯಿಸಲಿಲ್ಲ.

ತಾರಾನಾಥ—ಭಾವ, ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು? ಮರಣಶಯ್ಯೆಯಲ್ಲಿ ಶಾಂತಚಿತ್ತದಿಂದ ಭಗವಂತನನ್ನು ಧ್ಯಾನಿಸು.

ಸಂಜೀವ—ಅಹ! ನಾನು ಪರಮಾತ್ಮನನ್ನು ಧ್ಯಾನಿಸುವುದೇ? ನನಗೆ ಆ ಮನಶ್ಶಾಂತಿಯಾದರೂ ಎಲ್ಲಿಂದ ಬರಬೇಕು? ತಾರಾನಾಥ, ನಾನು ಮಾಡದ ದುಷ್ಕೃತ್ಯ ಯಾವುದಿದೆ? ಇಲ್ಲ! ಇಲ್ಲ! ನರಕದಲ್ಲಿಯೂ ನನಗೆ ಸ್ಥಳ ಸಿಗದು! ನನಗಾಗಿ ಪ್ರತ್ಯೇಕ ನರಕವೊಂದನ್ನು ನಿರ್ಮಿಸಬೇಕಾದೀತು!

ತಾರಾನಾಥ—ಇದೇನು ಮಾತು ಸಂಜೀವ? ಎಂತಹ ಪಾಪಿ

ಹೃದಯವಾದರೂ ಪಶ್ಚಾತ್ತಾಪದಿಂದ ದಗ್ಧವಾದರೆ ಸ್ವತಃ ಪಾವನವಾಗಿ ಸದ್ಗತಿಗೆ ಪಾತ್ರವಾಗುವುದೆಂಬುದನ್ನು ತಿಳಿಯೆಯಾ?

ಸಂಜೀವ—ಹೌದು, ಸದ್ಗತಿ! ನಾನು ಮಾಡಿದ ಪೈಶಾಚಿಕ ಕೃತ್ಯಗಳೇ ಪ್ರೇತರೂಪದಲ್ಲಿ ನನ್ನನ್ನು ಮುತ್ತಿ ತಿನ್ನುತ್ತಿರುವಾಗ ನನಗೆ ಎಲ್ಲಿಯ ಸದ್ಗತಿ?

ತಾರಾನಾಥ—ಸಂಜೀವ, ಸುಮ್ಮನಿರು. ಏಕೆ ಹೀಗೆ ಕಳವಳಪಡುವೆ?

ಸಂಜೀವ—ಸುಮ್ಮನಿರುವುದೆ? ಅದೋ! ತಾರಾನಾಥ, ಎಂತಹ ಭಯಂಕರ ರೂಪಗಳೆಲ್ಲಾ ನನ್ನನ್ನು ಬೆದರಿಸುತ್ತಿರುವುವು! ಹಾ! ಇಂದಿರೆ, ಇಂದಿರೆ! ನಾನು ಮಹಾಪರಾಧವನ್ನು ಮಾಡಿದೆ! ನಾನು ಅಪರಾಧಿ! ನೀನು ನಿಜವಾಗಿಯೂ ನಿರ್ದೋಷಿ! ನಿರಪರಾಧಿ! ಹಾ! ತಾರಾನಾಥ, ಕ್ಷಮಿಸು! ಕ್ಷಮಿಸು! ಕ್ಷಮಿಸಿದೆಯಾ? ಕ್ಷಮಿಸು! ಕ್ಷಮಿಸು! (ರುದ್ಧ ಕಂಠನಾಗಿ ಮಾತನಾಡಲಾರದೆ ದೀರ್ಘನಿಶ್ವಾಸ ಬಿಡುತ್ತಾ ಸುಮ್ಮನೆ ಬಿದ್ದು ಬಿಡುವನು.)

ತಾರಾನಾಥ—(ಮೈ ಹಿಡಿದು ಅಲುಗಿಸಿ) ಸಂಜೀವ, ಸಂಜೀವ! ನಾನು ಏನನ್ನು ಕ್ಷಮಿಸಲಿ? ಇದೋ ಕ್ಷಮಿಸಿದೆ, ಕ್ಷಮಿಸಿದೆ. ಮಾತಾಡು. ಏಕೆ ಸುಮ್ಮನಿರುವೆ? (ಮರುಗುವನು. ತುಂಗಮ್ಮ, ಮನೋರಮೆಯರೂ ಮರುಗುವರು. ಆಗ ಸಂಜೀವನ ಕುಟುಂಬಸ್ಥರೆಲ್ಲ ಬಂದು, ಅವನ ಉಂಗುರ, ನೇವಾಳ, ಒಂಟಿಗಳನ್ನೆಲ್ಲಾ ತೆಗೆಯ ನೋಡುವರು) ಅಹ! ನಿಮಗೆ ಇಷ್ಟು ಅವಸರವೇನು? ಪೂರ್ಣ ಪ್ರಾಣಹೋಗುವವರೆಗಾದರೂ ಸಮಯವಿಲ್ಲವೆ?

ಕುಟುಂಬಿಕ—ನೀವು ತೆಗೆದುಬಿಟ್ಟರೆ?

ತಾರಾನಾಥ—ನಮಗೆ ನಿಮ್ಮ ಒಂದು ಕಡ್ಡಿಯೂ ಬೇಡ. ನೀವು ಈ ರೀತಿ ಗಡಿಬಿಡಿ ಮಾಡುವುದೂ ಬೇಡ. ಮೃತ್ಯು ತಲ್ಪದಲ್ಲಿ ಇಂತಹ ಗಲಾಟೆಮಾಡುವ ನೀವು ಮಾನವರೊ? ದಾನವರೊ?

ಕುಟುಂಬಿಕ—ಅದನ್ನೆಲ್ಲಾ ನಿಮ್ಮೊಡನೆ ಕೇಳುವುದಿಲ್ಲ. ನಮ್ಮ ಸೊತ್ತು ನಮಗೆ ಸಿಗಬೇಕು. ನಿಮಗೆ ಅವುಗಳಲ್ಲಿ ಹಕ್ಕಿಲ್ಲ. ಮನೋರಮೆ,

ಒಳಗಿನ ಕೋಣೆಯು ಬೀಗದ ಕೈ ಕೊಡು. (ಮನೋರಮೆಯು ಗಟ್ಟಿಯಾಗಿ ಮರುಗುವಳು.) ಮರ ಉರುಳಿತು, ಹಕ್ಕಿ ಹಾರಿತು. ನಿನಗಿನ್ನೇಕೆ ದುಃಖ? ಕೊಡು, ಬೀಗದ ಕೈ ಕೊಡು.

ತಾರಾನಾಥ—ಬೀಗದ ಕೈಯೂ ಈಗಲೇ ಬೇಕೆ? ಅನಂತರ ಕೊಟ್ಟರಾಗದೆ?

ಕುಟುಂಬಿಕ—ಈಕ್ಷಣ ಬೇಕು. ನಂತರಗಿಂತರ ಎಂದರಾಗದು. ನಿಮ್ಮ ಕಪಟವೆಲ್ಲಾ ನಡೆಯದು.

ತಾರಾನಾಥ—ತಂಗಿ, ಕೊಡು. ಅವರ ಬೀಗದ ಕೈಯನ್ನು ಅವರಿಗೆ ಕೊಡು. ಇನ್ನು ನಮಗೆ ಇಲ್ಲಿ ಏನೂ ಹಕ್ಕಿಲ್ಲ. (ಮನೋರಮೆಯು ದುಃಖಿಸುತ್ತಾ ಬೀಗದ ಕೈ ಕೊಡುವಳು) ಶಿವ! ಶಿವ! ಇದೆಂತಹ ರಾಕ್ಷಸೀ ಮನೋವೃತ್ತಿ! ಈ ಕುಟುಂಬದವರು ಯಮದೂತರಿಗಿಂತಲೂ ಕಟುಕ ಹೃದಯಿಗಳಾದರಲ್ಲ! ಪ್ರೇಮ! ಕರುಣೆ, ಕನಿಕರದ ಬಿಂದುಮಾತ್ರವಾದರೂ ಇವರಲ್ಲಿ ಇರುವುದೇ? ಇಂತಹ ಪೈಶಾಚಿಕ ತನಕ್ಕೆಕಾರಣವಾದ ಆ ಪದ್ಧತಿಗಾದರೂ ಏನೆನ್ನಬೇಕು? ಪ್ರಾಣವು ಪೂರ್ಣ ಹೋಗುವ ಮೊದಲೇ ಹೀಗೆ ಪೀಡೆಕೊಡುವವರು ರಣಹದ್ದುಗಳಿಗಿಂತಲೂ ಕಡೆಯಲ್ಲವೆ? ಮೃತನ ಪತ್ನೀಪುತ್ರರು ತಮ್ಮಂತೆಯೇ ಮಾನವರೆಂಬ ಕಲ್ಪನೆಯಾದರೂ ಇವರಿಗಿರುವುದೆ? ಛೆ! ಇಂತಹ ಪೈಶಾಚಿಕ ಸ್ಥಿತಿಗೆ ಕಾರಣವಾದ ಆ ಪದ್ಧತಿಗೆ ಶತ ಧಿಕ್ಕಾರವಿರಲಿ! ಈ ಅಸ್ವಾಭಾವಿಕ ದುಷ್ಟಪದ್ಧತಿಯಿಂದ ಪ್ರತಿಯೊಂದು ಮನೆಯಲ್ಲೆಂಬಂತೆ ಪುರುಷರು ಮೃತರಾದೊಡನೆಯೇ ನಡೆಯುತ್ತಿರುವ ಹೃದಯದ್ರಾವಕ ದೃಶ್ಯಗಳಿಂದಲಾದರೂ ಮನ ಕರಗದೆ? ಕುಟುಂಬ ಪ್ರೇಮದ ನಟನೆಯ ವಾದವನ್ನು ಮುಂದೊಡ್ಡುವ ಆ ಹೃದಯವಾದರೂ ಅದೆಂತಹ ಪಾಷಾಣವಾಗಿರಬೇಕು? (ಸುತ್ತಮುತ್ತ ಮುತ್ತುತ್ತಿರುವ ಕುಟುಂಬಿಕರ ಕಡೆಗೆ ತಿರುಗಿ) ಎಲೈ ಕುಟುಂಬಿಕರೇ, ತೆಗೆಯಿರಿ! ಏನು ಬೇಕಾದರೂ ತೆಗೆಯಿರಿ! ಬೇಕಾದರೆ ನಮ್ಮಲ್ಲಿ ಇದ್ದುದನ್ನೂ ಕಸುಕೊಳ್ಳಿರಿ! ನಮ್ಮನ್ನು ಮಾತ್ರ ಬಂದಹಾಗೆ ಹಿಂದೆ ಹೋಗಬಿಡಿರಿ!

೨೨ನೇ ದೃಶ್ಯ

[ಬೀದಿ-ತಾರಾನಾಥನು ಚಿಂತಾಮಗ್ನನಾಗಿ ಪ್ರವೇಶಿಸುವನು.]

ತಾರಾನಾಥ–ಸಂಜೀವನು ಪ್ರಾಣಹೋಗುವ ಕಾಲದಲ್ಲಿ, 'ಇಂದಿರೆ, ನೀನು ನಿರ್ದೋಷಿ! ತಾರಾನಾಥ, ಕ್ಷಮಿಸು ಕ್ಷಮಿಸು!' ಎನ್ನಲು ಕಾರಣವೇನು? ಇಂದಿರೆಯು ದೋಷಿಯಾಗಿರಲಿಕ್ಕಿಲ್ಲವೆಂದು ದಿನೇದಿನೇ ದೃಢವಾಗುತ್ತಿರುವ ನನ್ನ ಸಂದೇಹವು ನಿಜವಾಗಿರಬಹುದೇ? ಇದರಲ್ಲಿ ಸಂಜೀವನ ಒಳಸಂಚು ಏನೋ ಇರಬೇಕು! ಅಹ! ಅವನು ಎಲ್ಲವನ್ನೂ ವಿಶದವಾಗಿ ಹೇಳದೆ ಮೃತನಾದನಲ್ಲ! ಅಮ್ಮನೂ, ಮನೋರಮೆಯೂ ನಾನು ಎಷ್ಟು ಬಗೆಯಿಂದ ಕೇಳಿಕೊಂಡರೂ ಬಾಯಿಬಿಡರು. ಸಂಜೀವನ ಪ್ರಾಣೋತ್ಕ್ರಮಣ ಕಾಲದ ಅರ್ಥರಹಿತ ಉದ್ಗಾರವನ್ನು ನಾನು ಗಮನಿಸಬಾರದಂತೆ. ಆದರೆ, ಅವರೂ ಅದೇನೋ ಗುಪ್ತ ಚಿಂತಾಕುಲರಾಗಿರುವಂತಿದೆ. ಆಗಲಿ. ಆ ಸೋಮನನ್ನೇ ಕೇಳುವೆನು.

[ಮನೋಹರನು ಖೇದ, ಕೋಪಾತಿರೇಕದಿಂದ ಧಾವಿಸಿ ಬರುವನು.]

ಮನೋಹರ—ತಾರಾನಾಥ, ನಿರ್ದೋಷಿ ಸ್ತ್ರೀಯೊಬ್ಬಳನ್ನು ಕೊಂದೆಯಾ? ನನ್ನ ಮೇಲೂ ನಿನಗೆ ಸಂಶಯ ಹುಟ್ಟಿತೇ? 'ಸಂಶಯ ಪಿಶಾಚಿ'! ನೀನೀ ಸಂಗತಿಯನ್ನು ಬಾಯಿ ಬಿಟ್ಟಾದರೂ ಹೇಳಬಾರದಿತ್ತೇ? ಆಗ ನಾನು ನನ್ನ ಸರಳ ಹೃದಯವನ್ನಾದರೂ ಬಿಚ್ಚಿ ತೋರಿಸುತ್ತಿದ್ದೆ! ಈಗ ಇಂದಿರೆಯು ಮೃತ್ಯುಶಯ್ಯೆ ಹಿಡಿದಿರುವಳಂತೆ! ಕೊನೆಯ ಸಲ ನಿನ್ನನ್ನೊಮ್ಮೆ ನೋಡಬೇಕೆಂದು ತವಕಿಸುತ್ತಿರುವಳಂತೆ. ಹೇಗಾದರೂ ಮಾಡಿ ನಿನ್ನನ್ನು ಕರೆದು ತರಬೇಕೆಂದು ಅವಳ ತಂದೆಯೇ ಕಾಗದ ಬರೆದಿರುವರು.

ತಾರಾನಾಥ—ನಿನಗೆ ಹೆಚ್ಚು ಕಾಗದಗಳು ಬರಬಹುದು! ಅವಳು ನಿರ್ದೋಷಿಯೆಂಬುದಕ್ಕೆ ಆಧಾರವೇನು?

ಮನೋಹರ—ಅಹ! 'ಸಂಶಯ ಪಿಶಾಚಿ'ಯು ಎಂತಹ ಅದ್ಭುತ ಶಕ್ತಿಯುಳ್ಳದ್ದು! ಎಂತಹ ಆಪ್ತಮಿತ್ರರನ್ನಾದರೂ ಕ್ಷಣಮಾತ್ರದಲ್ಲಿ ಘೋರ ಶತ್ರುಗಳನ್ನಾಗಿ ಮಾಡುವುದು! ಎಷ್ಟೊಂದು ಪ್ರೀತಿಯ ದಾಂಪತ್ಯ

ವನ್ನಾದರೂ ಮುರಿದು ಬಿಡುವುದು! ತಾರಾನಾಥ, ನನ್ನ ಮಾತಿನಲ್ಲಿ ನಿನಗೆ ನಂಬಿಕೆಯಿಲ್ಲವೆ? ಇನ್ನೂ ನಿನ್ನನ್ನು 'ಸಂಶಯ ಪಿಶಾಚಿ'ಯು ಬಿಟ್ಟಿಲ್ಲವೇ?

ತಾರಾನಾಥ—ಅಪರಾಧಿಯ ಹೇಳಿಕೆಯಿಂದಲೇ ನ್ಯಾಯವನ್ನು ತೀರ್ಮಾನಿಸಲಾಗುವುದೇ?

ಮನೋಹರ—ಯಾರು ಅಪರಾಧಿ? ನಿರ್ದೋಷಿ ಮಿತ್ರನ ಮತ್ತು ನಿಷ್ಕಳಂಕ ಪತ್ನಿಯ ಮೇಲೆ ಅಲ್ಲಸಲ್ಲದ ಆರೋಪ ಹೊರಿಸುವ ನೀನಲ್ಲವೇ? ನಾನೇ? ತಾರಾನಾಥ, ನೀನು ಇಷ್ಟೊಂದು ಕಟುಕ ಹೃದಯಿಯಾಗಿರುವೆಯಾ? ಆಗಲಿ. ನನ್ನ ಮೇಲೆ ಆರೋಪ ಹೊರಿಸಿದವರಾರು? (ತಾರಾನಾಥನು ಸುಮ್ಮನಿರುವನು.) ಹೇಳು, ಯಾಕೆ ಸುಮ್ಮನಿರುವೆ? ಅದನ್ನೂ ಹೇಳಲಾರೆಯಾ?

ತಾರಾನಾಥ—ಸೋಮನು.

ಮನೋಹರ—ಸೋಮನು! ಅವನೆಲ್ಲಿರುವನು? ಬಾ, ಅವನನ್ನು ವಿಚಾರಿಸೋಣ. (ತಾರಾನಾಥನನ್ನು ಕೈಹಿಡಿದು ಕರೆದೊಯ್ಯುವನು.)

೨೩ನೇ ದೃಶ್ಯ

[ತಾರಾನಾಥನ ಮನೆ—ಮನೋರಮೆಯು ಭ್ರಾಂತಳಂತೆ ಚಿಂತಿಸುತ್ತಿರುವಳು.]

ಮನೋರಮೆ—(ಸ್ವಗತ) ಅಹ! ಇಂದಿರೆ! ಇಂದಿರೆ!! ನಾವು ನಿನಗೆ ಮಾಡಿದ ಅನ್ಯಾಯದ ಫಲವನ್ನು ಈಗ ನಾವೇ ಉಣ್ಣುತ್ತಿರುವೆವು. ಪತಿಯ ಮತ್ತು ಮಾತೆಯ ಮಾತುಕೇಳಿ ಸಾತ್ವಿಕಳಾದ ನಿನ್ನನ್ನು ನಾನೂ ತಿರಸ್ಕರಿಸಿದೆ! ಮನಬಂದಂತೆ ನಿಂದಿಸಿದೆ! ನಿನ್ನ ಸಚ್ಚಾರಿತ್ರ್ಯಕ್ಕೆ ಕಳಂಕ ಹಚ್ಚುವ ಒಳಸಂಚಿಗೂ ಸೇರಿದೆ! ನಿಮ್ಮಿಬ್ಬರ ದಾಂಪತ್ಯ ಜೀವನವು ಎಷ್ಟೊಂದು ಸುಖಮಯವಾಗಿತ್ತು! ಅದೆಷ್ಟು ಪ್ರೇಮಪೂರ್ಣವಾಗಿತ್ತು! ಅದನ್ನು ಕಣ್ಣು ತುಂಬಾ ಕಂಡು ಆನಂದಿಸುವ ಬದಲಿಗೆ ಅಸೂಯೆಗೊಂಡು, ಒಂದಿಷ್ಟು ದಯೆದಾಕ್ಷಿಣ್ಯವಿಲ್ಲದೆ ನಿನ್ನ ಸುಖವನ್ನು ಮಣ್ಣು

ಗೊಡಿಸಿದ ಮಹಾ ಪಾಪಿಗಳು ನಾವು! ಗರ್ಭಿಣಿಯಾದ ನಿನ್ನನ್ನು ಮನೆಯಿಂದ ಹೊರಹಾಕುವಂತೆ ಮಾಡಿದ ನರರಾಕ್ಷಸರು ನಾವು! ನಮಗೆ ಸುಖ ದೊರೆಯುವುದಾದರೂ ಹೇಗೆ? ಅಹ, ಇಂದಿರೆ! ನೀನೆಂತಹ ಸಂಕಷ್ಟಕ್ಕೀಡಾಗಿರುವೆಯೊ! ಗರ್ಭಿಣಿಯರಿಗೆ ಸರ್ವಸಾಮಾನ್ಯವಾದ ಸೀಮಂತ ಕೂಡಾ ನಿನಗಿಲ್ಲದೆ ಹೆರುವಂತಾಯಿತಲ್ಲ! ನಿನ್ನ ಹೃದಯವಾದರೂ ಅದೆಷ್ಟು ಕರಗಿಕೊರಗುತ್ತಿರಬೇಕು! ಇಲ್ಲ, ಇಂದಿರೆ, ಇಲ್ಲ, ನಿನ್ನ ಕುರಿತು ನಾವು ಮಾಡಿರುವ ಪಾಪಕ್ಕಿನ್ನು ಪ್ರಾಯಶ್ಚಿತ್ತವಿಲ್ಲ! ಒಂದೆಡೆ ವೈಧವ್ಯ ದುಃಖವು ನನ್ನನ್ನು ಸುಡುತ್ತಿದೆ. ಇನ್ನೊಂದೆಡೆ ನಿನಗೆ ಮಾಡಿದ ಅನ್ಯಾಯದ ಫಲವು ಶೂಲದಂತೆ ತಿವಿಯುತ್ತಿದೆ. ಇಂದಿರೆ, ನಿನ್ನ ಸುಖಕ್ಕೂ, ನಿನ್ನ ಪತಿಯ ಸುಖಕ್ಕೂ ಕೆಸರೆರಚಿದವರು ನಾವಲ್ಲವೆ? ನಿಮ್ಮಿಬ್ಬರ ದಾಂಪತ್ಯ ಜೀವನ ಲತೆಗೆ ಕತ್ತಿಯೇಟು ಹಾಕಿದ ಕಟುಕರೂ ನಾವಲ್ಲವೆ? ಅದರ ಫಲವಾಗಿಯೇ ನಾನೀಗ ವೈಧವ್ಯ ದುಃಖಕ್ಕೆ ತುತ್ತಾಗಿರುವುದಲ್ಲವೆ? ಇನ್ನೂ ನಾವು ಯಾವ ಯಾವ ಕಷ್ಟ ಪರಂಪರೆಗಳನ್ನು ಅನುಭವಿಸಲಿಕ್ಕಿರುವುದೊ! ಅದೋ, ಅಣ್ಣನು, ತೀವ್ರ ಸಂತಾಪಗೊಂಡು ಮನೋಹರನೊಂದಿಗೆ ಇತ್ತ ಬರುತ್ತಿರುವನು. ನನಗೀಗ ಅವನ ಮುಖವನ್ನು ಮುಖವೆತ್ತಿ ನೋಡಲೂ ಅಸಾಧ್ಯವಾಗಿರುವುದು. ಅವನನ್ನು ಕಂಡೊಡನೆಯೇ ನನ್ನ ಹೃದಯವು ಬಿರಿವಂತಾಗುವುದು. ನಾವು ಇಂದಿರೆಯ ಕುರಿತು ನಡೆಸಿದಪಾಪಕರ ಸಂಚಿನ ಸಂಗತಿಯನ್ನೆಲ್ಲಾ ಅಣ್ಣನಿಗೆ ತಿಳಿಸಿ ಆತನೊಡನೆ ಕ್ಷಮೆ ಬೇಡಬೇಕೆಂದು ನಾನು ಅಮ್ಮನೊಡನೆ ಬೇಡಿಕೊಳ್ಳುವೆನು (ಒಳಹೋಗುವಳು)

(ತಾರಾನಾಥನೂ ಮನೋಹರನೂ ಪ್ರವೇಶಿಸುವರು. ಮನೋಹರನು ಬಂದವನೇ ಒಳಗೆ ಹೋಗಿ ಸೋಮುನನ್ನು ಧರಧರನೇ ಎಳೆದು ತರುವನು.)

ಮನೋಹರ—(ಸೋಮುನ ರಟ್ಟೆಹಿಡಿದು) ನೀಚಾ, ನೀನು ನನ್ನ ಮತ್ತು ಇಂದಿರೆಯ ವಿಷಯದಲ್ಲಿ ಏನೇನು ಚಾಡಿ ಹೇಳಿರುವೆ? ಹೇಳು, ಹೇಳು; ಬೇಗ ಹೇಳು ಇಲ್ಲವಾದರೆ ನಿನ್ನನ್ನು ಈಗಲೆ ಕೊಂದು ಹಾಕುವೆನು.

ಸೋಮ – ಸ್ವಾಮಿ, ಕ್ಷಮಿಸಿರಿ, ಕ್ಷಮಿಸಿರಿ. ಪ್ರಾಣವನ್ನುಳಿಸಿ ಕೊಳ್ಳಲು ಆ ಕರುಣಾಳು ಇಂದಿರಮ್ಮನವರ ಕುರಿತು ಇಲ್ಲದ ಸುಳ್ಳು ಹೇಳಬೇಕಾಯಿತು.

ತಾರಾನಾಥ – ಏನು! ಸುಳ್ಳೇ? ಹಾಯ್! ಹಾಯ್! (ಬಿದ್ದು ಬಿಡುವನು. ತುಂಗಮ್ಮ, ಮನೋರಮೆಯರು ಓಡಿಬಂದು, ನೀರು ತಂದು ಹಣೆಗೆ ತಳಿಸಿ ಅವನನ್ನು ಉಪಚರಿಸುವರು. ಸ್ವಲ್ಪ ಹೊತ್ತಿನಲ್ಲಿ ಚೇತರಿಸಿ ಕುಳಿತುಕೊಳ್ಳುವನು.)

ಮನೋರಮೆ—ಅಣ್ಣಾ! ನಾವು ಮಾಡಿದ ಅಪರಾಧವನ್ನೆಲ್ಲಾ ಕ್ಷಮಿಸು.

ತಾರಾನಾಥ—(ಸಿಟ್ಟಿನಿಂದ) ಸರಿಯಿರಿ! ದೂರ ಸರಿಯಿರಿ! ಪಾಪಿಗಳೇ, ಕೊಲೆ ಪಾತಕಿಗಳೇ, ಸರಿಯಿರಿ! ನೀನು ನನ್ನ ತಂಗಿಯಲ್ಲ; ರಾಕ್ಷಸಿ! ಅಮ್ಮಾ! ಅಮ್ಮಾ! ನೀನು ನನ್ನ ಮಾತೆಯಲ್ಲ! ಸಾಕ್ಷಾತ್ ಪೂತನಿ' ನಡೆಯಿರಿ, ನನ್ನ ಇದಿರಲ್ಲಿ ನಿಲ್ಲಬೇಡಿರಿ. (ಇಬ್ಬರೂ ಹೋಗಿ ಬಿಡುವರು. ತಾರಾನಾಥನು ಮೊಣಕಾಲೂರಿ) ಮನೋಹರ, ಕ್ಷಮಿಸುವೆಯಾ? ಈ ಮಿತ್ರದ್ರೋಹಿಯನ್ನು,-ಆತ್ಮಘಾತಕಿಯನ್ನು,-ನಿರ್ದೋಷಿ ರಮಣಿಯ ಕೊಲೆಪಾತಕಿಯನ್ನು—ಕ್ಷಮಿಸುವೆಯಾ?

ಮನೋಹರ—ತಾರಾನಾಥ, ನಾನೇನು ಕ್ಷಮಿಸಲಿದೆ? ನೀನು ಮಹಾಪರಾಧ ಮಾಡಿದುದು ನಿನ್ನ ಪ್ರಿಯಪತ್ನಿ ಇಂದಿರೆಗೆ. ಸೋಮ, ಹೇಳು. ಸತ್ಯ ಸಂಗತಿಯನ್ನೆಲ್ಲಾ ತಿಳಿಸು. ನಿನಗೆ ಯಾವ ಭಯವೂ ಬೇಡ.

ತಾರಾನಾಥ – ನೀಚಾ! ದ್ರೋಹೀ! ನರಪಿಶಾಚೀ! ಹೇಳು, ನಿನ್ನನ್ನು ಪ್ರೇರೇಪಿಸಿದವರು ಯಾರು? ಹೇಳು. (ಸೋಮನಿಗೆ ಹೊಡೆಯಲು ಮುಂದರಿಯುವನು. ಆಗ ಮನೋಹರನು ತಡೆಯುವನು.)

ಸೋಮ—'ಕೊಲ್ಲುವೆ'ವೆಂದು ಕತ್ತು ಹಿಸುಕುವಾಗ ನಾನೇನು ಮಾಡಲಿ? ಸಂಜೀವ ಶೆಟ್ಟರೂ, ಅವರ ಸಂಗಾತಿ ಚಂದು ಶೆಟ್ಟಿಯೂ ನನ್ನ ಕುತ್ತಿಗೆ ಒತ್ತಿ ಹಿಡಿದು, ಕೊಲ್ಲುವೆವೆಂಬ ಬೆದರಿಕೆ ಹಾಕಿ ನನ್ನನ್ನು

ಸುಳ್ಳು ಹೇಳುವಂತೆ ಮಾಡಿದರು. ಅಷ್ಟೆ. ದಮ್ಮಯ್ಯ! ನನ್ನನ್ನು ಕ್ಷಮಿಸಿರಿ!

ತಾರಾನಾಥ—ಒಹೊ! ಈಗ ತಿಳಿಯಿತು! ಸಂಜೀವನು ಪ್ರಾಣೋತ್ಕ್ರಮಣ ಕಾಲದಲ್ಲಿ 'ಇಂದಿರೆ, ನೀನು ನಿರ್ದೋಷಿ! ತಾರಾನಾಥ, ಕ್ಷಮಿಸು, ಕ್ಷಮಿಸು!' ಎಂದು ಉದ್ಗರಿಸಿದ ರಹಸ್ಯವು ಈಗ ಸ್ಪಷ್ಟವಾಯಿತು. (ಪೇದೆಯು ಒಂದು ತಂತಿ ತಂದುಕೊಡುವನು. ಅದನ್ನು ಮನೋಹರನು ಒಡೆದು ಅವಸರದಿಂದ ಓದುವನು.)

ಮನೋಹರ—ಅಹ! ತಾರಾನಾಥ, ಸರ್ವನಾಶವಾಯಿತು! ನಡೆ ಹೋಗುವ. ನಾವು ಈಗಲೇ ಹೊರಡಬೇಕು ಉಡುಪಿಗೆ.

ತಾರಾನಾಥ—ಏನು! ಏನಾಯಿತು?

ಮನೋಹರ—ಇಂದಿರೆಯ ಕಾಯಿಲೆಯು ವಿಷಮವಾಗಿದೆಯಂತೆ. ನಿನ್ನನ್ನೇ ಅವಳು ಹಂಬಲಿಸುತ್ತಿರುವಳಂತೆ.

ತಾರಾನಾಥ—ಅಹ! ಘಾತಕಿ! ಏನು ಮಾಡಿದೆ? ನಾನು ಮಾನವನಲ್ಲ! ತಾರಾನಾಥನಲ್ಲ! 'ಸಂಶಯ ಪಿಶಾಚಿ!' ನಿಜವಾಗಿಯೂ 'ಸಂಶಯ ಪಿಶಾಚಿ!' ಮನೋಹರ, ನಡೆ, ಹೋಗುವ. ಜಗದೀಶ್ವರ, ಇಂದಿರೆಯನ್ನೊಮ್ಮೆ ಕಣ್ಣಿನಿಂದಲಾದರೂ ನೋಡುವ ಭಾಗ್ಯವು ಈ ಪಾಪಿಗೆ ದೊರೆಯುವಂತಾಗಲಿ.

೨೪ನೇ ದೃಶ್ಯ

[ತುಂಗಮ್ಮನು ಮನೆ ಸಮೀಪದ ಉದ್ಯಾನದಲ್ಲಿ ತನ್ನ ಒಂದೊಂದೇ ದುಷ್ಕೃತ್ಯಗಳನ್ನು ನೆನೆನೆನೆದು ಹುಚ್ಚಿಯಂತೆ ಮರುಗುತ್ತಿರುವಳು.]

ತುಂಗಮ್ಮ—(ಸ್ವಗತ) ನಾನು ನೆನೆದುದೊಂದು; ಆದುದು ಬೇರೊಂದು. ಹೀಗಾಗುವುದೆಂದು ಯಾರು ತಾನೆ ತಿಳಿದಿದ್ದರು? ತಾರಾನಾಥನು ಬೇಡಬೇಡನೆಂದು ಬೇಡಿ, ಕಾಡಿದರೂ ಕೇಳದೆ ನಾನಂದು

ಸಂಜೀವನ ದೌಲತ್ತಿಗೇ, ಬಾಹ್ಯಾಂಗಕ್ಕೇ ಮರುಳಾಗಿ ಅವನಿಗೆ ಮಗಳನ್ನು ಧಾರೆಯೆರೆದು ಕೊಟ್ಟೆ. ಅವನ ಅಂತರಂಗವನ್ನು ಶೋಧಿಸುವ ಗೋಜಿಗೆ ಹೋಗಲಿಲ್ಲ. ಈಗದರ ಫಲವಾಗಿ ನನ್ನ ಮಗಳು ನನ್ನ ಕಣ್ಣೆದುರಿಗೇ ವೈಧವ್ಯ ದುಃಖದಿಂದ ಕೊರಗುತ್ತಿರುವುದನ್ನು ನೋಡಬೇಕಾಗಿದೆ. ಇನ್ನು, ನಿರ್ದೋಷಿ ಇಂದಿರೆಯ ಮೇಲೆ ದ್ವೇಷಕಟ್ಟಿದೆ, ಆರೋಪ ಹೊರಿಸಿದೆ; ಮನೆಯಿಂದಲೂ ಹೊರಡಿಸಿದೆ. ನನ್ನ ಮಗನ—ಬಂಗಾರದಂತಹ ಮಗನ ಸುಖಕ್ಕೆ ಕಲ್ಲುಹಾಕಿದೆ! ನಾನು ಎಂತಹ ಪಾಪಾತ್ಮಳು! ಮಗಳ ಸುಖವನ್ನು ಮಣ್ಣುಗೂಡಿಸಿದೆ; ಮಗನ ಸುಖವನ್ನು ಹಾಳುಮಾಡಿದೆ! ಹಾಯ್! ನಾನೆಂತಹ ಹುಚ್ಚಿಯು! ದೇವರು ದಿಂಡರೆಂದು ಎಷ್ಟು ಹಣವನ್ನು ವ್ಯಯಿಸಲಿಲ್ಲ? ಈ ಕಷ್ಟಕಾಲದಲ್ಲಿ ಆ ದೇವರೆಲ್ಲಿ? ಎಷ್ಟು ಹರಕೆ ಹೇಳಿಕೊಂಡರೂ ಅವನು ಸಂಜೀವನನ್ನು ಬದುಕಿಸಿದನೇ? ಇಲ್ಲ! ದೇವರಿಲ್ಲ! (ಯೋಚಿಸಿ) ಅಲ್ಲ, ದೇವರಿದ್ದಾನೆ. ಆದರೆ ನಮ್ಮಂತಹ ದುಷ್ಟರಿಗೆ ಅವನು ಸಹಾಯಮಾಡುವುದಿಲ್ಲ! ಅವನು ಶಿಷ್ಟ ರಕ್ಷಕನು; ದುಷ್ಟ ಶಿಕ್ಷಕನು. ಹಾಯ್! ಆಟ್ಟ ಮೇಲೆ ಒಲೆ ಉರಿಯಿತು; ಕೆಟ್ಟ ಮೇಲೆ ಬುದ್ಧಿ ಬಂತು. ಆದರೆ ಮಾಡುವುದೇನು? ಈಗ ಇಂದಿರೆಯೂ ಮೃತ್ಯುಶಯ್ಯೆಯಲ್ಲಿರುವಳಂತೆ! ಚಿಂತೆಯೇ ಅವಳ ರೋಗಕ್ಕೆ ಕಾರಣವಾಗಿರಬೇಕು. ಅಯ್ಯೋ! ಅಂದು ನಾನು ಅವಳಿಗೆ ಕೊಟ್ಟ ಪೀಡೆಯೇ! ಅದರ ಸಿಂಹಾವಲೋಕನಮಾಡುವಾಗ ನನ್ನ ಕಣ್ಣು ಉಕ್ಕಿಬರುತ್ತದೆ. ಅವಳನ್ನು ಏನೆಲ್ಲಾ ಹೇಳಿ ಬೈಯಲಿಲ್ಲ! ನಿರ್ದೋಷಿಯಾದ ಅವಳ ಮೇಲೆ, ಅವಳ ಪಾತಿವ್ರತ್ಯದ ಮೇಲೆ ಎಂತಹ ಕಳಂಕವನ್ನು ಒಡ್ಡಿದೆವು! ಇದನ್ನು ನೆನೆಯುವಾಗ ನನ್ನ ಮೈಯು ನಡುಗುತ್ತಿದೆ. ದೇವಾ! ನನ್ನಂತಹ ಪಾಪಿಷ್ಠೆಗೆ ನರಕದಲ್ಲಾದರೂ ಸ್ಥಾನಸಿಗುವುದೆ? ಈ ಲೋಕದಲ್ಲಂತೂ ನನಗೆ ಎಡೆಯಿಲ್ಲ. ಸಮಾಜದಲ್ಲಿ ಸ್ಥಳವಿಲ್ಲ. ನನ್ನಂತಹ ದುಷ್ಟಮಾತೆಯು ಬದುಕಬಾರದು. ನನ್ನಂತಹ ಅತ್ತೆಯು ಈ ಲೋಕದಲ್ಲಿರಬಾರದು. ದೇವ, ನನ್ನನ್ನು ಇನ್ನೂ ಏಕೆ ಬದುಕಿಸಿರುವೆ? ನನ್ನ ಪಾಪದ ತಂಬಿಗೆಯು ಸಂಪೂರ್ಣ ತುಂಬಲಿಲ್ಲವೆ?

೨೫ನೇ ದೃಶ್ಯ

[ಮನೆ—ಇಂದಿರೆಯ ಪ್ರಾಣೋತ್ಕ್ರಮಣ ಕಾಲದಲ್ಲಿ ಮನೋಹರ, ತಾರಾನಾಥ, ಶ್ರೀನಿವಾಸ ಶೆಟ್ರು ಮತ್ತು ಇನ್ನು ಕೆಲವರು ಅವಳ ಬಳಿ ಕಣ್ಣೀರಿಡುತ್ತಾ ಕುಳಿತಿರುವರು.]

ಇಂದಿರೆ—ಪ್ರಿಯಕರ, ಈಗ ನನ್ನ ಪ್ರಾಣೋತ್ಕ್ರಮಣ ಕಾಲವಾದರೂ ಅತಿ ಸಂತೋಷದ ಕಾಲ.

ತಾರಾನಾಥ—ಇಂದಿರೆ, ಇಂದಿರೆ! (ಕಂಠ ಬಿಗಿದು ಸುಮ್ಮನಾಗುವನು.)

ಇಂದಿರೆ—ನಾಥಾ, ನೀವಿನ್ನು ಚಿಂತಿಸಿ ಫಲವಿಲ್ಲ. ನಾನು ನನ್ನ ಅಂತ್ಯಕಾಲದಲ್ಲಿ ನಿಮ್ಮನ್ನು ನೋಡುವಂತಾಗಿ, ನಾನು ನಿರ್ದೋಷಿಯೆಂಬುದನ್ನು ಈಗಲಾದರೂ ನೀವು ಕಂಡುಕೊಳ್ಳುವಂತೆ ಆದುದಕ್ಕಿಂತ ಹೆಚ್ಚಿನ ಭಾಗ್ಯವನ್ನೇನೂ ಆಶಿಸಲಾರೆನು. ನನ್ನ ಮನಸ್ಸು ಆನಂದಗೊಂಡಿರುವುದು. (ಮನೋಹರನೊಡನೆ) ಅಣ್ಣಾ, ಕಾರ್ಮುಗಿಲಿನಿಂದ ಆವರಿತ ದಿನಕರನ ಸಾದೃಶ್ಯವನ್ನು ನೀನು ಅಂದು ಹೇಳಿದುದು ನೆನಪಿದೆಯೇ?

ಮನೋಹರ—ಹಾ! ಇಂದಿರೆ, ನಿನ್ನಂತಹ ನಿಷ್ಕಳಂಕಿನಿಯೂ ಈ ರೀತಿ ಪರ್ಯವಸಾನ ಹೊಂದಬೇಕಾಯಿತೇ!

ಇಂದಿರೆ—ನಿಷ್ಕಳಂಕಿನಿಯಾಗಲಿ, ಕಳಂಕಿನಿಯಾಗಲಿ, ಒಂದು ದಿವಸ ಪರ್ಯವಸಾನ ಹೊಂದಬೇಕಲ್ಲವೆ? ಕಳಂಕಿನಿಯು ಕಲುಷಿತೆಯಾಗಿ ಸಾಯುವಳು. ನಿಷ್ಕಳಂಕಿನಿಯು ಹರುಷಿತೆಯಾಗಿ ಮೃತ್ಯುವಶಳಾಗುವಳು.

ತಾರಾನಾಥ - ಇಂದಿರೆ, ಈ ಪಾಪಿಯನ್ನು--ಸಂಶಯ ಪಿಶಾಚಿಯನ್ನು ಕ್ಷಮಿಸುವೆಯಾ! ದೇವರೇ ಈ ನಿರ್ಮಲೆಯ—ಸಚ್ಚರಿತೆಯ—ಪ್ರಾಣವನ್ನೊಮ್ಮೆ ಉಳಿಸು! ಅದರ ಬದಲಿಗೆ ಈ ವಿಶ್ವಾಸಘಾತಕಿಯ—ನಿರ್ದೋಷಿರಮಣಿಯ ಮರಣಕಾರಕನ—ಪ್ರಾಣವನ್ನು ಬಲಿಯಾಗಿ ತೆಗೆದುಕೋ!

ಇಂದಿರೆ—ಇದೇನು ಮಾತು? ನಾನು ಅಮಂಗಲೆಯಾಗಿ, ಜೀವನ್ಮೃತೆಯಾಗಿರುವುದಕ್ಕಿಂತ ಸುಮಂಗಲೆಯಾಗಿ ಸಾಯುವುದೇ ಸೌಭಾಗ್ಯ

ವಲ್ಲವೆ? ನಿಮ್ಮನ್ನು ನಾನು ಮೊದಲೇ ಕ್ಷಮಿಸಿರದಿದ್ದರೆ ಇಲ್ಲಿಗೆ ಕರೆ ಸುತ್ತಿದ್ದೆನೆ?

ತಾರಾನಾಥ – ಪ್ರಿಯೆ, ನೀನು ಮೃತಳಾದ ಮೇಲೆ ನಾನೀ ಬಾಳನ್ನು ಹೇಗೆ ಇಟ್ಟುಕೊಳ್ಳಲಿ? ನಿನ್ನನ್ನು ಕೊರಗಿಸಿ, ಕರಗಿಸಿ ಕೊಂದ ಪಾಪವಾದರೂ ನನ್ನನ್ನು ಬೇಗನೆ ಮೃತ್ಯುವಶಮಾಡಲಿ. ನಾನೂ ನಿನ್ನ ಬೆನ್ನು ಹಿಡಿದೇ ಬರುವಂತಾಗಲಿ.

ಇಂದಿರೆ— ಪ್ರಿಯಕರ, ನಿಮ್ಮ ಪ್ರತಿಮೂರ್ತಿಯನ್ನು ನಿಮ್ಮ ರಕ್ಷಣೆ ಗೊಪ್ಪಿಸುವೆನು. ಆ ವಿಷಯದಲ್ಲಿ ತಂದೆಯಾದ ನಿಮಗೆ ನಾನು ಏನೂ ಹೇಳಬೇಕಾಗಿಲ್ಲ. ಇಷ್ಟೇ ನನ್ನ ಕೊನೆಗಾಲದ ಆಶೆಯು. ಜೀವನದ ಕಾರ್ಯಕಲಾಪಗಳೆಲ್ಲಾ ನಮ್ಮ ನಿರೀಕ್ಷಣೆಯಂತೆ ನಡೆಯುವವೇ? ಎಲ್ಲವೂ ಆ ಜಗನ್ನಿಯಾಮಕನ ನಿಯಮದಂತೆ ನಡೆಯುವುದರಿಂದ ನಾವು ಆದುದೆಲ್ಲಾ ಒಳ್ಳೇದೆಂದು, ಧೃತಿಗೆಡದೆ ಮುಂದುವರಿಯುವುದರಲ್ಲಿ ಪುರುಷಾರ್ಥವಿದೆ. ನಿಮ್ಮ ಈ ಮಗುವನ್ನು ರಕ್ಷಿಸಿರಿ. ನೀವು ಇನ್ನೂ ಯೌವನ ಪ್ರಾಯದವರಿರುವಿರಿ. ನನ್ನನ್ನು ಮರೆತು ಇನ್ನೊಂದು ಮದುವೆಯಾಗಿ ಸುಖವಾಗಿರಬೇಕೆಂದೇ ನನ್ನಿಚ್ಛೆ.

ತಾರಾನಾಥ – ಇದೇನು ಮಾತನಾಡುವೆ? ಇನ್ನು ನನಗೆ ಮದುವೆ ಎಂದರೆ ಮಸಣವು! ಅದನ್ನೇ ನಾನು ಕ್ಷಣಕ್ಷಣ ನಿರೀಕ್ಷಿಸುತ್ತಿರುವೆನು.

ಇಂದಿರೆ – ಅಣ್ಣಾ, ಆಯಿತು! ನನ್ನ ಜೀವನದ ಕೊನೆಯ ಕಾಲವು ಸಮೀಪಿಸಿತು. ನೀವಿಬ್ಬರೂ ನನ್ನೆದುರಿಗೆ ಬಂದು ಕುಳಿತುಕೊಳ್ಳಿರಿ. ಕೊನೆಯ ಸಲ ನಿಮ್ಮಿಬ್ಬರ ಮುಖವನ್ನು ನೋಡುವ ಆತುರವಿರುವುದು. (ಇಬ್ಬರೂ ಎದುರು ಕುಳಿತುಕೊಳ್ಳುವರು. ಅವರನ್ನೇ ಎವೆಇಕ್ಕದೆ ನೋಡುತ್ತಾ) ಪ್ರಿ....ಯಾ! ಪ್ರಿ....ಯಾ! (ಪ್ರಾಣಬಿಡುವಳು. ಎಲ್ಲರೂ ಮರುಗುವರು.).

ತಾರಾನಾಥ— ಹಾ! ಇಂದಿರೆ! ಇಂದಿರೆ! ಹಾ! (ದೊಪ್ಪನೆ ಬೀಳುವನು. ಮನೋಹರನು ಗಾಳಿ ಹಾಕಿ ಉಪಚರಿಸುವನು. ಸ್ವಲ್ಪ ಸಮಯದಲ್ಲಿ ಜಗ್ಗನೆದ್ದು ಭ್ರಾಂತನಂತೆ) ಮನೋಹರ! ಬಿಡು ನನ್ನನ್ನು! ನಾನೂ ಈಗಲೇ ಈ ತುಚ್ಛ ಶರೀರಬಂಧನದಿಂದ ಬಿಡುಗಡೆ ಹೊಂದಿ ನನ್ನ ಪ್ರಿಯತಮೆಯನ್ನು ಸೇರುವೆನು. ಹಾ! ಇಂದಿರೆ! ಒಬ್ಬಳೇ ಹೋದೆಯಾ!

ಮನೋಹರ — ತಾರಾನಾಥ! ಏಕೆ ಭ್ರಾಂತನಂತೆ ಹಂಬಲಿಸುವೆ? ಇದೀಗ ಲೋಕದ ರೀತಿ! ವಿಚಾರಿಸಿದರೆ ಇದಕ್ಕಿಂತಲೂ ದುಃಖಕರವಾದ ವಿಷಾದಾಂತ ನಾಟಕಗಳು ಕ್ಷಣ ಕ್ಷಣವೆಂಬಂತೆ ಲೋಕ ನಾಟಕ ಶಾಲೆಯಲ್ಲಿ ಪ್ರದರ್ಶಿಸಲ್ಪಡುತ್ತಿವೆ. ಅವುಗಳಿಂದೆಲ್ಲಾ ಧೃತಿಗೆಡದೆ ತನ್ನ ಕರ್ತವ್ಯವಾದುದನ್ನು ಮಾಡುವುದರಲ್ಲಿ ದೀಕ್ಷಾಬದ್ಧವಾಗಿರುವುದೇ ಪುರುಷಾರ್ಥವು. ಆದುದರಿಂದ ಚಿಂತೆಯನ್ನು ಬಿಟ್ಟು ಅವಳ ಆತ್ಮಕ್ಕೆ ಶಾಂತಿಯನ್ನುಂಟುಮಾಡು.

ಈ ನಾಟಕದ ಪದ್ಯಾವಳಿ

(ಸಂದರ್ಭವರಿತು ಸೇರಿಸಿಕೊಳ್ಳುವುದು.)

* * *

ರಾಗ: ಸಾರಂಗ—ತ್ರಿತಾಳ.

೧ ವಂದೇ ಮಾತರಂ |
ಸುಜಲಾಂ ಸುಫಲಾಂ ಮಲಯಜಶೀತಲಾಂ ||
ಸಶ್ಯಶ್ಯಾಮಲಾಂ ಮಾತರಂ || ವಂದೇ ||
ಶುಭ್ರಜ್ಯೋತ್ಸ್ನಾ ಪುಲಕಿತ ಯಾಮಿನೀಂ ||
ಪುಲ್ಲಕುಸುಮಿತ ದ್ರುಮದಳ ಶೋಭಿನೀಂ ||
ಸುಹಾಸಿನೀಂ ಸುಮಧುರಭಾಷಿಣೀಂ ||
ಸುಖದಾಂ ವರದಾಂ ಮಾತರಂ ॥ ವಂದೇ ॥

ರಾಗ. ಮಿಶ್ರತಿಲಂಗ –ತಾಳ ದಾದರ

೨ ಶ್ಯಾಮಸುಂದರ ಮದನಮೋಹನ ।
ಶ್ಯಾಮಸುಂದರ ಮದನಮೋಹನ || ಪ ||
ಕುವರೀ ಸಂಗ ಪ್ರೀತಕೀನೋ |
ಅಬಮ ಸೂಂ ಗೋಕುಲ ರಹುಂ ಹೋನಜಾಯೆ ||
ಗೋಕುಲರೀತಿ ತಾಂಡಕೀನೊ ।
ಮಥುರಾಮೆನ್ಯಾಹಲೇನೊ | ಧ್ಯಾಯೆ ಧ್ಯಾಯೆ ಗಾಯೆ ಗಾಯೆ ||
ಅಬಮ ಸೂಂ ಗೋಕುಲ ರಹುಂ ಹೋನಜಾಯೆ ||

ರಾಗ: ತಿಲಕ, ಕಾಮೋದ್—ತ್ರಿತಾಳ

೩ ನಮಸ್ತೆ ಮತ್ಪ್ರಾಣನಾಥ ಜಗನ್ನಾಥ |
ಸಮಾನರಹಿತ ಮಾಧವ |
ಕೃಪಾಮಹಿಮ ಸುಮಂತ್ರಗಮ || ನಮಸ್ತೆ ||
ಆಗಮಾಂತ ಸಂಚಾರ | ಆನಂದ ಶುಭಾಕಾರ |
ಸಾಗರಗಂಭೀರ | ಸಂಸಾರರಹಿತ ಮಧುಚರಣ |
ಭಾಗವತ ವನಥೀತ | ಪಂಡಿತ ಪಾತ್ರಾ || ನಮಸ್ತೆ ||

ರಾಗ: ಕಾನಡ

೪ ಇದು ಮಂದಾನಿಲನುತ್ತಮ |
ಸದನವೋ ಬಳ್ಳಿಗಳ ನೃತ್ಯಭವನವೊ ನೋಡಲ್ |
ಮದನನ ಚಕ್ರಗೃಹವೋ ।
ಮೇಣಿದು ಅತಿ ವಿರಹಿಗಳ ಬಂದೇಸ್ಥಳವೋ ॥

ರಾಗ: ತೋಡಿ

೫ ವಾರಿಧಿತಳದೆ ರತ್ನಂಗಳ್ |
ತೊರದಡಗೀರ್ಪಂತೆ ಮೇಣ್ ಕಾನನದೊಳ್ |
ಸಾರ ಸುಮವರಳಿಬೀಳ್ವಂತೆ |
ಲೋಕದೊಳೀಸು ಪ್ರತಿಭೆಯಿದೀರ್ಪುದು ಮರೆಯೊಳ್ ॥

ರಾಗ: ಕಮಾಚ್ ಮಾಂಡ — ತಾಳ ದಾದರ

೬ ಪ್ರಾಣವಿಕಾಸ । ದಯಾಕರನೆ ನಾಥ |
ಪ್ರಭು ಸರ್ವಸಾಕ್ಷಿ | ವರ ಪ್ರೇಮಮೂರ್ತಿ ॥
ನೀಡುಪ್ರಾಣೇಶ । ಪ್ರೇಮಃಪ್ರಸಾದ ॥ ಪ್ರಾಣ ॥

ರಾಗ:

೭ ಆರೀನಾರೀಮಣಿ | ಮಾರನರಗಿಣಿ |
ಮಾರನಿಗೆನ್ನ ತನು | ಸೂರೆಯ ಗೈದಿಹಳ್ ॥ ಆರೀ ॥
ಸಾಟಿಯು ಕಾಣೆ ವಧುವಿಗೆ ಧರೆಯೊಳು |
ಮೀಂಟುತಿಹಳು ಮನ್ಮಾನಸವಾ ॥

ರಾಗ: ಬೀಮ್ ಪಲಾಸ್

೮ ಚಿಂತೆಯಿದೇಕೆ ಈ ತೆರದೆ ತಾರಾನಾಥ |
ಅರ್ಥಿಯಿರೊಳಿರದೆ ಅನುದಿನದೆ ॥ ಚಿಂತೆ ॥
ವೀರಧೀರ ಆಪ್ತನಿರಲು ನಾ |
ಸುಖ ಸ್ವರ್ಗವನೆ | ಸೂರೆಯುಗೈವೆ ॥ ಚಿಂತೆ ॥

ರಾಗ: ಬೇಗಡೆ

೯ ಅತಿಪರಿಚಯದಿಂದವಜ್ಞೆ |
ಅಪರಿಚಯಕೆ ನವಾಕರ್ಷಣಂ ಜಗದೊಳೆಲ್ಲಂ ||
ಅನುದಿನ ಬೆಳಗುವ ರವಿಯಂ ।
ಗಮನಿಪರಾರೈ ಧೂಮಕೇತು ಉದಿಸಲೇನುತ್ಸುಕತೆ ಜನರೊಳ್ ॥

ರಾಗ: ಅಡಾಣ — ತ್ರಿತಾಳ

೧೦ ದಾರಿಯಿದು ಕಡು । ಮೂಢರ ವಂಚಿಪ ದಾರಿ ॥
ಪಾಪವಿದೂರ । ಪಾವನರೆನುವ ॥
ಭ್ರಾಂತಿಯ ಬೀರಿ | ಮಾನ್ಯತೆ ಪಡೆವ ॥ ದಾರಿ ॥

ರಾಗ: ಮಲಯ ಮಾರುತ — ಆದಿತಾಳ

೧೧ ಭಾಗ್ಯಹೀನನಾದೆ | ಗೃಹಸೌಖ್ಯದ ॥
ಜನ್ಮದಾತೆಯೆ | ಪ್ರೇಮಹೀನಳಾಗೆ ॥
ಪ್ರೇಮಮೂರ್ತಿ ಪ್ರಿಯೆ | ತಾಪಪಡುವುದನ್ನೆ ॥
ತಾಳಲೆಂತು ನಾ | ನೋಡುತನುದಿನ ॥ ಭಾಗ್ಯ ॥

ರಾಗ: ಮಿಶ್ರಕಾಪಿ — ತ್ರಿತಾಳ

೧೨ ಶಾಂತಿ ಸೌಖ್ಯಸಾರಭೂತ । ಶಾಂತಿ ಸೌಖ್ಯಸಾರಭೂತ ।
ಶಾಂತಸುಖವಿದು ॥
ಏನುಸೊಬಗು ನೋಡೆ | ಮನ ಸೂರೆಗೊಂಬುದೀಸಂಜೆ ॥
ಜಗದೀಶ ಮಹಿಮೆಗೇನೆನುವೆ | ಶಾಂತಸುಖವಿದು ॥

ರಾಗ: ಕಾಪಿ, ಸಿಂಧುರೆ — ತಾಳ ದಾದರ

೧೩ ಉದಯಶಿಖರ ಸೂರ್ಯ । ಜಗದೊಳತಿ ತೋಷ ಬೀರ್ವ |
ದಿನಪಾಸ್ತಮ ನಿಸ್ತೇಜ | ಉದಿಸುವುದು ವೈರಾಗ್ಯ ॥
ಇದುವೆ ಲೋಕದೊಳಗಖಿಲ | ಜೀವಿತ ಸ್ವಭಾವಗುಣ |
ಪ್ರತಿಕ್ಷಣ ಪರಿವರ್ತನವೀ|ಜಗದೊಳೇನು ಸ್ಥಿರವಿಹುದು ನೋಡಲು॥

ರಾಗ: ಕಾಪಿ, ಭಾಗೆಶ್ರೀ—ತ್ರಿತಾಳ

೧೪ ಪ್ರಿಯಕರ ಕೊರಗುತಿಹ | ವ್ಯಥೆಯೊಳತಿ || ಪ್ರಿಯಕರ ||
ಏನುದೋಷವ | ಗೈದೆನೋ ಹಾ || ಪ್ರಿಯಕರ ||
ಗೂಢವಿಷಾದದೆ | ಪ್ರಾಣೇಶ ||
ತಪಿತ ಹೃದಯ ಸುಖ ಶಾಂತಿಹೀನ ॥ ಪ್ರಿಯಕರ ॥

ರಾಗ: ಭೈರವಿ, ದೀವಾ—ತ್ರಿತಾಳ

೧೫ ಸಾಕು ಸುಖವಿದು | ನೆರೆ ಸಾಕು ಸುಖವಿದು |
ಪತಿ ಸುಖಭಾಗ್ಯ | ಹೀನ ಜೀವಿತ |
ಅಗಲುತಲೆನ್ನ | ಅತಿ ಸುಖದಿಂದ |
ಬಾಳಿ ತೋಷ | ಪಡೆಯಲಿ ಸತತ ||
ನಾನೆ ಸೌಖ್ಯ ಪರಿತ್ಯಾಗದಿ ಬಾಳ್ವೆ || ಸಾಕು ||

ರಾಗ: ಮುಲ್ತಾನಿ-ತ್ರಿತಾಳ

೧೬ ಸಂಶಯ ತಳಮಳಿತ | ಮಾನಸ | ಸಂಶಯ ತಳಮಳಿತ ||
ದೋಷಿಯೋ ನಿರ್ದೋಷಿಯೋ ಹಾ || ಸಂಶಯ ||
ದೋಷರಹಿತೆ ಎನ್ನ | ಪ್ರಿಯೆಯೆಂಬುವ ಮನ ||
ಪ್ರೇರಣೆಯದು ಬಲವಾದುದೆ ಹಾ || ಸಂಶಯ ||

ರಾಗ: ಯಮುನ್—ತ್ರಿತಾಳ

೧೭ ದೇವ ಅಘಹರ | ಶುಭಕರ ॥
ಹೃದಯ ಸರೋಜ | ದಿನಪವಿಕಾಸ |
ನಿರುಪಮಗುಣ | ಶರಣಪ್ರೇಮ ದಯಾಶರಧಿ ||
ಅಮಲರೂಪ | ಜಗದೀಶ ಸಂಕಟ |
ಪರಿಹರ ಪಾವನ | ಪರಮ ಪುರುಷ ಘನ ||

ರಾಗ: ಯಮನ್-ತ್ರಿತಾಳ

೧೮ ಸುಖವಿಹುದೆನುವುದೆ | ಲೋಕದೆ ಭ್ರಾಂತಿ ।
ಲೋಕವದೊಂದು ಅಂಧನಿಯಮದೆ |
ಉರುಳುವ ಯಂತ್ರವೆ ನೋಡೆ ॥
ಏನಿಹುದು ನರಗೊಂಬೆಯ ಸ್ವೇಚ್ಛೆ |
ಸಾರರಹಿತವೀ ಲೋಕಸೂತ್ರ ॥

ರಾಗ: ಮಾಲಕಂಸ್—ತ್ರಿತಾಳ

೧೯ ಮಂಗಳ ಮಹಿಮ | ಲೋಕೇಶನೆ |
ಮಂಗಳ ರೂಪ | ಮಂಗಳ ನಾಮ |
ಮಂಗಳದಾಯಕ | ಮಂಗಳವೀಯೋ ॥
ಲೋಕದಿ ನಿಜ ಪ್ರೇಮವ ನೆಲೆಗೊಳಿಸಿ ||
ಈಶನೆ ಮಂಗಳಮಯಗೊಳಿಸುವದೈ || ಮಂಗಳ ||

(ಈ ಪದಗಳ ರಾಗಗಳನ್ನಿತ್ತ ಹಾರ್ಮೋನಿಯಮ್ ಮಾಸ್ಟರ್ ಶ್ರೀ। ಎ. ಬಾಬು, ಮಂಗಳೂರು ಇವರಿಗೆ ಪ್ರಕಾಶಕರು ಅಭಾರಿಗಳಾಗಿರುತ್ತಾರೆ.)

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ) ಪ್ರಹಸನ	0	4
ಸಂಶಯ ಪಿಶಾಚಿ	(ಕೆ. ಕೆ. ಶೆಟ್ಟಿ) ನಾಟಕ	0	10
ನಾಡ ಕತೆಗಳು	(ಕಥಾ ಸಂಕಲನ)	0	3
ಕುಶಲವ	(ಕೆ. ಕೆ. ಶೆಟ್ಟಿ) ನಾಟಕ	0	8
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಕಲನ)	1	8
ಮಧುವನ	(ಕಥಾ ಸಂಕಲನ)	3	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ) ಪ್ರಬಂಧ	0	4
ವ್ಯಭಿಚಾರಿಣಿ ಯಾರು	(,,) ನಾಟಕ	1	0
ಹೆಂಡ್ತಿ ಗಂಡನಾದರೆ	(,,) ಪ್ರಹಸನ	0	4
ಪುರುಷ ವಧು	(,,) ,,	0	4
ಸನ್ಯಾಸಿಯ ಸೋಗಿನಲ್ಲಿ	(,,) ಕಾದಂಬರಿ	0	12
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸರಾವ್) ಕಥಾ ಸಂಗ್ರಹ	0	14
ದೇಶ ಭಕ್ತ	(ಕೆ. ಕೆ. ಶೆಟ್ಟಿ) ನಾಟಕ	1	4
ಪ್ರೇಮ ವಿಜಯ	(,,) ನಾಟಕ	1	0
ರಂಗ ಭೂಮಿ	(ಎಸ್. ವೆಂಕಟರಾಜ) ನಾಟಕ	0	10
ಸೇವಾಪಥ	(ಶೇಟ್ ಗೋವಿಂದ ದಾಸ) ನಾಟಕ	0	8
ನಾರೀ ಹೃದಯ	(ಶಿವರಾಣಿ ದೇವಿ) ಕಥೆಗಳು	1	8
ಭಾರತೀಯ ಕಥೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	1	12
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ) ನಾಟಕ	2	8
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	1	4
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ) ಕತೆಗಳು	1	4
ಅನ್ನ ದೇವರು ಮತ್ತು ಇತರ ಕಥೆಗಳು	(ಕಯ್ಯಾರ ಕಿಞ್ಞಣ್ಣ ರೈ)	1	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0
ವಿಷ್ಣುವಿನ ದಶಾಪರಾಧ ಅರ್ಥಾತ್ ದಶಾವತಾರ	(ಎಂ. ವಿ. ಹೆಗ್ಡೆ)	0	12
ಆಕಾಶ ಗಂಗೆ	(ಎಸ್. ವೆಂಕಟರಾಜ) ಕತೆಗಳು	1	12
ಸ್ವಾತಂತ್ರ್ಯ ವೀರ ಸಾವರಕರರು	(ಇಂದಿರಾಬಾಯಿ)	1	4

Navayuga Press, Udipi. 500/ 7-1957